SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:7, Pages:56
February- 2023, Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಫೆಬ್ರವರಿ 2023
ಬೆಲೆ ರೂ. 20/-



ಶ್ರೀನಿವಾಸಮಂಗಾಪುರಂ
ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
2023 ಫೆಬ್ರವರಿ 11 ರಿಂದ 19 ರ ವರೆಗೆ

# ತಿರುಮಲೆ ತಿರುಪತಿ ದೇವಸ್ಥಾನಗಳು



## ಶ್ರೀನಿವಾಸಮಂಗಾಪುರಂ
## ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2023 ಫೆಬ್ರವರಿ 11 ರಿಂದ 19 ರ ವರೆಗೆ**

**11-02-2023 ಶನಿವಾರ**
ಹಗಲು: ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ

**12-02-2023 ಭಾನುವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**13-02-2023 ಸೋಮವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**14-02-2023 ಮಂಗಳವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**15-02-2023 ಬುಧವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**16-02-2023 ಗುರುವಾರ**
ಹಗಲು: ಹನುಮದ್ವಾಹನ,
ರಾತ್ರಿ: ಗಜವಾಹನ

**17-02-2023 ಶುಕ್ರವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**18-02-2023 ಶನಿವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**19-02-2023 ಭಾನುವಾರ**
ಹಗಲು: ಚಕ್ರಸ್ನಾನ,
ರಾತ್ರಿ: ಧ್ವಜಾವರೋಹಣ.



## ತಿರುಪತಿ
## ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2023 ಫೆಬ್ರವರಿ 11 ರಿಂದ 20 ರ ವರೆಗೆ**

**11-02-2023 ಶನಿವಾರ**
ಹಗಲು: ಧ್ವಜಾರೋಹಣ,
ರಾತ್ರಿ: ಹಂಸ ವಾಹನ

**12-02-2023 ಭಾನುವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**13-02-2023 ಸೋಮವಾರ**
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ

**14-02-2023 ಮಂಗಳವಾರ**
ಹಗಲು : ಮಕರವಾಹನ
ರಾತ್ರಿ : ಶೇಷವಾಹನ

**15-02-2023 ಬುಧವಾರ**
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ಅಧಿಕಾರನಂದಿ ವಾಹನ

**16-02-2023 ಗುರುವಾರ**
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

**17-02-2023 ಶುಕ್ರವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಅಶ್ವವಾಹನ

**18-02-2023 ಶನಿವಾರ**
ಹಗಲು: ರಥೋತ್ಸವ, (ಭೋಗಿತೇರು)
ರಾತ್ರಿ: ನಂದಿವಾಹನ (ಮಹಾಶಿವರಾತ್ರಿ)

**19-02-2023 ಭಾನುವಾರ**
ಹಗಲು: ಪುರುಷಾಮೃಗ ವಾಹನ
ರಾತ್ರಿ: ಕಲ್ಯಾಣೋತ್ಸವ,ತಿರುಚ್ಚಿಉತ್ಸವ

**20-02-2023 ಸೋಮವಾರ**
ಹಗಲು: ಸೂರ್ಯಪ್ರಭವಾಹನದಲ್ಲಿ
ನಟರಾಜಸ್ವಾಮಿ,ತ್ರಿಶೂಲಸ್ನಾನ
ರಾತ್ರಿ: ಧ್ವಜಾವರೋಹಣ
ರಾವಣಾಸುರ ವಾಹನ

# ಭಗವದ್ಗೀತೆ



**ಏವಮುಕ್ತ್ವಾ ऽರ್ಜುನಃ ಸಂಖ್ಯೇ ರಥೋಪಸ್ಥ ಉಪಾವಿಶತ್**
**ವಿಸೃಜ್ಯ ಸಶರಂ ಚಾಪಂ ಶೋಕ ಸಂವಿಗ್ನ ಮಾನಸಃ**


(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 46)

**ಇತಿ**

ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮ -
ವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾ -
ರ್ಜುನ ಸಂವಾದೇ ಅರ್ಜುನವಿಷಾದ-
ಯೋಗೋ ನಾಮ ಪ್ರಥಮೋऽಧ್ಯಾಯಃ

**ದುಃಖದಿಂದ ತಳಮಳಗೊಂಡ ಅರ್ಜುನನು ಹೀಗೆ ಹೇಳಿ ಬಿಲ್ಲುಬಾಣವನ್ನು ಕೆಳಕ್ಕೆ ಚೆಲ್ಲಿ ರಣರಂಗದಲ್ಲಿ ರಥದಲ್ಲೇ ಕುಳಿತು ಬಿಟ್ಟನು.**

(1 ನೇ ಅಧ್ಯಾಯವು ಮುಗಿದುದು)



ವಿಗ್ರಹವನೆ ನಿಲ್ಲಿಸೊ ವೆಂಕಟ ನಿನ್ನ
ಗಗನಾಗ್ರಕ್ಕೆ ಬೆಳೆದು ಗಂಗೆಯ ಪಡೆದ ನಿನ್ನ
ರನ್ನದ ಮುಕುಟ ಸುವರ್ಣ ಕುಂಡಲತೇಜ
ಚನ್ನ ಗಂಡಸ್ಥಳದಿ ತೂಗಿ ಪೊಳೆವ ನಿನ್ನ

ಕೊರಳ ತ್ರಿರೇಖೆ ಕೇಯೂರ ಕೌಸ್ತುಭಹಾರ
ಉದರದಲ್ಲಿ ಸಿರಿವತ್ಸಧರಿಸಿ ಮೆರೆವ ನಿನ್ನ
ಕುಕ್ಷಿಯೊಳಗೆ ಅಕ್ಷ ಲೋಕವನಡಗಿಸ್ಯು
ಪೇಕ್ಷೆಯಿಂದಲಿ ಸುರರ ರಕ್ಷಿಸಿ ನಗುವ ನಿನ್ನ

ನಖದೊಳನಂತ ಬ್ರಹ್ಮಾಂಡ ವನಡಗಿಸಿ
ಮಕ್ಕಳಾಟಿಕೆಯಿಂದ ಮರಳು ಮಾಡುವ ನಿನ್ನ
ಉತ್ಪತ್ತಿ ಸ್ಥಿತಿಲಯ ಕಾರಣಕರ್ತ ಜಗ
ತ್ಪತಿ ವಿಜಯವಿಠಲ ವೆಂಕಟ ನಿನ್ನ

- ಶ್ರೀ ವಿಜಯದಾಸರು

(ಎಂಟನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಅನಿತರಜಷಾಮಂತಮರ್ೂಲೇऽ ಪ್ಯ ಪಾಯ ಪರಿಪ್ಲವೇ ಕೃತವಿದನಘಾ ವಿಚ್ಛಿದ್ಯೈಷಾಂ ಕೃಪೇ ಯಮವಶ್ಯತಾಮ್ ।

ಪ್ರಪದನಫಲಪ್ರತ್ಯಾದೇಶ ಪ್ರಸಂಗ ವಿವರ್ಜಿತಂ ಪ್ರತಿವಿಧಿಮುಪಾಧತ್ಸೇಸಾರ್ಧಂ ವೃಷಾದ್ರಿಹಿತೈಷಿಣಾ ॥ 77॥

ಹಿಂದಿನ ಪದ್ಯದಲ್ಲಿ ಪ್ರಪತ್ತಿ ಎಂಬ ಉಪಾಯದಲ್ಲಿ ಸಂಬಂಧವೂ ಅದರನಂತರ ನಿರ್ಯಾಣಕಾಲದವರೆಗಿರುವ ಉತ್ತರ ಕಾಲದಲ್ಲಿ ಈ ಪ್ರಪನ್ನನಿಗೆ ಏರ್ಪಡುವ ಪರಮಾತ್ಮಾನು ಭವಾನಂದರೂಪವೆಂಬ ಇಷ್ಟ ಪ್ರಾಪ್ತಿ ರೂಪವಾದ ಫಲವೂ ಹೇಳಲ್ಪಟ್ಟಿತು. ಈ ಪದ್ಯದಲ್ಲಿ ಆ ಉತ್ತರಕಾಲದಲ್ಲಿಯೂ, ನಿರ್ಯಾಣ ಕಾಲದಲ್ಲಿಯೂ ಉಂಟಾಗಬಹುದಾದ ಅನಿಷ್ಟದ ಪರಿಹಾರ ರೂಪವಾದ ಫಲವು ವರ್ಣಿಸಲ್ಪಡುವುದು.

ಪ್ರಪನ್ನನು ಪ್ರಪತ್ತಿ ಮಾಡುವಾಗ-'ಸರ್ವೇಶ್ವರನಿಗೆ ಅನುಕೂಲನಾಗಿಯೇ ಇರುವೆನು. ಪ್ರತಿಕೂಲನಾಗಿರುವುದಿಲ್ಲ' ಎಂದು ಸಂಕಲ್ಪಿಸಿಕೊಂಡೇ ಪ್ರಪತ್ತಿ ಮಾಡುವುದರಿಂದ ಉತ್ತರಕಾಲದಲ್ಲಿ (ಪ್ರಪತ್ತಿ ಮಾಡಿದ ಮೇಲೆ ) ಇವನಿಗೆ ಬುದ್ಧಿ ಪೂರ್ವಕವಾದ ಪಾಪಗಳು ಬಹುಶಃ ಸಂಭವಿಸಲಾರವು. (ಇಲ್ಲಿ ಪಾಪಗಳೆಂದರೆ ಭಗವಂತನ ಅಜ್ಞಾರೂಪವಾದ ಶಾಸ್ತ್ರಗಳನ್ನು ಮೀರಿ ನಡೆಯುವುದೇ ಆಗಿರುತ್ತದೆ) ಒಂದು ವೇಳೆ ಪ್ರಾರಬ್ಧ ಕರ್ಮವಶದಿಂದಾಗಿ ಇವನಿಗೆ ಬುದ್ಧಿ ಪೂರ್ವಕವಾದ ಪಾಪಗಳು ಉಂಟಾದರೂ ಈ ಪ್ರಪನ್ನನಿಗೆ ಮೋಕ್ಷಕ್ಕೆ ಯಾವ ವಿರೋಧವೂ ಇಲ್ಲವೆಂಬ ಶಾಸ್ತ್ರಾರ್ಥವನ್ನು ಆಚಾರ್ಯ ದೇಶಿಕರು ಪ್ರಕಾಶಪಡಿಸಿರುತ್ತಾರೆ. ಅಬುದ್ಧಿ ಪೂರ್ವಕವಾದ ಪಾಪಗಳು ಪ್ರಪನ್ನನಿಗೆ ಉಂಟಾದರೆ ಪ್ರಪತ್ತಿ ಎಂಬ ಬ್ರಹ್ಮ ವಿದ್ಯೆಯು ಮಾಹಾತ್ಮ್ಯದಿಂದ ಪಾಪಗಳ ದೋಷವು ಅವನಿಗೆ ಅಂಟುವುದೇ ಇಲ್ಲ. ಅಂದರೆ, ಈಶ್ವರನು ಆ ಪಾಪಗಳಿಗೆ ಫಲವನ್ನು ಕೊಡುವುದಾಗಿ ಸಂಕಲ್ಪಿಸುವುದೇ ಇಲ್ಲ. ಇದೇ ಅಬುದ್ಧಿ ಪೂರ್ವಕವಾದ ಪಾಪವನ್ನು ಮಾಡಿ ಪ್ರಪತ್ತಿ ಎಂಬ ಬ್ರಹ್ಮವಿದ್ಯೆಯನ್ನು ಅನುಷ್ಠಿಸದೆ ಇರುವವನಿಗೆ ಅದಕ್ಕೆ ತಕ್ಕ ದಂಡನೆಯುಂಟು.

ಒಂದು ವೇಳೆ ಪ್ರಪನ್ನನೇ ಬುದ್ಧಿ ಪೂರ್ವಕವಾಗಿ ಪಾಪಗಳನ್ನು ಮಾಡಿದರೂ ಕೂಡ, ಇವನು ಪ್ರಪತ್ತಿ ಮಾಡಿದ ಕಾಲದಲ್ಲಿ ಇವನ ಇಷ್ಟದಂತೆ ಇಷ್ಟವಾದ ಕಾಲದಲ್ಲಿ ಮೋಕ್ಷವನ್ನು ಕೊಡುವುದಾಗಿ ಈಶ್ವರನು ಸಂಕಲ್ಪಮಾಡಿಬಿಟ್ಟಿರುವುದರಿಂದ, ಈಗ ಮಾಡಿದ ಪಾಪಕ್ಕೆ ಇವನು ಮೋಕ್ಷವನ್ನು ಬಯಸಿರುವ ಕಾಲದೊಳಗಾಗಿ ಮತ್ತೆ ಪ್ರಪತ್ತಿಯನ್ನು ಅನುಷ್ಠಿಸುವುದೆಂಬ ಪರಿಹಾರವನ್ನಾಗಲಿ, ಹಾಗಿಲ್ಲದೆ ಇವನು ಕಠಿನಪ್ರಪತ್ತಿಯುಳ್ಳವನಾಗಿ ಪ್ರಪತ್ತಿಯನ್ನು ಮತ್ತೆ ಅನುಷ್ಠಿಸದಿದ್ದರೆ ರಾಜಪುತ್ರ ನ್ಯಾಯದಿಂದ ಲಘುದಂಡನೆಯನ್ನು ವಿಧಿಸುವುದೆಂಬ ಪರಿಹಾರವನ್ನೋ ದಯಾದೇವಿಯ ಸರ್ವಭೂತ ಹಿತೈಷಿಯಾದ ಶ್ರೀನಿವಾಸನೊಡನೆ ಕಲೆತು ಆಲೋಚಿಸಿ ಏರ್ಪಡಿಸಿ, ಇವನ ನಿರ್ಯಾಣ ಕಾಲದಲ್ಲಿ ಯಮನೋ ಅವನ ಭಟರೋ ಇವನನ್ನು ಸ್ವಾಧೀನಪಡಿಸಿಕೊಂಡು ನರಕಾನುಭವವನ್ನು ಕೊಡದಂತೆ ಕಾಪಾಡಿ, ಮೊದಲೇ ತಾವು ಸಂಕಲ್ಪಿಸಿರುವಂತೆ ಇವನಿಗೆ ಪ್ರಪತ್ತಿಗೆ ಫಲವಾದ ಮೋಕ್ಷವನ್ನು ಯಾವ ವಿಧವಾದ ತೊಂದರೆಯೂ ಇಲ್ಲದಂತೆ ಕೊಟ್ಟೇತೀರುವಳು. ಆದರಿಂದಲೇ ''ನ ಖಲು ಭಾಗವತಾಃ ಯಮವಿಷಯಂ ಗಚ್ಛನ್ತಿ'' ಎಂದರೆ ಭಗವದ್ಭಕ್ತರು ಎಂದಿಗೂ ಯಮನಿಗೆ ಗೋಚರಿಸುವುದಿಲ್ಲವೆಂದು ಪ್ರಮಾಣಗಳು ಘೋಷಿಸುತ್ತಿವೆಯಲ್ಲವೇ! ಹೀಗೆ ಪ್ರಪತ್ತಿಯನ್ನು ಮಾಡಿದ ಮೇಲೆ ಘಟಿಸುವಂತಹ ಬುದ್ಧಿ ಪೂರ್ವಕವಾದ ಪಾಪಕ್ಕೆ ಉಂಟಾಗಬಹುದಾದ ಕಠಿನವಾದ ದಂಡನೆಯೂ ನರಕಬಾಧೆಯೇ ಮೊದಲಾದವೂ ಪ್ರಪನ್ನನಿಗೆ ಉಂಟಾಗದಂತೆ ಕಾಪಾಡುವಳು ಎಂಬುದರಿಂದ ಉತ್ತರ ಕಾಲದಲ್ಲಿ ಉಂಟಾಗಬಹುದಾದ ಅನಿಷ್ಟನಿವೃತ್ತಿಯು ನಿರೂಪಿಸಿದಂತಾಯಿತು. ಆಚಾರ್ಯದೇಶಿಕರು ಇದೇ ಶಾಸ್ತ್ರಾರ್ಥವನ್ನೇ "ಧೀ ಪೂರ್ವೋತ್ತರ ಪಾಪ್ಮ ನಾಮಜನನಾತ್ ಜಾತೇऽ ಪಿ ತನ್ನಿಷ್ಕೃತೇಃ ಕೌಟಿಲ್ಯೇ ಸತಿ ಶಿಕ್ಷಯಾऽಪ್ಯನಘಯನ್" ಕ್ರೋಢೀಕರೋತಿ ಪ್ರಭುಃ ಎಂದು ಶ್ರೀಮದ್ರಹಸ್ಯತ್ರಯ ಸಾರದಲ್ಲಿಯೂ ಸ್ಪಷ್ಟಪಡಿಸಿರುತ್ತಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ ನಾಮ ಸಂವತ್ಸರ ಮಾಘ - ಮಾಸ ಸಂಚಿಕೆ

ಸಂಪುಟ : 02 ಫೆಬ್ರವರಿ - 2023 ಸಂಚಿಕೆ : 07



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 6 |
| ಮಹಾಶಿವರಾತ್ರೆಯ ಮಹಾಮಹಿಮೆ | -ವೇದ ವಿದ್ವಾನ್.ಶಿವರಾಮ ಜೋಗಳೇಕರ | 7 |
| ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ | -ವಿ. ನಾಗೇಂದ್ರ ಪ್ರಸಾದ್ | 9 |
| ಭೀಷ್ಮಾಷ್ಟಮಿ | -ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ | 10 |
| ಕೋಪೇಶ್ವರ ದೇವಸ್ಥಾನ | -ಶ್ರೀಮತಿ. ಮಾಲಾಪ್ರಸಾದ್ | 11 |
| ಮಾಧವ ಜಯ ಜಯ ಶ್ರೀಧವ ಜಯ ಜಯ | -ಡಾ॥ ಸುಭಾಸ ಕಾಖಂಡಕಿ | 14 |
| ದೈತ್ಯತಾರತಮ್ಯ-ಒಂದು ವಿಶ್ಲೇಷಣೆ | -ಡಾ॥ ರಾಮಚಂದ್ರ ದಾಸ್ ಸಿ.ಜೆ. | 15 |
| ಸುಖ,ಶಾಂತಿ,ಸಮೃದ್ಧಿಯ ಶಿವರಾತ್ರಿ | -ಹನುಮಂತ.ಮ. ದೇಶಕುಲಕರ್ಣಿ | 16 |
| ಸಕಲರಿಂದ ಪೂಜ್ಯಲು ರಾಘವೇಂದ್ರರು | -ಡಾ॥ ಪ್ರಕಾಶ್ ಕೆ. ನಾಡಿಗ್ | 19 |
| ಹಲಸಿಯ ಭೂವರಾಹ ನರಸಿಂಹ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀವೆಂಕಟೇಶ್ವರ ಆಲಯ | - ದಿ॥ ಬಿ.ಎನ್. ಶ್ರೀನಿವಾಸನ್ | 24 |
| ದ್ವಾದಶ ಜ್ಯೋತಿರ್ಲಿಂಗಗಳು | - | 28 |
| ಉಪನಿಷತ್ತುಗಳು | - ಪಿ.ಜೆ. ಶ್ರೀನಿವಾಸನ್ | 31 |
| ಆರೋಗ್ಯವನ್ನು ಸಂರಕ್ಷಿಸುವ ದಿವ್ಯಮರ ಔದುಂಬರ ಅತ್ತಿ | - ಶ್ರೀಮತಿ | 34 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ.ಆರ್.ನರಸಿಂಹನ್ | 36 |
| ಜಾಗೃತ ಸೂರ್ಯ ಕ್ಷೇತ್ರ ಅರಸನವಲ್ಲಿ | - ಡಾ॥ ಸುಮನ ಬದರಿನಾಥ್ | 38 |
| ಅವಧೂತ ಶಿರೋಮಣಿ ಮಾದನೂರು ಶ್ರೀ ವಿಷ್ಣು ತೀರ್ಥರ ಆರಾಧನಾ ಮಹೋತ್ಸವ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 41 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 43 |
| ಹರಿ ಕಥಾಮೃತ ಸಾರ ಮಹಿಮೆ ಬಲು ಅಪಾರ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 44 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 47 |
| ನೀತಿ ಕಥೆ - ಅಂತರ್‌ದೃಷ್ಟಿ ವಿಕಸನಗೊಳ್ಳಲಿ | - ಎ.ಆರ್. ರಘುರಾಮ್ | 48 |
| ರಸಪ್ರಶ್ನೆಗಳು | - | 50 |
| ಚಿತ್ರಕಥೆ - ಮಾರ್ಕಂಡೇಯ | - ಶ್ರೀನಿವಾಸ ದೀಕ್ಷಿತರು | 52 |

ಮುಖಚಿತ್ರ - ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು, ಶ್ರೀನಿವಾಸಮಂಗಾಪುರಂ
ಹಿಂಬದಿಚಿತ್ರ - ಶ್ರೀ ಕಪಿಲೇಶ್ವರ ಸ್ವಾಮಿಯವರು, ತಿರುಪತಿ

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಪ್ರಣವೋಚ್ಚಾರಣ ಮಾಡೋಣ !!

ಓಮಿತ್ಯೇ ಕಾಕ್ಷರಂ ಬ್ರಹ್ಮವ್ಯಾಹನ್ಮಾಮನುಸ್ಮರನ್।
ಯಃ ಪ್ರಯಾತಿ ತ್ವಜನ್ದೇಹಂ ಸ ಯಾತಿ ಪರಮಾಂ ಗತಿಮ್ ॥ (ಭಗವದ್ಗೀತೆ - ೧೮-೧೩)

ಪರಬ್ರಹ್ಮ ಎಂದರೆ "ಓಂ" ಎಂಬ ಅಕ್ಷರವನ್ನು ಉಚ್ಚರಿಸುತ್ತಾ ನನ್ನನ್ನು ಶ್ರದ್ದೆಯಿಂದ ಸ್ಮರಿಸುತ್ತಾ ಶರೀರವನ್ನು ಬಿಡುತ್ತಾನೋ ಆತನೇ ಮೋಕ್ಷವನ್ನು ಪಡೆಯುತ್ತಾನೆ. ಎಲ್ಲಾ ಮಂತ್ರಗಳಲ್ಲೂ ಓಂಕಾರ ಅಂದರೆ ಪ್ರಣವ ಮಂತ್ರವೇ ಶ್ರೇಷ್ಠಕರವಾದುದ್ದಾಗಿದೆ.ಕೇವಲ ಇದನ್ನು ಜಪಿಸುವುದು ಮಾತ್ರವಲ್ಲದೇ ಧ್ಯಾನವನ್ನೂ ಮಾಡಬೇಕು. ಮಂತ್ರೋಚ್ಛಾರಣೆಯೊಂದಿಗೆ ಮಂತ್ರದ ಅರ್ಥವನ್ನೂ ತಿಳಿದುಕೊಳ್ಳಬೇಕು. ನಂತರ ಅದನ್ನು ನಿತ್ಯವೂ ಸ್ಮರಿಸುತ್ತಿರಬೇಕು.

ನಿರಂತರವಾಗಿ ಪ್ರಣವ ಮಂತ್ರವನ್ನು ಧ್ಯಾನಿಸುತ್ತಿದ್ದು ಆ ಧ್ಯಾನ ತನ್ನ ಪರಾಕಾಷ್ಠತೆಗೆ ತಲುಪಿದರೆ ಆ ಧ್ಯಾನವನ್ನು ಮಾಡುತ್ತಿರುವ ವ್ಯಕ್ತಿ ಮತ್ತು ಧ್ಯಾನಿಸುತ್ತಿರುವ ವಸ್ತುವು ಎರಡೂ ಒಂದೇ ಎನಿಸಿಕೊಳ್ಳುತ್ತದೆ. ಮನುಷ್ಯನಲ್ಲಿ ದೈವತ್ವವೆನ್ನುವುದು ಅವನ ಅಣುಕಣಗಳಲ್ಲೂ ವ್ಯಾಪಿಸಿದೆ. ಈ ರೀತಿಯ ಆಧ್ಯಾತ್ಮಿಕ ಅನುಭವವನ್ನು ಹೊಂದುವುದು ಸಾಧ್ಯವಾಗುತ್ತದೆ. ಆದರೆ ನಮ್ಮ ಶರೀರದಲ್ಲಿರುವ "ಮನೋಮಯಕೋಶ"ದಲ್ಲಿ ಹೇರಿಕೊಂಡಿರುವ ವಿವಿಧ ರೀತಿಯ ಸಂಸ್ಕಾರಗಳ ಪ್ರಬಲತೆಯಿಂದಾಗಿ ಈ ರೀತಿಯ ಆಧ್ಯಾತ್ಮಿಕ ಅನುಭವ ಸುಧೀರ್ಘಸಮಯದವರೆಗೂ ಮುಂದುವರೆಯುವುದಿಲ್ಲ. ಆದರೆ ಉತ್ತಮ ಹಂತವನ್ನು ತಲುಪುವ ಪ್ರಣವ ಜಪ ಸಾಧಕರಿಗೆ ಮಾತ್ರಾ ಹಗಲೂ ರಾತ್ರಿ ಎನ್ನದೇ ಪ್ರತೀಕ್ಷಣವೂ ಅವರ ಅಂತರಂಗದಲ್ಲಿ ಓಂಕಾರ ನಾದವನ್ನು ಪ್ರತಿಧ್ವನಿಸುತ್ತಲೇ ಇರುತ್ತದೆ. ಆ ರೀತಿ ಅವರು ಉತ್ತಮವಾದ ಹಂತವನ್ನು ತಲುಪುವುದಕ್ಕೆ ದಾರಿದೀಪವಾಗುತ್ತದೆ. ಕಷ್ಟಗಳಿಗೆ ಹೆದರದೇ ಸುಖಗಳಿಗೆ ಉಬ್ಬಿತಬ್ಬಿಬ್ಬಾಗದೇ ಸ್ಥಿರ ಚಿತ್ತದಿಂದ ತಾವರೆಯ ಹೂವು ನೀರಿನ ಮೇಲೆ ಇರುವಂತೆ ಬದುಕುತ್ತಿದ್ದರೆ ಅದೇ ಅತ್ಯುತ್ತಮವಾದ ಸ್ಥಿತಿ ಎನ್ನುತ್ತೇವೆ. ಆ ಹಂತವನ್ನು ತಲುಪುವ ವ್ಯಕ್ತಿಗೆ ಮರಣದ ಭಯವಿರುವುದಿಲ್ಲ. ಆತ್ಮ ಒಂದು ಶರೀರದಿಂದ ಮತ್ತೊಂದು ಶರೀರದೊಳಗೆ ಪ್ರವೇಶಿವುದು ನಿಜವೆಂದು ಇವರ ಅರಿವಿಗೆ ಬಂದಿರುತ್ತದೆ.

"ಯಜ್ಞಾನಾಂ ಜಪಯಜ್ಞೋಽಸ್ಮಿ" (೧೦-೨೫) ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮ ಹೇಳಿದ್ದಾನೆ. ಈ ಕಲಿಯುಗದಲ್ಲಿ ಶಾಂತಿಯನ್ನು ಸಂತೋಷವನ್ನು ಆನಂದ, ತೃಪ್ತಿ, ಅಮರತ್ವವನ್ನು ನೀಡುವ ಶಕ್ತಿ ಈ ಜಪಯಜ್ಞಕ್ಕೆ ಇದೆ. ಈ ಜಪಯಜ್ಞವು ಅಪಾರವಾದ ಫಲವನ್ನು ಪ್ರಸಾದಿಸುತ್ತದೆ. ಈ ಜಪಯಜ್ಞದಿಂದ ಮನುಷ್ಯನ ಮನಸ್ಸು, ಶುದ್ಧಗೊಂಡು, ಜನ್ಮಜನ್ಮಾಂತರದ ಪಾಪಗಳನ್ನು ಪ್ರಕ್ಷಾಳನೆ ಮಾಡುತ್ತದೆ. ಬ್ರಹ್ಮಜ್ಞಾನವನ್ನು ನೀಡುವ ಮೋಕ್ಷಪ್ರಾಪ್ತಿಗೆ ಅತ್ಯಂತ ಅವಶ್ಯಕವಾಗಿದೆ. ಇದು ಸಾಕ್ಷಾತ್ ಭಗವಂತನ ಸ್ವರೂಪವೇ ಆಗಿರುತ್ತದೆ. ಭೌತಿಕ ವಿಷಯಗಳ ಬಗೆಗೆ ಆಸಕ್ತಿಯನ್ನು ಹೆಚ್ಚಿಸಿಕೊಂಡಂತೆಲ್ಲಾ ಮನಸ್ಸು ದುಃಖಕ್ಕೆ ಒಳಗಾಗುತ್ತದೆ. ಅದಕ್ಕೂ ಮೊದಲು ನಾಮಜಪವನ್ನು ಮಾಡಬೇಕು. ಭಗವನ್ನಾಮಜಪದಿಂದಾಗಿ ಮನಸ್ಸಿಗೆ ಶಾಂತಿ ಲಭಿಸುತ್ತದೆ. ಈತಿಬಾಧೆಗಳು ತೊಲಗಿಹೋಗುತ್ತವೆ. ನಾಮಜಪ, ಮತ್ತು ಮಂತ್ರ ಜಪ ಸಾಧಕರ ಸೂಕ್ಷ್ಮ ಶರೀರದ ಮೇಲೆ. ಸ್ಥೂಲ ಶರೀರದ ಮೇಲೆ ಶುಭಕರವಾದ ಪ್ರಭಾವವನ್ನು ಬೀರುತ್ತವೆ. ಯಾವ ವಿಷಯದ ಬಗೆಗೆ ಸ್ಮರಣೆಯನ್ನು ಮಾಡದೇ ಇರುವುದೇ ಧ್ಯಾನ. ಈ ಧ್ಯಾನಕ್ಕೆ ಮನೋನಿಗ್ರಹವು ಬಹಳ ಮುಖ್ಯವು. ವಿವಿಧ ಯುಗಗಳಲ್ಲಿ ಯಜ್ಞಗಳನ್ನು ಆಚರಿಸಿ, ಮೋಕ್ಷವನ್ನು ಹೊಂದಿದರು. ಆದರೆ ಈ ಕಲಿಯುಗದಲ್ಲಿ ಮೋಕ್ಷಮಾರ್ಗಕ್ಕೆ ದಾರಿಯಾಗಿರುವುದು ಈ ನಾಮಧ್ಯಾನ ಮಾತ್ರವೇ ಆಗಿದೆ. ಇದರಲ್ಲಿ ಸಾಧಕರು ತಮ್ಮ ಇಷ್ಟದೈವವನ್ನು ಭಕ್ತಿ ಶ್ರದ್ಧೆಗಳಿಂದ ಜಪಿಸುವುದು, ಧ್ಯಾನಿಸುವುದು, ಭಕ್ತ ಪ್ರಹ್ಲಾದ, ಭೀಷ್ಮ ಮೊದಲಾದವರು ಆ ರೀತಿ ಭಗವಂತನನ್ನು ಧ್ಯಾನಿಸಿದವರೇ ಆಗಿದ್ದಾರೆ.

ಆದರೆ, ಈಗ ಪ್ರಸ್ತುತ ಪರಿಸ್ಥಿತಿಯಲ್ಲಿ ಕರೋನ ಎಂಬ ವ್ಯಾಧಿ ಪ್ರಪಂಚವನ್ನು ನಡುಗಿಸುತ್ತಿದೆ. ಕರೋನಾ ಮಾತ್ರವೇ ಅಲ್ಲದೇ ಪ್ರಪಂಚವೆಲ್ಲಾ ಭಯಂಕರವಾದ ವ್ಯಾಧಿಗಳೊಂದಿಗೆ ಪ್ರಜೆಗಳು ಹೋರಾಡುತ್ತಿದ್ದಾರೆ. ಅಂತಹಾ ಅನಾರೋಗ್ಯಗಳಿಗೆ ಪ್ರಜೆಗಳು ಎಷ್ಟೇ ಔಷಧಿಗಳನ್ನು ಉಪಯೋಗಿಸಿದರೂ ಆ ರೋಗಗಳನ್ನು ಸೋಲಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅವೆಲ್ಲವೂ ಶರೀರಕ್ಕೆ ಬರುತ್ತಿವೆ. ಆದರೆ ಮನಸ್ಸಿಗೆ ಬರುತ್ತಿಲ್ಲ. ಆ ಶಾರೀಕ ಅನಾರೋಗ್ಯದಿಂದಾಗಿ ಮಾನಸಿಕ ಅನಾರೋಗ್ಯವೋ ಉಂಟಾಗುತ್ತಿದೆ. ಮಾನಸಿಕ ಸ್ಥಿತಿ ಸರಿಯಾಗಿ ಇರಬೇಕೆಂದರೆ ನಾವು ಮೇಲೆ ಹೇಳಿದ ರೀತಿಯಲ್ಲಿ ಭಗವನ್ನಾಮ ಜಪಕ್ಕೆ ಧ್ಯಾನಕ್ಕೆ ಪ್ರಾಧಾನ್ಯತೆಯನ್ನು ನೀಡಬೇಕು. ಆ ರೀತಿ ಭಗವನ್ನಾಮ ಜಪದಿಂದ ನಮ್ಮ ಮನಸ್ಸಿನ ಯೋಚನೆ ಉತ್ತಮಗೊಂಡರೆ ಅದರಿಂದಾಗಿ ಶಾರೀರಿಕ ಆರೋಗ್ಯವೂ ಉತ್ತಮವಾಗುತ್ತದೆ. ಭಗವಂತನನ್ನು ದರ್ಶಿಸುವುದಕ್ಕೆ ದೇವಾಲಯಗಳಿಗೆ ಹೋದರೂ ಮೌನದಿಂದ ಮನಸ್ಸಿನಲ್ಲಿ ಯಾವುದೇ ರೀತಿಯ ಯೋಚನೆಗಳು ಬರದೆ ಇರುವಂತೆ "ಓಂ" ಎಂಬ ಮಂತ್ರದೊಂದಿಗೆ ನಮ್ಮ ಇಷ್ಟ ದೈವವನ್ನೂ ಸ್ಮರಿಸಬೇಕು. ಅದಲ್ಲದೇ ಇತರ ವಿಷಯಗಳ ಬಗೆಗೆ ದೃಷ್ಟಿ ಇರಿಸಿ, ಕಾಲಹರಣ ಮಾಡಬಾರದು. ಆ ಓಂಕಾರ ನಾಮಜಪವೇ ನಮ್ಮ ಮನಸ್ಸಿನಲ್ಲಿರುವ ಮಲಿನವನ್ನು ತೊಲಗಿಸುತ್ತದೆ. ಅದರಿಂದಾಗಿ ಶಾರೀರಕ ಆರೋಗ್ಯಕ್ಕೆ ಇದು ಕಾರಣವಾಗುತ್ತದೆ. ಆ ನಿಟ್ಟಿನಲ್ಲಿ ಪಂಚಾಕ್ಷರೀ ಮಂತ್ರಗಳಾದ "ಓಂ ನಮಃ ಶಿವಾಯ, ಓಂ ನಮೋ ವೇಂಕಟೇಶಾಯ" ಮುಂತಾದ ಮಂತ್ರಗಳನ್ನು ನಿರಂತರವಾಗಿ ಜಪಿಸುತ್ತಿರಬೇಕು. ಆ ದೇವದೇವನ ಕರುಣಾಕಟಾಕ್ಷಗಳಿಂದ ಜೀವನವನ್ನು ಸುಖಮಯವವನ್ನಾಗಿ ಮಾಡಿಕೊಳ್ಳೋಣ. ಆದ್ದರಿಂದ ಜಪಧ್ಯಾನಗಳು ಅಭ್ಯಾಸವಿಲ್ಲದಿದ್ದರೂ ಪರವಾಗಿಲ್ಲ. ಇಂದಿನಿಂದ ನಾವು ಆ ಜಪಧ್ಯಾನಗಳನ್ನು ಪ್ರಾರಂಭಿಸಿ, ನಮ್ಮ ಜೀವನ ಶೈಲಿಯಲ್ಲಿ ಅದನ್ನು ಅಳವಡಿಸಿಕೊಂಡು ನಮ್ಮ ಶಾರೀರಕ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂಬ ಸ್ಥಿರವಾದ ನಿರ್ಧಾರವನ್ನು ಕೈಗೊಂಡು, 'ಓಂ' ಕಾರ ನಾಮೋಚ್ಛರಣೆಗೆ ನಾಂದಿ ಹಾಡೋಣ. ಧ್ಯಾನಗಳನ್ನು ಪ್ರಾರಂಭಿಸೋಣ. ಸುಖ ಸಂತೋಷಗಳಿಂದ ನಾವು ಜೀವಿಸುತ್ತಾ ನಮ್ಮೊಂದಿಗಿರುವ ಎಲ್ಲರನ್ನೂ, ದೇಶದ ಸೌಭಾಗ್ಯವನ್ನು ಕಾಪಾಡಿಕೊಳ್ಳೋಣ. ಧ್ಯಾನಿಸೋಣ ಜಪಿಸೋಣ, ಶ್ರೀ ಹರಿಯ ಆಶೀರ್ವಾದವನ್ನು ಪಡೆಯೋಣ.

**ಗೋವಿಂದ!! ಗೋವಿಂದ!!! ಗೋವಿಂದ!!!!**

# ಮಹಾಶಿವರಾತ್ರಿಯ ಮಹಾಮಹಿಮೆ



– ವೇದ ವಿದ್ವಾನ್. ಶಿವರಾಮ ಜೋಗಳೇಕರ
8275180641

ಭಾರತೀಯರ ಹಬ್ಬ ಹರಿದಿನಗಳಲ್ಲಿ ಅತ್ಯಂತ ಪ್ರಮುಖವಾದ ಮಹಾಪರ್ವ ಮಹಾಶಿವರಾತ್ರಿ. ಪ್ರಯಾಗ ಪುಷ್ಕರಗಳನ್ನು 'ತೀರ್ಥರಾಜ"ಎನ್ನುವಂತೆ ಮಹಾಶಿವರಾತ್ರೆಯನ್ನು "ವ್ರತ ರಾಜ"ಎಂದು ಕರೆಯುವುದುಂಟು. ವರ್ಷದ ಪ್ರತಿ ಕೃಷ್ಣಪಕ್ಷದ ಚತುರ್ದಶಿಯೂ ಶಿವರಾತ್ರಿ ಎನ್ನಿಸಿದ್ದು. ಅವುಗಳಲ್ಲಿಯೂ ಮಾಘಮಾಸದ ಕೃಷ್ಣಪಕ್ಷದ ಚತುರ್ದಶಿಯೂ ಅತ್ಯಂತ ವಿಶೇಷವಾಗಿರುವುದರಿಂದ ಅದನ್ನು"ಮಹಾಶಿವ ರಾತ್ರಿ"ಎಂದು ಕರೆಯುತ್ತಾರೆ.ಈ ಚತುರ್ದಶಿಯ ರಾತ್ರಿಯಂದು ಆದಿದೇವ ಭಗವಾನ ಶ್ರೀ ಶಿವನು ಕೋಟಿ ಸೂರ್ಯ ಪ್ರಕಾಶ ಸಮಾನ ಲಿಂಗರೂಪದಿಂದ ಪ್ರಕಟಿಸುತ್ತಾನೆ. ಶಿವನುಲಿಂಗರೂಪಿ ಬ್ರಹ್ಮ ವಸ್ತುವು ನಿರ್ಗುಣವಾದರೂ ಸಗುಣ ಭಾವದ ಕಲ್ಪಿತ ರೂಪಾದಿಗಳು ವಿವಿಧ ತತ್ವಗಳ ಪ್ರತೀಕವೆಂದು ವರ್ಣನೆಯುಂಟು. ಶಿವನ ಐದುಮುಖಗಳು ಪಂಚ ಬ್ರಹ್ಮ ಸ್ವರೂಪವಾದವು.ಈಶಾನ,ತತ್ಪುರುಷ,ಅಘೋರ, ವಾಮದೇವ, ಸದ್ಯೋಜಾತ, ಇವೇ ಆ ಐದು ಮುಖಗಳು, ಇವು ಐದು ತನ್ಮಾತ್ರೆಗಳ ಐದು ಕರ್ಮೇಂದ್ರಿಯಗಳ ಐದು ಜ್ಞಾನೇಂದ್ರಿಯಗಳ ಪುರುಷ,ಪ್ರಕೃತಿ ಬುದ್ಧಿ ಅಹಂಕಾರ, ಮನಸ್ಸು ಎಂಬ ಐದು ತತ್ವಗಳು, ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ ಶಾಂತ್ಯಾತೀತ ಎಂಬ ಐದು ಕಲೆಗಳ, ಬ್ರಹ್ಮ ವಿಷ್ಣು, ರುದ್ರ, ಮಹೇಶ್ವರ, ಸದಾಶಿವರೆಂದು ಮೂರ್ತಿ ಪಂಚಕದ ಸೃಷ್ಟಿ, ಸ್ಥಿತಿ, ಸಂಹಾರ ತಿರೋಧಾನ, ಅನುಗ್ರಹವೆಂಬ ಲೀಲೆಗಳು ತಾತ್ವಿಕ ರೂಪ.ಶಿವನ ಅಷ್ಟ ಮೂರ್ತಿ ಸ್ವರೂಪ ಮೂರ್ತ ತತ್ವಗಳು ಲಿಂಗರೂಪದಲ್ಲಿ ಲಯವಾಗುತ್ತದೆ. ಮೂಲ ಪ್ರಕೃತಿಯ ಮೊದಲ ಪರಿಣಾಮವಾದ ಮಹತ್ತತ್ವ ಎಂಬುದೇ "ಲಿಂಗಮ್" ಪದದ ಅರ್ಥ, ಸರ್ವಾತ್ಮನಾದ ಶಿವನು ಎಲ್ಲವನ್ನೂ ವ್ಯಾಪಿಸಿ,ಎಲ್ಲದರ ಆತ್ಮಸ್ವರೂಪವಾಗಿ ಸಮಸ್ತ ಶರೀರಗಳಲ್ಲೂ ವಾಸ ಮಾಡುತ್ತಾನೆ. ಶಿವನಿಗಿಂತ ಭೇದವಾದ ಯಾವುದು ಇಲ್ಲಾ,

**"ಲಿಂಗ ಎಂಬುದು ಶಿವತತ್ವದ ಒಂದು ಚಿಹ್ನೆ"**

ಭಗ ಪ್ರಕೃತಿಯನ್ನು ಪರಮಾತ್ಮ ಲಿಂಗ ಮತ್ತು ಲಿಂಗ ಸಂಯುಕ್ತ ಭಗವಾನ ಈಶ್ವರನನ್ನು ಪ್ರತಿನಿಧಿಸುತ್ತದೆ. ಸೃಷ್ಟಿಯ ಉತ್ಪನ್ನವನ್ನು ಅರ್ಥೈಸುವ ಚಿಹ್ನವನ್ನು ಲಿಂಗ ಎನ್ನಲಾಗಿದೆ. ಲಿಂಗ ಎನ್ನುವುದು ಶಿವತತ್ವದ ಸಮೀಪದ ರೂಪ ಶಿವ ಮತ್ತು ಶಕ್ತಿಯ ಮಿಲನದ ಪ್ರತೀಕವೇ ಶಿವಲಿಂಗ ಎನ್ನಲಾಗಿದೆ. ಶಿವತತ್ವದ ಚಿಹ್ನೆಯಾದ ಲಿಂಗ ಪೂಜೆಯಿಂದ ಜನನ ಮರಣ ಈ ಚಕ್ರದಿಂದ ಭಗವಾನ್ ಶಿವ ಬಿಡುಗಡೆಗೊಳಿಸುತ್ತಾನೆ ಎಂದು ಬಲವಾದ ನಂಬಿಕೆ.

**ಶಿವರಾತ್ರಿ ವ್ರತದ ವೈಜ್ಞಾನಿಕ ಮತ್ತು ಆಧ್ಯಾತ್ಮಿಕತೆ :**

ಜ್ಯೋತಿಃಶಾಸ್ತ್ರದ ಅನುಸಾರ ಮಾಘಕೃಷ್ಣ ಚತುರ್ದಶಿಯಂದು ಚಂದ್ರನು ಸೂರ್ಯನನ್ನು ಸಮೀಪಿಸುತ್ತಾನೆ.ಆ ಸಮಯದಲ್ಲಿ ಜೀವನ ಸ್ವರೂಪಿ. ಚಂದ್ರನನ್ನು ಶಿವರೂಪಿ ಸೂರ್ಯನ ಜೊತೆಗೆ ಯೋಗ ಮಿಲನವಾಗುತ್ತದೆ.ಅಂದು ಉಪವಾಸ ಜಾಗರಣೆ ಮಾಡಿದವರಿಗೆ ಭುಕ್ತಿ-ಮುಕ್ತಿ ಹೊಂದಿ ನರಕದಿಂದ ಉದ್ಧಾರವಾಗಿ ಅಭೀಷ್ಟತಮ ಪದಾರ್ಥ ಪ್ರಾಪ್ತಿಸುತ್ತದೆ ಎಂಬುದು ಬಲವಾದ ನಂಬಿಕೆ,ಈ ಪರ್ವವೂ ಭಗವಾನ ದಿವ್ಯ ಅವತರಣಿಕೇಯ ಮಂಗಲ ಸೂಚಕವೆನಿಸಿದೆ. ನಿರಾಕಾರದಿಂದ ಸಾಕಾರ ರೂಪದ ಅವತರಣಿಕೆಯ ರಾತ್ರೆಯನ್ನು ಮಹಾಶಿವರಾತ್ರಿ ಎನ್ನಲಾಗಿದೆ.

**ಶಿವರಾತ್ರಿಯ ಉಗಮ :**

**ಮಹಾಶಿವರಾತ್ರಿಯನ್ನು ಆಚರಿಸಲು ಕಾರಣಗಳು ಹಲವು :**

ಶಿವಪಾರ್ವತಿಯರ ವಿವಾಹದ ದಿನವೇ ಶಿವರಾತ್ರಿಯಾಯಿತೆಂದು ಒಂದು ಮಾತು. ಪಾರ್ವತಿಯೊಡನಿದ್ದಾಗ ಆತ ಸಗುಣಬ್ರಹ್ಮ. ಆಶೆ ಇಲ್ಲದಿದ್ದಾಗ ಲಿಂಗರೂಪಿ, ಲಿಂಗ ರೂಪವನ್ನು ಧಾರಣೆ ಮಾಡಿದ ದಿನವನ್ನೇ ಶಿವರಾತ್ರಿಯೆಂದು ಆಚರಿಸುತ್ತಾರೆಂಬುದೂ ಒಂದು ಮಾತು. ಸಮುದ್ರಮಂಥನ ಕಾಲದಲ್ಲಿ ಉಂಟಾದ ಮಹಾಭಯಂಕರ ವಿಷವನ್ನು ತಾನೇ ಕುಡಿದು ಸಮಸ್ತ ಲೋಕಗಳನ್ನೂ, ರಕ್ಷಿಸಿದ ಶಿವನನ್ನು ನೀಲಕಂಠನೆಂದು ಕರೆದು ಸಕಲ ದೇವತೆಗಳೂ ಪ್ರಾರ್ಥಿಸಿದ ದಿನವೇ ಮಹಾಶಿವ ರಾತ್ರಿ, ಅಂದು ಆತ ತಾಂಡವ ನೃತ್ಯ ಮಾಡಿದನೆಂದೂ ಪುರಾಣ ಹೇಳುತ್ತದೆ. ಮಾಘಫಾಲ್ಗುಣ ಮಧ್ಯೆ ಬರುವ ಈ ಕೃಷ್ಣ ಚತುರ್ದಶಿಯಂದು ಉಪವಾಸ ಜಾಗರಣೆಯಲ್ಲಿದ್ದು ಬಿಲ್ವಪತ್ರಗಳಿಂದ ಶಿವನನ್ನು ನಾಲ್ಕು ಯಾಮಗಳಲ್ಲೂ ಪೂಜಿಸುವವರು ಶಿವನಿಗೇ ಸಮಾನರಾಗಿ ಬಿಡುತ್ತಾರೆ. ಈ ರೀತಿ ಆರಾಧಿಸುವವರಿಗೆ ಮರು ಹುಟ್ಟು ಇರುವುದಿಲ್ಲ.

*ಶೈವೋ ವಾ ವೈಷ್ಣವೋ ವಾಪಿ ಯೋ ವಾಸ್ಯಾದನ್ಯಪೂಜಕಃ।*
*ಸರ್ವಂಪೂಜಾ ಫಲಂ ಹಂತಿ ಶಿವರಾತ್ರಿ ಬಹಿರ್ಮುಖಃ॥*

ಶೈವನಾಗಲಿ,ವೈಷ್ಣವನಾಗಲಿ, ಇತರ ಯಾವುದೇ ದೇವತೆಯ ಉಪಾಯಕನಾಗಲಿ ಶಿವರಾತ್ರೆಯ ವಿಷಯದಲ್ಲಿ ಬಹಿರ್ಮುಖನಾಗಿದ್ದರೆ ಆತನ ಎಲ್ಲಾ ಪೂಜಾ ಫಲವೂ ನಾಶವಾಗುತ್ತದೆ. ಸಾಮಾನ್ಯವಾಗಿ ದೇವತಾಪೂಜೆಗೆ ರಾತ್ರಿ ಕಾಲವು ಪ್ರಶಸ್ತವಲ್ಲ. ಶಿವರಾತ್ರಿ ಎಂಬ ನಾಮಧೇಯವೇ ತಿಳಿಸುವಂತೆ ಅಂದು ವ್ರತಾಚರಣೆಗೇ ನಿಯತವಾದ ಮತ್ತು ಪ್ರಶಸ್ತವಾದ ಸಮಯವು ರಾತ್ರಿ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ, ಶಿವರಾತ್ರಿ ಪೂಜೆಗೆ ಮಾತ್ರ ರಾತ್ರಿಯೇ ಪ್ರಶಸ್ತವಾದ ಸಮಯವೆಂಬುದು ಬಹು ವಿಶೇಷ. ಕಲಿಯುಗದಲ್ಲಿ ನಾನು ಈ ಚತುರ್ದಶಿಯಂದು ರಾತ್ರಿ ಸಮಯದಲ್ಲಿ ಮಾತ್ರವೇ ಭೂಮಿಯಲ್ಲಿ ಸಂಚರಿಸುತ್ತಾ ಎಲ್ಲಾ ಸ್ಥಾವರ ಜಂಗಮಲಿಂಗಗಳಲ್ಲೂ ಸಂಕ್ರಮಣ ಮಾಡುತ್ತೇವೆ. ಇಡೀ ವರ್ಷ ಜೀವಿಗಳು ಆಚರಿಸಿದ ಪಾಪಗಳನ್ನು ಪರಿಹಾರ ಮಾಡುತ್ತೇನೆ. ಹಗಲು ಸಮಯದಲ್ಲಿ ಆ ಮಹಿಮೆ ಇರುವುದಿಲ್ಲ ಎಂದು ಪರಶಿವನೇ ಘೋಷಣೆ ಮಾಡಿದುದಾಗಿ ಶಾಸ್ತ್ರವಾಕ್ಯವಿದೆ.

ಮಾಘಮಾಸಸ್ಯ ಕೃಷ್ಣಾಯಾಂ ಚತುರ್ದಶ್ಯಾಂ ಸುರೇಶ್ವರ ॥
ಅಹಂ ವತ್ಸ್ಯಾಮಿ ಭೂಪೃಷ್ಟೇ ರಾತ್ರೌ ನೈವ - ದಿವಾಕತಾ.
ಲಿಂಗೇಷು ಚ ಸಮಸ್ತೇ ಷು ಚಲೇಷು ಸ್ಥಾವರೇ ಷ ಚು
ಸಂಕ್ರಮಿಷ್ಯಾಮ್ಯ ಸಂದಿಗ್ಧಂ ವರ್ಷ ಪಾಪ ವಿಶುದ್ಧಯೇ (ನಾಗರಖಂಡ)

ವ್ರತಾಚರಣೆಗೆ ಅಂದು ರಾತ್ರಿ ಸಮಯವೇ ಪ್ರಶಸ್ತವೆಂಬುದನ್ನು ಈ ಸ್ಕಂದಪುರಾಣದ ವಾಕ್ಯವೂ ಸಮರ್ಥನೆ ಮಾಡುತ್ತದೆ.ಆ ಚತುರ್ದಶಿಯಂದು ರಾತ್ರಿಯಲ್ಲಿ ಶೂಲಪಾಣಿ ಶಿವನೂ,ಆತನ ಶಕ್ತಿಗಳೂ ಮತ್ತು ಭೂತಗಣಗಳೂ ಸಂಚಾರ ಮಾಡುವುದರಿಂದ ಆಗಲೇ ಅವರ ಪೂಜೆಯನ್ನು ಆಚರಿಸಬೇಕು. ಅಂದು ಚತುರ್ದಶಿಯ ವ್ಯಾಪ್ತಿಯು ಯಾವ ಸಮಯದಲ್ಲಿರಬೇಕು? ಎಂದರೆ ರಾತ್ರಿ (ನಿಷೇಥ) ಸಮಯದಲ್ಲಿರಬೇಕು ಎಂಬ ಶಾಸ್ತ್ರವಾಕ್ಯ. ಪ್ರದೋಷ ಸಮಯದಲ್ಲಿ ವ್ಯಾಪ್ತಿ ಇರಬೇಕು ಎಂಬ ಅಭಿಪ್ರಾಯ ಶಾಸ್ತ್ರದ ದೃಷ್ಟಿಯಿಂದ ನೋಡೋಣ.

ನಿಶೇಥಾಸಂಯುತಾ ಯಾತು
ಕೃಷ್ಣಪಕ್ಷೇ ಚತುರ್ದಶೀ
ಉಪ್ರೋಷ್ಯಾ ಸಾ ತಿಥಿ ಃ
ಶ್ರೇಷ್ಠಾ ಶಿವ ಸಾಯುಜ್ಯ
ಕಾರಿಣೀ (ಸ್ಕಾಂದ 1-1-33)
ಪ್ರದೋಷ ವ್ಯಾಪಿನೀ ಗ್ರಾಹ್ಯಾ
ಶಿವರಾತ್ರಿ ಚತುರ್ದಶೀ
ರಾತ್ರಾ ಜಾಗರಣಂ ಯಸ್ಮಾತ್
ತಸ್ಮಾತ್ತಾಂ ಸಮುಪ್ರೋಷ
ಯೇತ್ (ಹೇಮಾದ್ರಿ)

ಅರ್ಥ ರಾತ್ರಿಗೆ ಮೊದಲೂ ಚತುರ್ದಶಿಯ ವ್ಯಾಪ್ತಿ ಇರಬೇಕು. ಅನಂತರವೂ ಚತುರ್ದಶಿಯ ವ್ಯಾಪ್ತಿ ಇರಬೇಕು. ಆಗಲೇ ಶಿವರಾತ್ರಿ ವ್ರತವನ್ನು ಆಚರಿಸಬೇಕು ಎನ್ನುತ್ತದೆ ಈಶಾನಸಂಹಿತೆ. ಶಿವರಾತ್ರಿ ಸಮಯದಲ್ಲಿ ತಿಳಿದೋ ತಿಳಿಯದೆಯೋ ಯಾವುದೇ ಕಾರಣದಿಂದಲಾದರೂ ಉಪವಾಸವನ್ನು ಮಾಡಿದರೂ ಚಿತ್ತ ಶುದ್ಧಿಯಾಗುತ್ತದೆ. ಅಜ್ಞಾನದಿಂದಲಾದರೂ ಶಿವಲಿಂಗದ ಮೇಲೆ ಬಿಲ್ವಪತ್ರವನ್ನು ಮತ್ತು ಜಲಾಭಿಷೇಕವನ್ನು ಮಾಡಿದರೆ ಮಹಾ ಪುರುಷಾರ್ಥ ಸಿದ್ಧಿಯುಂಟಾಗುತ್ತದೆ ಎಂಬ ಕಥೆಯು ಇದೆ. ಅವುಗಳಲ್ಲಿ ಬೇಡರ ಕಣ್ಣಪ್ಪನ ಕಥೆ ಸುಪ್ರಸಿದ್ಧವಾಗಿದೆ. ಗುರು ದ್ರುಹ-ಸುಂದರ ಸೇನಕ-ಚಂಡ ನಡೆದು ಸವೆದುಹೋದ ಪಾದ ರಕ್ಷೆ ಪಶು ಪತಿಯ ದೇಹಕ್ಕೆ ದರ್ಭೆಯಾಯಿತು.ಅವನು ಉಗು ಆದ ನೀರು ಈಶ್ವರನಿಗೆ ದಿವ್ಯಾಭಿಷೇಕದ ನೀರಾಯ್ತು, ಎಂಜಲ ಮಾಂಸದ ಚೂರು ನೈವೇದ್ಯವಾಯ್ತು. ಕಾಡು ಮನುಷ್ಯಶ್ರೇಷ್ಠ ಭಕ್ತನಾದ.ಈ ಎಲ್ಲಾ ಕಥೆಗಳೂ ಒಂದು ನಿರ್ಣಯವನ್ನು ಘೋಷಣೆ ಮಾಡುತ್ತವೆ. ಶ್ರದ್ಧೆ, ವಿಶ್ವಾಸ ಅರಿವು ಯಾವುದೂ ಇಲ್ಲದೆ ಯಾವುದೋ ಕಾರಣದಿಂದ ಶಿವರಾತ್ರಿಯಂದು ಉಪವಾಸ ಮಾಡಿ ಶಿವನಿಗೆ ಅಭಿಷೇಕ ಮತ್ತು ಬಿಲ್ವ ಪತ್ರೆಗಳನ್ನು ಅರ್ಪಿಸಿದ್ದರಿಂದಲೇ ಇಂಥಾ ಒಳ್ಳೆಯ ಗತಿಯು ಬರುವಾಗ ಭಕ್ತಿ, ಶ್ರದ್ಧೆ,ವಿಶ್ವಾಸ,ಜ್ಞಾನಪೂರ್ವಕವಾಗಿ ಅಂದು ಉಪವಾಸ ಮಾಡಿ ಶಿವ ಪೂಜೆ ಮಾಡಿದವನಿಗೆ ಶ್ರೇಷ್ಠವಾದ ಪುರುಷಾರ್ಥದ ಸಿದ್ಧಿ ಏಕತಾನೇ ಆಗುವುದಿಲ್ಲ? ಎಂಬುದು ಆ ನಿರ್ಣಯ "ಏವ ಮಜ್ಞಾನತಃ ಪುಣ್ಯಂ ಜ್ಞಾನಾ ತ್ಪುಣ್ಯ ಮಥಾ ಭಯಂ" (ಗರುಡ-ಪುರಾಣ- 1-124 ) ಶಿವನು ಯಾವುದೇ ಒಂದು ಜನಾಂಗದ ದೇವತೆಯಾಗಿರದೆ ಸರ್ವ ಭೂತಗಳಿಗೂ ಅಧಿಪತಿಯಾದ ಈಶ್ವರ,ಶ್ರುತಿ,ಸ್ಮ ೃತಿ,ಇತಿಹಾಸ,ಪುರಾಣ,ಆಗಮಗಳಲ್ಲಿ ಪ್ರತಿಪಾದಿಸಲ್ಪಟ್ಟ ವೈದಿಕ-ತಾಂತ್ರಿಕ ಮುಂತಾದ ನಾನಾ ಮಾರ್ಗಗ ಆಂದ ಆರಾಧಿಸಲ್ಪಡುವ ಭಗವಂತ-ಅವನನ್ನು-ಈ ಮಹಾಯೋಗವಾದ ಮಹಾಶಿವರಾತ್ರಿಯಂದು ಯಥಾ ವಿಧಿಯಾಗಿ ವಿಶೇಷವಾಗಿ ಆರಾಧಿಸುವ ಸುಕೃತಿಗಳು ಮತ್ತು ಸರ್ವ ಪುರುಷಾರ್ಥ ಸಿದ್ಧಿ ಎಂಬ ತತ್ತ್ವವನ್ನು ಪಡೆಯುತ್ತಾರೆ ಎಂಬುದು ಈ ಕಥೆಗಳ ತಾತ್ಪರ್ಯ.



ಹೀಗೆ ಶಿವರಾತ್ರಿಯ ಮಹಾ ಪರ್ವದ ನಿಮಿತ್ತ ಭಗವಾನ್ ಈಶ್ವರನ್ನು ಪೂಜಿಸಿ ನಮ್ಮ ಸಮಸ್ತ ಪಾಪಗಳನ್ನು ಕಳೆದುಕೊಂಡು ದೇವದೇವನ ದಿವ್ಯ ಅನುಗ್ರಹವನ್ನು ಪಡೆದುಕೊಳ್ಳೋಣ.



# ಭಗವದ್ಗೀತೆಯಲ್ಲಿ ಗಾಯಿತ್ರಿ ಮಂತ್ರಚಿಂತನೆ

**ವಿ. ನಾಗೇಂದ್ರ ಪ್ರಸಾದ್**

98454 00816

**ಹಿಂದಿನ ಸಂಚಿಕೆಯಿಂದ**

**ತತ್**

ತತ್ ಶಬ್ದಕ್ಕೆ ಅನೇಕ ಅರ್ಥಗಳಿವೆ ಅದರಲ್ಲಿ ವ್ಯಾಪ್ತ ಎಂಬ ಅರ್ಥವೂ ಇದೆ. ಜ್ಞಾನ ಹಾಗೂ ಜ್ಞೇಯಗಳನ್ನು ಅರ್ಜುನನಿಗೆ ವಿವರಿಸುವಾಗ,ಜ್ಞೇಯದ (ತಿಳಿದುಕೊಳ್ಳಬೇಕಾದ ವಸ್ತು) ಬಗ್ಗೆ ಹೀಗೆ ಹೇಳುತ್ತಾನೆ "ಸರ್ವತಃಪಾಣಿ ಪಾದಂ ತತ್ ಸರ್ವತೋऽಕ್ಷಿ ಶಿರೋಮುಖಮ್।ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ॥ ಏತದ್ವಿಜ್ಞಾಯ ಮದ್ಭಾವಾಯೋಪ ಪದ್ಯತೇ" (13/14-19) ಅದಕ್ಕೆ ಎಲ್ಲೆಡೆಯೂ ಕೈಕಾಲುಗಳು,ಕಣ್ಣು,ತಲೆ,ಬಾಯಿಗಳು,ಕಿವಿಗಳು. ಅದು ವಿಶ್ವದಲ್ಲಿನ ಎಲ್ಲವನ್ನೂ ವ್ಯಾಪಿಸಿ ನಿಂತಿದೆ. ಬ್ರಹ್ಮತತ್ವದಂತೆ ಅದರ ಸಕಲೇಂದ್ರಿಯಗಳೂ ಸಕಲ ಅವಯವಗಳೂ ಪರಿಪೂರ್ಣ ಸರ್ವತ್ರ ವ್ಯಾಪ್ತ.ಅದು ತ್ರಿಗುಣರಹಿತ, ಸಕಲ ಸದ್ಗುಣಗಳ ಆಗರ, ಅತ್ಯಂತ ಸೂಕ್ಷ್ಮ ಇಂದ್ರಿಯಗಳಿಗೂ ಅಗೋಚರ. ಹೀಗೆ ಸಂಗ್ರಹವಾಗಿ ನಾನು ಹೇಳಿದ್ದನ್ನು ತಿಳಿದರೆ ನನ್ನ ಭಕ್ತ ನನ್ನಲ್ಲಿ ನೆಲೆಸಿದಂತೆ ಅಥವಾ ವಿಭೂತಿಯೋಗದಲ್ಲಿ"ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಂ ರವಿರಂಶು ಮಾನ್"ಎಂಬ ಶ್ಲೋಕದಲ್ಲಿ ವಿಷ್ಣುಪದದಿಂದ ಶ್ರೀಮಧ್ವಾಚಾರ್ಯರು ವ್ಯಾಪ್ತ ಎಂಬ ಅರ್ಥವನ್ನು ಯುಕ್ತಿಯಿಂದ ಸಮನ್ವಯ ಮಾಡಿದ್ದಾರೆ. ವಿಷ್ಣು ಎಂದರೆ ವ್ಯಾಪ್ತ (ವಿಷ್ಲ್ ವ್ಯಾಪ್ತೌ ಎಂಬ ಧಾತು) ವಿಷ್ಣುಃ ಸರ್ವವ್ಯಾಪಿತ್ವ ಪ್ರವೇಶಿತ್ವದೇ ಅಂದರೆ ಸರ್ವವ್ಯಾಪ್ತ, ಎಲ್ಲವನ್ನು ಪ್ರವೇಶಿಸಿಕೊಂಡಿರುವುದು ಆದ್ದರಿಂದ ವಿಷ್ಣು ತಾವು ಹೇಳಿದ ಅರ್ಥಕ್ಕೆ ಮೋಕ್ಷ ಧರ್ಮದ ವಚನವನ್ನು ಪ್ರಮಾಣವನ್ನಾಗಿ ನೀಡುತ್ತಾರೆ "ವ್ಯಾಪ್ತೌಯೇ ರೋದಸೀ ಪಾರ್ಥಕಾಂತಿಶ್ಚಾಭ್ಯಧಿಕಾ ಮಮ. ಇತಿ ಮೋಕ್ಷ ಧರ್ಮೇ".

**ಸವಿತುಃ**

ಸವಿತ ಶಬ್ದಕ್ಕೆ ಸೂರ್ಯ ಎಂಬ ಪ್ರಸಿದ್ಧಾರ್ಥವಿದ್ದರೂ ಮುಖ್ಯಾರ್ಥದಿಂದ ಸೂರ್ಯನ ಅಂತರ್ಯಾಮಿಯಾದ ಸೂರ್ಯನಾರಾಯಣ ಎಂದೇ ಅರ್ಥ. ಸವಿತೃ ಎಂದರೆ ಜಗತ್ತಿನ ಸ್ರಷ್ಟಾರ (ಸಿತೃಕ್ಷು) ಎಂದು ಅರ್ಥ ಗೀತೆಯಲ್ಲಿ ಜಗತ್ತಿನ ಸೃಷ್ಟಿ ನನ್ನಿಂದಲೇ ಆಗಿರುವುದು ಎಂದು ಬಹಳ ಕಡೆ ಹೇಳಿದ್ದಾನೆ. ಒಂದು ಉದಾಹರಣೆ ನೋಡುವುದಾದರೆ "ಏತದ್ಯೋನಿ ಭೂತಾನಿ ಸರ್ವಾಣೀತ್ಯುಪಧಾರಯ ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ॥"(7/6) ಎಲ್ಲಾ ಪ್ರಾಣಿಗಳೂ ಜಡ ಹಾಗೂ ಚೇತನವೆಂಬ ಎರಡು ವಸ್ತುಗಳು ಪ್ರಕೃತಿಗಳಿಂದಲೇ ಜನಿಸಿವೆ ಎಂದು ತಿಳಿ. ನಾನು ಇವುಗಳ ಮೂಲಕ ಸಕಲ ಜಗತ್ತಿನ ಹುಟ್ಟು ಹಾಗೂ ಸಾವುಗಳಿಗೆ ಕಾರಣನಾಗಿರುವೆನು. ಇಲ್ಲಿ ಕೃಷ್ಣ ಅಹಂ ಕೃತ್ಸ್ನಸ್ಯ ಎಂದು ಒತ್ತಿ ನಾನೇ ಜಗತ್ಕರ್ತಾ ಹೊರತು ಬೇರೊಬ್ಬರಲ್ಲವೆಂದು ಸ್ಪಷ್ಟಪಡಿಸಿರುವುದು ಈ ಶ್ಲೋಕದಲ್ಲಿನ ವಿಶೇಷ."ಮಯಾऽಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್" (9/10) ಇಲ್ಲಿ ನನ್ನಿಂದಲೇ ಈ ಜಗತ್ತು ಹೆರುವುದು ಎಂಬುದನ್ನು ಸೂಯತೇ ಎಂಬ ವಾಕ್ಯದಿಂದ ಸ್ಪಷ್ಟಪಡಿಸಿದ್ದಾನೆ. ಪುರಂದರದಾಸರು ಈ ಪ್ರಮೇಯವನ್ನು ಬಹಳ ಸುಂದರವಾಗಿ ಹೀಗೆ ವಿವರಿಸಿದ್ದಾರೆ. "ಮಕ್ಕಳ ಪಡೆದರೇನು ನಿನ್ನ ಚೊಕ್ಕತನವು ಪೋಪುದೆಂದು ಪೊಕ್ಕಳೊಳು ಮಕ್ಕಳ ಪಡೆದು ಕಕ್ಕುಲಾತಿ ಪಡವಂತೆ (ಮರುಳು ಮಾಡಿಕೊಂಡಿಯಲ್ಲೇ ಮಾಯಾದೇವಿಯೇ ಎಂಬ ದೇವರನಾಮ.)



## ವರೇಣ್ಯಂ

ವರೇಣ್ಯಂ ವರ ಎಂದರೆ ಶ್ರೇಷ್ಠ,ಈಡ್ಯ ಎಂದರೆ ವಂದಿತ ಎಲ್ಲರಿಂದಲೂ ವಂದಿತನಾದ ಎಂದು ಅರ್ಥ.ಕೃಷ್ಣ ಅರ್ಜುನ ನಿಗೆ ವಿಶ್ವರೂಪದರ್ಶನ ತೋರಿಸಿದಾಗ ಅರ್ಜುನನ ಉದ್ಗಾರ ಗಳು ಅದ್ಭುತ. ಅದರಲ್ಲಿ ಬರುವ ಒಂದು ಶ್ಲೋಕವನ್ನು ಗಮನಿ ಸೋಣ "ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ ವಿಶ್ವೇಽ ಶ್ವಿನೌ ಮರುತಶ್ಚೋಷ್ಮಪಾಶ್ಚ।ಗಂಧರ್ವಯಕ್ಷಾ ಸುರಸಿದ್ಧ ಸಂಘಾ ವೀಕ್ಷಂತೇ ತ್ವಾಂ ವಿಸ್ಮಿತಾಶ್ಚೈವ ಸರ್ವೇ" (11/22) ರುದ್ರರು, ಆದಿತ್ಯರು, ವಸುಗಳು, ಸಾಧ್ಯರು, ವಿಶ್ವೇ ದೇವತೆಗಳು, ಅಶ್ವಿನಿಗಳು, ಮರತ್ತುಗಳು, ಪಿತೃಗಳು, ಗಂಧರ್ವರು, ಯಕ್ಷರು, ಅಸುರರು, ಸಿದ್ಧರು ಮೊದಲಾದ ಎಲ್ಲರೂ ಗುಂಪುಗುಂಪಾಗಿ ನಿನ್ನನ್ನು ಬೆರಗಾಗಿ ನೋಡಿ ವಂದಿಸುತ್ತಿರುವರು "ಮನ್ಮನಾಭವ ಮದ್ಯಾಜೀಮಾಂ ನಮಸ್ಕುರು। ಮಾಮೇವೈಷ್ಯಸಿ ಯುಕ್ತೈವ ಮಾತ್ಮಾನಂ ಮತ್ಪರಾಯಣಃ(9/34) ಅರ್ಜುನ ನನ್ನಲ್ಲೇ ಮನಸ್ಸಿಡು, ನನ್ನಲ್ಲೇ ಭಕ್ತಿ ಮಾಡು, ನನ್ನನ್ನೇ ಆರಾಧಿಸು, ನನ್ನನ್ನೇ ವಂದಿಸು. ಹೀಗೆ ನನ್ನನ್ನು ನೆಚ್ಚಿ ಶರಣಾದಲ್ಲಿ ನನ್ನನ್ನೇ ಸೇರುವೆ. ಇದೇ ರೀತಿ ಅರ್ಥ ಬರುವಂತೆ ಇನ್ನೊಮ್ಮೆ ಧಾರ್ಢ್ಯ ಕ್ಕಾಗಿ "ಮನ್ಮನಾ ಭವ ಮದ್ಭಕ್ತೋ ಮದ್ಯಾಜಿ ಮಾಂ ನಮಸ್ಕುರು। ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ (18/65) ರಲ್ಲಿ ಪುನರುಚ್ಚರಿಸಿದ್ದಾನೆ. ಈ ಶ್ಲೋಕದಲ್ಲಿ ನನ್ನನ್ನೇ ಸೇರುವೆ ಎಂದು ಶಪಥ ಮಾಡುತ್ತೇನೆ ಎಂದು ಅರ್ಜುನನಿಗೆ ಉತ್ಸಾಹ ತುಂಬಿದ್ದಾನೆ.

## ಭರ್ಗ

ಭರ್ಗ ಶಬ್ದಕ್ಕೆ ಅಮರಕೋಶ ರುದ್ರ ಎಂದು ಅರ್ಥ ಮಾಡಿದೆ (ಯೌಗಿಕಾರ್ಥದಲ್ಲಿ ರುದ್ರ ಪದ ಪರಮಾತ್ಮನನ್ನೇ ಪ್ರತಿ ಪಾದಿಸುವುದು).ವಾಸ್ತವವಾಗಿ ಭರ್ಗಶಬ್ದಕ್ಕೆ ಭರಣಗಮನ ಕರ್ತಾ ಎಂದು ಅರ್ಥ. ಭ +ರ+ ಗ =ಭರ್ಗ. ಭ =ತೇಜಸ್ಸು (ಭಾ ದೀಪ್ತೌ ಎಂಬ ಧಾತು) ರ =ಆನಂದ, ಗ =ಗತಿ / ಜ್ಞಾನ (ಗತಿ ಗಂಧನಯೋಃ ಎಂಬ ಧಾತು, ಯೇ ಯೇ ಗತ್ಯರ್ಥಕಾಃ ತೇ ತೇ ಜ್ಞಾನರ್ಥಕಾಃ), ಪರಮಾತ್ಮ ತೇಜೋ ಸ್ವರೂಪಿ. ಆನಂದ ಸ್ವರೂಪಿ ಹಾಗೂ ಜ್ಞಾನಸ್ವರೂಪಿ ಎಂದು ಭರ್ಗ ಶಬ್ದದ ಅರ್ಥ.ತೇಜಸ್ಸು ಎಂಬ ಅರ್ಥವಿಟ್ಟುಕೊಂಡಾಗ "ಯದ್ಯಾ ದಿತ್ಯಗತಂ ತೇಜೋ ಜಗದ್ಭಾಸಯತೇಽ ಖಿಲಮ್ಯಚ್ಚಂದ್ರಮ ಸಿಯಚ್ಚಾಗ್ನೌತತ್ ತೇಜೋವಿದ್ಧಿಮಾಮಕಮ್" (15/12). ಯಾವ ತೇಜಸ್ಸು ಸೂರ್ಯ ಚಂದ್ರ, ಅಗ್ನಿಯಲ್ಲಿ ಸಕಲ ಜಗತ್ತು ಬೆಳಗುವುದೋ ಆ ತೇಜಸ್ಸೇ ನನ್ನದೆಂದು ತಿಳಿ. ರಕ್ಕೆ ಆನಂದ ಎಂದು ಅರ್ಥವಿಟ್ಟುಕೊಂಡಾಗ."ಯಃಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ" (8/5) ಇಲ್ಲ ಮದ್ಭಾವ ಎಂಬ ವಾಕ್ಯಕ್ಕೆ ಆನಂದರೂಪಿಯಾದ ಭಗವಂತ ಎಂದು ಶ್ರೀಮದಾ ವಾಚಾರ್ಯರು ಅರ್ಥ ಮಾಡಿದ್ದಾರೆ. ಭರ್ಗ ಶಬ್ದಕ್ಕೆ ಧಾರಣೆ ಎಂದಿಟ್ಟು ಕೊಂಡರೆ ಕೃಷ್ಣ ತಾನೇ ಎಲ್ಲರನ್ನು ಧರಿಸಿರುವವನು ಎಂದು ಯುಕ್ತಿ ಯುಕ್ತವಾಗಿ "ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿಧನಂಜಯ। ಮಯಿ ಸರ್ವ ಮಿದಂಪ್ರೋತಂ ಸೂತ್ರೇ ಮಣಿಗಣಾ ಇವ।(7/7)ಅರ್ಜುನನಂತ ಮಿಗಿಲಾದ ಮತ್ತೊಂದು ಪರತರ ವಸ್ತುವಿಲ್ಲ. ಈ ಸಮಸ್ತ ಜಗತ್ತನ್ನು ನಾನೇ ಧರಿಸಿ ದ್ದೇನೆ. ಒಂದು ಹಾರವಾಗಬೇಕಾದರೆ ಎಲ್ಲ ಮಣಿಗಳೂ ಅಥವಾ ಪುಷ್ಪಗಳು. ಹೇಗೆ ತಂತುವನ್ನು (ದಾರವನ್ನು) ಆಶ್ರಯಿ ಸಿಕೊಂಡಿರುತ್ತದೋ ಹಾಗೆ.ಇದೇ ಅರ್ಥವನ್ನು ಬರುವ ಇನ್ನೊಂದು ಶ್ಲೋಕ ಯೋಲೋಕತ್ರಯ ಮಾವಿಶ್ಯಬಿಭರ್ತ್ಯ ವ್ಯಯ ಈಶ್ವರಃ(15/17) ನಾನು ಮೂರು ಲೋಕಗಳೊಳಗಿದ್ದು, ಅವುಗಳನ್ನು ಧರಿಸಿ ಪೋಷಿಸುವವನು, ಅಳಿಯದವನು ಹಾಗೂ ಅಚಿಂತ್ಯ ಶಕ್ತಿಸಂಪನ್ನನು.

(ಮುಂದುವರೆಯುತ್ತದೆ)

# ಭೀಷ್ಮಾಷ್ಟಮಿ

- ಶ್ರೀಮತಿ. ಗಿರಿಜಾ ಎಸ್.ದೇಶಪಾಂಡೆ

ಭೀಷ್ಮಾಷ್ಟಮಿ ನಮ್ಮ ದೇಶದ ಮಹಾಕಾವ್ಯವಾದ ಮಹಾಭಾರತದ ಭೀಷ್ಮರಿಗೆ ಸಮರ್ಪಿತವಾದ ಹಿಂದೂ ಹಬ್ಬವಾಗಿದೆ. ಗಂಗಾಪುತ್ರ ಭೀಷ್ಮ. ಭೀಷ್ಮಪಿತಾಮಹಾ, ಭೀಷ್ಮ ಅಜ್ಜ ಎಂದು ಕರೆಯಲ್ಪಡುವ ಭೀಷ್ಮರು ಅವರೇ ಆಯ್ಕೆ ಮಾಡಿದ ದಿನದಂದು ತಮ್ಮ ದೇಹದಿಂದ ನಿರ್ಗಮಿಸಿದರೆಂದು ನಂಬಲಾಗಿದೆ. ಭೀಷ್ಮರ ಮೂಲ ಹೆಸರು 'ದೇವವ್ರತ' ಮಾಘ ಮಾಸದ ಶುಕ್ಲಪಕ್ಷದ ಅಷ್ಟಮಿಯನ್ನು ಭೀಷ್ಮಾಷ್ಟಮಿ ಯೆಂದು ಕರೆಯುತ್ತಾರೆ.



## ಇತಿಹಾಸ

ಭೀಷ್ಮಾಷ್ಟಮಿಯು ಮಹಾಭಾರತದ ಕುರು ಕ್ಷೇತ್ರ ಯುದ್ಧದಲ್ಲಿ ಮಡಿದು ಹೋರಾಡಿದ ಯೋಧ ಭೀಷ್ಮರ ಸ್ಮರಣಾರ್ಥ ಆಚರಿಸಲಾಗುತ್ತದೆ. ಭೀಷ್ಮರು ಶಂತನು ಮಹಾರಾಜರ ಮಗ. ಶಂತನು ಮಹಾರಾಜನು ತಮ್ಮ ಪುತ್ರ ಭೀಷ್ಮರಿಗೆ ಇಚ್ಛಾ ಮರಣದ ವರವನ್ನು ನೀಡಿದರು. ಭೀಷ್ಮರು ಮದುವೆಯಾಗದೇ ತಾನು ಎಂದಿಗೂ ತಮ್ಮ ತಂದೆಯ ಸಿಂಹಾಸನಕ್ಕೆ ನಿಷ್ಠನಾಗಿರಲು ಪ್ರತಿಜ್ಞೆ ಮಾಡಿದರು.

## ಭೀಷ್ಮಾಷ್ಟಮಿ ಆಚರಿಸುವ ಕ್ರಮಗಳು

ವೈಯಾಘ್ರಪದ ಗೋತ್ರಾಯ ಸಾಂಕೃತ್ಯ ಪ್ರವರಾಯಚ
ಗಂಗಾಪುತ್ರಾಯ ಭೀಷ್ಮಾಯ ಸರ್ವದಾ ಬ್ರಹ್ಮಚಾರಿಣೇ॥
ಭೀಷ್ಮಃ ಶಾಂತನವೋ ವೀರಃ ಸತ್ಯವಾದಿ ಜಿತೇಂದ್ರಿಯಃ
ಆಭಿರಭಿದ್ರ ವಾಪ್ನೋತು ಪುತ್ರಪೌತ್ರೋಚಿತಾಂ ಕ್ರಿಯಾಮ್॥

ಹೆಚ್ಚಾಗಿ ಜನರು ಭೀಷ್ಮರ ಗೌರವಾರ್ಥವಾಗಿ ಏಕೋದಿಷ್ಟಶ್ರಾದ್ಧ ಆಚರಣೆಯನ್ನು ಆಚರಿಸುತ್ತಾರೆ ನಂಬಿಕೆಯ ಪ್ರಕಾರ ತಂದೆಯಿಲ್ಲದ ಭಕ್ತರು ಮಾತ್ರ ಈ ಆಚರಣೆ ಮಾಡುವರು.

"ಭೀಷ್ಮ ಪಿತಾಮಹರ ಆತ್ಮಕ್ಕೆ ಶಾಂತಿಸಿಗಲೆಂದು ಜನರು ಹತ್ತಿರದ ನದಿತೀರಗಳಿಗೆ ಭೇಟಿ ನೀಡಿ ತರ್ಪಣೆ ಆಚರಣೆ ಮಾಡುತ್ತಾರೆ ಜೀವನ ಮತ್ತು ಸಾವಿನ ಚಕ್ರದಿಂದ ಹೊರ ಬರಲು ತಮ್ಮ ಆತ್ಮ ಶುದ್ಧೀಕರಿಸಲು ಬೇಯಿಸಿದ ಅನ್ನ ಎಳ್ಳನ್ನು ಅರ್ಪಿ ಸುತ್ತಾರೆ.

ಭಕ್ತರು ಹಗಲಿನಲ್ಲಿ ಉಪವಾಸ ಆಚರಿಸಿ ಅರ್ಘ್ಯ ಬಿಡುತ್ತಾರೆ ಅರ್ಘ್ಯವ್ ಭಗವಂತನ ಆಶೀರ್ವಾದ ಪಡೆಯಲು ಭೀಷ್ಮಾಷ್ಟಮಿಯ ಮಂತ್ರವನ್ನು ಪಠಿಸುತ್ತಾರೆ.

ಭಕ್ತರು ಗಂಗಾ ನದಿಯಲ್ಲಿ ಪವಿತ್ರಸ್ನಾನ ಮಾಡಿ ಅಥವಾ ಕುರುಕ್ಷೇತ್ರ ದಲ್ಲಿರುವ ಭೀಷ್ಮ ಕುಂಡದಲ್ಲಿ ಪವಿತ್ರ ಸ್ನಾನ ಮಾಡಿ ಪೂಜಿಸುತ್ತಾರೆ.

ಭೀಷ್ಮಪಿತಾಮಹರ ಮರಣ ವಾರ್ಷಿಕೋತ್ಸವವನ್ನು ಮಾಘ ಶುಕ್ಲ ಅಷ್ಟಮಿಯಂದು ಆಚರಿಸಲಾಗುತ್ತದೆ. ಈ ದಿನಕ್ಕೆ ಸಂಬಂಧಿಸಿದ ದಂತ ಕಥೆಯ ಪ್ರಕಾರ ಭೀಷ್ಮರು ತಮ್ಮ ದೇಹವನ್ನು ಬಿಡುವ ಮೊದಲು ಶಿಲ ದಿನಗಳ ಕಾಲ ಕಾಯುತ್ತಿದ್ದರು. ಇವರು ಉತ್ತರಾಯಣ ಶುಭ ದಿನದಂದು ತಮ್ಮ ದೇಹವನ್ನು ತೊರೆದರು. ಈ ಮಾಘಶುಕ್ಲ ಅಷ್ಟಮಿ ದಿನವನ್ನು ದೇವರುಗಳ ದಿನವೆಂದು ಕರೆಯಲಾಗುತ್ತದೆ. ಉತ್ತರಾಯಣದಲ್ಲಿ ಯಾವುದೇ ವ್ಯಕ್ತಿ ಮರಣ ಹೊಂದಿದರೆ ಅವನು ಸ್ವರ್ಗಕ್ಕೆ ಹೋಗುತ್ತಾನೆ ಎಂದು ನಂಬಲಾಗಿದೆ.

**"ಸರ್ವೇಜನ ಸುಖಿನೋ ಭವಂತು"**



# ಕೋಪೇಶ್ವರ ದೇವಸ್ಥಾನ

- ಶ್ರೀಮತಿ. ಮಾಲಾಪ್ರಸಾದ್

81053 65307

ಭಾರತ ದೇವಸ್ಥಾನಗಳ ಆಗರ. ಒಂದೊಂದು ದೇವಸ್ಥಾನವು ವಿಭಿನ್ನವಾಗಿದೆ. ತನ್ನದೇ ಆದ ವಿಶಿಷ್ಟತೆ, ಮಹತ್ವ, ಪಾವಿತ್ರತೆಯನ್ನು ಹೊಂದಿದೆ. ಕೆಲವು ದೇವಸ್ಥಾನಗಳು ತನ್ನ ವಾಸ್ತುಶಿಲ್ಪದಿಂದ ಪ್ರವಾಸಿಗರನ್ನು ಸೆಳೆದು ಪ್ರಸಿದ್ಧಿಗೊಂಡಿವೆ. ಇಂತಹ ಒಂದು ದೇವಸ್ಥಾನವೇ ಕೋಪೇಶ್ವರ ದೇವಸ್ಥಾನ. ಇದು ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ಕೊಲ್ಹಾಪುರ ಜಿಲ್ಲೆಯ ಕಿದ್ರಾಪುರದಲ್ಲಿದೆ. ಈ ಸುಂದರವಾದ ಕೋಪೇಶ್ವರ ದೇವಾಲಯವು ಕೃಷ್ಣಾ ನದಿಯ ದಡದಲ್ಲಿದೆ. ಈ ದೇವಸ್ಥಾನಕ್ಕೆ ದೇಶ-ವಿದೇಶದಿಂದ ಪ್ರವಾಸಿಗರು ಬರುತ್ತಾರೆ. ಇದು ಶಿವನ ಆಲಯವು ಮಾತ್ರವೇ ಅಲ್ಲದೆ, ಕಂಬ, ಗೋಡೆ, ಶಿಖರಗಳಲ್ಲಿ ಕಲಾಕೃತಿಗಳೇ ಮೇಳೈಸಿರುವ ಕಲಾ ದೇಗುಲ. ಈ ಆಲಯದಲ್ಲಿ ವಿಷ್ಣು ಹಾಗೂ ಶಿವ ಇಬ್ಬರೂ ಮುಖ್ಯ ದೇವರು. ಇಬ್ಬರಿಗೂ ಸರಿ ಸಮಾನವಾಗಿ ಪೂಜೆಗಳನ್ನು ನೆರವೇರಿಸಲಾಗುತ್ತದೆ. ಆಲಯವನ್ನು ಏಳನೇ ಶತಮಾನದಲ್ಲಿ ಬಾದಾಮಿಯ ಚಾಲುಕ್ಯರು ನಿರ್ಮಿಸಿದರು. ಔರಂಗಜೇಬನು ಆಳ್ವಿಕೆ ಮಾಡುವ ಕಾಲದಲ್ಲಿ ಅತ್ಯಂತ ಸೊಬಗಿನಿಂದ ಕೂಡಿರುವ ಈ ಹಿಂದೂ ದೇವಾಲಯವನ್ನು ನಾಶ ಮಾಡಬೇಕು ಎಂದು ಸಂಚು ರೂಪಿಸಿ, ದಾಳಿ ನಡೆಸಿದ್ದನಂತೆ. ನಂತರ 12 ನೇ ಶತಮಾನದಲ್ಲಿ ಶಿಲಾಹಾರ ಮತ್ತು ಯಾದವವಂಶದ ರಾಜರು ಆಲಯವನ್ನು ನವೀಕರಣಗೊಳಿಸಿದ್ದಾರೆ. ದೇವಸ್ಥಾನದ ಹೊರಾಂಗಣ ಹಾಗೂ ಒಳಾಂಗಣ ತುಂಬಾ ವಿಶಾಲವಾಗಿದೆ. ಆಲಯ ಪ್ರವೇಶಿಸಲು ಮೂರು ಬಾಗಿಲಗಳಿವೆ. ಶಿಲ್ಪಕಲೆಯನ್ನು ಹೊದ್ದು ನಿಂತಿರುವ ಕಲಾತ್ಮಕ ದೇಗುಲವಿದು. ದೇವಾಲಯ ಪ್ರವೇಶಿಸಿದಾಗ ಸಿಗುವ ಮೊದಲ ಆಕೃತಿಯೇ ಸ್ವರ್ಗಮಂಟಪ. ಸ್ವರ್ಗಮಂಟಪ ಉಳ್ಳ ಏಕೈಕ ದೇವಸ್ಥಾನ ಎಂದರೆ ಈ ಆಲಯವೇ ಆಗಿದೆ. ವರ್ತುಲಾಕಾರದಲ್ಲಿ ನಿರ್ಮಿಸಿರುವ ಆಕಾಶಕ್ಕೆ ತೆರೆದುಕೊಂಡಿರುವ ಮೇಲ್ಛಾವಣಿಯ ಪ್ರಾಂಗಣವೇ ಸ್ವರ್ಗಮಂಟಪ. ವೃತ್ತಾಕಾರದ ಛಾವಣಿ ಪೂರ್ಣಿಮೆ ಚಂದ್ರನ ಬಿಂಬನಂತೆ ಕಾಣುತ್ತದೆ. ಈ ಸ್ವರ್ಗ ಮಂಟಪದಲ್ಲಿ ಅದ್ಭುತ ಕೆತ್ತನೆಯುಳ್ಳ ಶಿಲ್ಪಕಲೆಗಳ ಕಂಬಗಳಿವೆ. ಪ್ರತಿ ಕಂಬವನ್ನು ಚದರ, ಷಟ್ಕೋನ ಮತ್ತು ಅಷ್ಟ ಕೋನಾಕೃತಿ ಆಕಾರಗಳಲ್ಲಿ ಕೆತ್ತಲಾಗಿದೆ.

ಸ್ವರ್ಗಮಂಟಪದ ಎದುರು ಗರ್ಭಗುಡಿ ಶಂಕುವಿನ ಆಕಾರದಲ್ಲಿದೆ. ಇದೇ ಇಲ್ಲಿನ ಗರ್ಭಗುಡಿಯ ವಿಶಿಷ್ಟತೆ. ಗರ್ಭಗುಡಿಯಲ್ಲಿ ಧೋಪೇಶ್ವರ (ವಿಷ್ಣು) ಮತ್ತು ಕೋಪೇಶ್ವರ ಶಿವಲಿಂಗಗಳಿವೆ. ಇಲ್ಲಿನ ಮತ್ತೊಂದು ವಿಶೇಷತೆಯೆಂದರೆ ಮಹಾ ವಿಷ್ಣುವು ಸಹ ಲಿಂಗದ ರೂಪದಲ್ಲಿಯೇ ದರ್ಶನ ನೀಡುತ್ತಾನೆ. ಗರ್ಭಗುಡಿಯ ದ್ವಾರದಲ್ಲಿ ದ್ವಾರಪಾಲಕರಾದ ಜಯ, ವಿಜಯರ ಸುಂದರ ವಿಗ್ರಹಗಳನ್ನು ಕೆತ್ತಲಾಗಿದೆ. ಗರ್ಭಗುಡಿಯ ಹೊರಾಂಗಣದಲ್ಲಿ ಆನೆಗಳು ಹಾಗೂ ವಿವಿಧ ಆಯುಧಗಳಿಂದ ವಿಜೃಂಭಿಸುವ ದೇವತೆಗಳನ್ನು ಕೆತ್ತಲಾಗಿದೆ. ಸುಮಾರು 92 ಆನೆಗಳ ವಿಗ್ರಹಗಳನ್ನು ಕೆತ್ತಲಾಗಿದೆ. ಕೆಲಭಾಗದಲ್ಲಿ ಕಟ್ಟಿರುವ ಆನೆಗಳನ್ನು ನೋಡಿದರೆ ಅವುಗಳನ್ನು ದೇವಸ್ಥಾನದ ಭಾರವನ್ನು ಬರುತ್ತಿರುವಂತೆ ಭಾಸವಾಗುತ್ತದೆ. ದೇವಾಲಯದ ಸುತ್ತಲೂ ರಾಮಾಯಣ ಹಾಗೂ ಮಹಾಭಾರತದ ವಿವಿಧ ಪ್ರಸಂಗಗಳನ್ನು ಬಿಂಬಿಸುವ ಶಿಲ್ಪಗಳನ್ನು ಕೆತ್ತಲಾಗಿದೆ. ಇಡೀ ದೇವಸ್ಥಾನದಲ್ಲಿ 48 ಸ್ತಂಭಗಳಿವೆ.

ಪ್ರತಿಯೊಂದು ಸ್ತಂಭವು ತನ್ನದೇ ಆದ ವಿಶಿಷ್ಟ ಶಿಲ್ಪಕಲೆಯಿಂದ ಮನ ಸೆಳೆಯುತ್ತದೆ.

**ಇಲ್ಲಿನ ಸ್ಥಳ ಪುರಾಣವನ್ನು ತಿಳಿಯೋಣ**

ದಕ್ಷ ಪ್ರಜಾಪತಿಯು ತನ್ನ ಮಗಳಾದ (ಸತಿದೇವಿ) ಪಾರ್ವತಿಯನ್ನು ಶಿವನಿಗೆ ಕೊಟ್ಟು ವಿವಾಹ ಮಾಡಲು ಒಪ್ಪಿಗೆ ನೀಡಿರಲಿಲ್ಲ. ಆದರೂ ಪಾರ್ವತಿ ದೇವಿಯು ತಂದೆಗೆ ವಿರುದ್ಧ ವಾಗಿ ಶಿವನನ್ನು ವರಿಸುತ್ತಾಳೆ. ಇದರಿಂದ ಕೋಪಗೊಂಡ ಪ್ರಜಾಪತಿಯು ಒಮ್ಮೆ ಯಜ್ಞವನ್ನು ಮಾಡುವಾಗ, ಪಾರ್ವತಿ ಯನ್ನು ಮಾತ್ರ ಕರೆದು ಶಿವನಿಗೆ ಆಮಂತ್ರಣ ನೀಡುವುದಿಲ್ಲ. ಪಾರ್ವತಿ ದೇವಿಯು ಶಿವನು ಬೇಡವೆಂದು ಎಷ್ಟೇ ಹೇಳಿದರೂ ಕೇಳದೆ, ನಂದಿಯನ್ನು ತನ್ನ ಜೊತೆಯಲ್ಲಿ ಕರೆದು ಕೊಂಡು ಯಜ್ಞಕ್ಕೆ ಹೋಗುತ್ತಾಳೆ. ಆದ್ದರಿಂದ ಈ ದೇವಸ್ಥಾನದಲ್ಲಿ ನಂದಿ ಇರುವುದಿಲ್ಲ. ಈ ಕಥೆಯು ಈ ದೇವಸ್ಥಾನಕ್ಕೆ ಆದರಿಸಿದೆ ಎಂದು ಹಲವರು ಹೇಳುತ್ತಾರೆ.

# ಪೂಜೆ ಸಮಯದಲ್ಲಿ ಘಂಟೆ ಬಾರಿಸುವುದು ಯಾಕೆ?

-ಪ್ರತ್ಯಗ್ರ

ಸನಾತನ ಧರ್ಮದಲ್ಲಿ ಹಲವಾರು ನಂಬಿಕೆ ಹಾಗೂ ಸಂಪ್ರದಾಯಗಳು. ಪ್ರತಿಯೊಂದಕ್ಕೂ ಸಂಪ್ರದಾಯ ಮತ್ತು ಬಳಸುವ ವಸ್ತು ಗಳಿಗೆ ವೈಜ್ಞಾನಿಕ ಕಾರಣಗಳು ಇವೆ. ಆದರೆ ಎಲ್ಲವೂ ಅಂತಿಮವಾಗಿ ದೇವರ ಆಶೀರ್ವಾದ ಪಡೆಯು ವುದು ಆಗಿರುವುದಾಗಿದೆ. ಹಿಂದೂ ಧರ್ಮವು ವಿವಿಧತೆಯಲ್ಲಿ ಏಕತೆಯನ್ನು ತೋರಿಸುತ್ತದೆ. ಯಾವುದೊಂದು ಶುಭ ಕಾರ್ಯ ವನ್ನಾಗಲೀ ಘಂಟಾನಾದವಿಲ್ಲದೆ ಪ್ರಾರಂಭಿಸುವಂತಿಲ್ಲ. ಘಂಟೆ ಪರಮಾತ್ಮನ ನಾಮ ಓಂಕಾರವನ್ನು ಉತ್ಪಾದಿಸು ತ್ತದೆ. ಇದರಿಂದ ದೇಹ ಶುದ್ಧಿ, ಮನಃಶಾಂತಿ ಲಭಿಸುತ್ತದೆ. ಘಂಟಾನಾದದಿಂದ ಸದ್ಗುಣ,ಧಾರ್ಮಿಕ ಪ್ರವೃತ್ತಿಗಳು ನಮ್ಮನ್ನು ಪ್ರವೇಶಿಸಲಿ,ಆಸುರೀ ಹಾಗೂ ದುಶ್ಚಟಗಳು ಹೊರದೂಡಲಿ, ಧರ್ಮದ ಪ್ರಜ್ಞೆ ಜಾಗೃತಿಯಾಗಿ ಪರಮಾತ್ಮನ ಕಡೆ ನಮ್ಮ ಮನಸ್ಸು ಕೇಂದ್ರೀ ಕೃತವಾಗಲಿ ಎಂಬ ಉದ್ದೇಶವಾಗಿದೆ.

ಸಚ್ಚಿದಾನಂದ ಸಾಕ್ಷಾತ್ಕಾರಕ್ಕೆ ಮೂಲವಾದ ನಾದ ತತ್ವದ ಬಾಹ್ಯಪ್ರಯೋಗವಾಗಿ ಘಂಟೆ ಬಳಕೆಗೆ ಬಂದಿತೆಂದೂ ಕ್ರಮೇಣ ದೇವತಾಲಾಂಛನವೆಂಬ ಗೌರವದಿಂದ ಪೂಜಾರ್ಹ ವಾಯಿತು ಎಂದು ಹೇಳಲಾಗಿದೆ. ಪೂಜಾಕಾಲವನ್ನು ಬಿಟ್ಟು ಇತರ ಕಾಲಗಳಲ್ಲಿ ಘಂಟಾನಾದವಿಲ್ಲ. ಗಂಟೆ ಎಂಬುದು ಸಂಸ್ಕೃತದ ಘಂಟಾ ಎಂಬುದರ ತದ್ಭವ ರೂಪ. ಶ್ರೀವೈಷ್ಣವ ಆಚಾರ್ಯ ಪರಂಪರೆಗೆ ಸೇರಿದ ವೇದಾಂತ ದೇಶಿಕರು ಭಗವಂತ ಘಂಟಾವತಾರವೆಂದು ಪ್ರತೀತಿ. ವೆಂಕಟೇಶನ ಭಕ್ತರಾದ ಇವರ ಮಾತಾಪಿತೃಗಳಿಗೆ ಬಹುಕಾಲದವರೆಗೆ ಸಂತಾನವಿರಲಿಲ್ಲ. ಒಮ್ಮೆ ಇವರು ಮಲಗಿದ್ದಾಗ ತಿರುಪತಿಯ ವೆಂಕಟೇಶನ ಗರ್ಭಗೃಹದ ಘಂಟೆಯನ್ನು ಆಚಾರ್ಯರ ತಾಯಿಯವರು ನುಂಗಿದಂತೆ ಸ್ವಪ್ನವನ್ನು ಕಂಡು ಬೆಳಗ್ಗೆ ದೇವಸ್ಥಾನದಲ್ಲಿ ನೋಡಲಾಗಿ ಆ ಘಂಟೆಯೂ ಇರಲಿಲ್ಲ. ತಮ್ಮ ತಾಯಿಯ ಗರ್ಭದಲ್ಲಿ ತಿರುಪತಿಯ ಶ್ರೀವೇಂಕಟೇಶ್ವರನ ಘಂಟಾ ಸ್ವರೂಪವಾಗಿ ಶ್ರೀಆಚಾರ್ಯರು ಅವಿರ್ಭವಿಸಿ ಘಂಟಾವತಾರ ವೆಂದು ಪ್ರಸಿದ್ಧರಾಗಿದ್ದಾರೆ.

ಒಂದು ಸಲ ಘಂಟೆಯ ಶಬ್ಧ ಮೊಳಗಿದರೆ ಅದು ವಾತಾವರಣದಲ್ಲಿ ಸುಮಾರು ಹತ್ತು ಸೆಕೆಂಡುಗಳ ಕಾಲ ಇರುವುದು. ಈ ಶಬ್ದವು ದೇಹದ ಏಳು ಶಮನ ಕೇಂದ್ರಗಳನ್ನು ಬಡಿದೆಬ್ಬಿಸುವುದು ಮತ್ತು ಮನಸ್ಸು ಶಾಂತವಾಗಿಸಿ ಏಕಾಗ್ರತೆ ಹೆಚ್ಚಿಸುವುದು. ಘಂಟೆಯ ಶಬ್ಧ ಮನಸ್ಸು, ದೇಹ ಮತ್ತು ಆತ್ಮಕ್ಕೆ ಶಕ್ತಿ ನೀಡುವುದು. ಇದೇ ಶಕ್ತಿ ದೇಹದ ರೋಗ ನಿರೋಧಕ ಶಕ್ತಿ ಹೆಚ್ಚಿಸಲೂ ಮನಸ್ಸಿನ ದುಗುಡ! ಒತ್ತಡ ಖಿನ್ನತೆಗಳನ್ನು ನಿವಾರಿಸಲೂ ನೆರವಾಗುತ್ತದೆ. ಸದ್ದು, ಗದ್ದಲವಿದ್ದಾಗ ಘಂಟ ನಾದದಿಂದ ನಮ್ಮ ಮನಸ್ಸು ಏಕಾಗ್ರತೆಗೆ ಹೋಗುತ್ತದೆ. ಘಂಟ ನಾದದ ಶಬ್ದದಿಂದ ಹೊರಡುವ ತರಂಗಗಳು ಕಿವಿಗೆ ಮತ್ತು ಕಿವಿಗೆ ಸಂಬಂಧಪಟ್ಟ ನರಗಳ ಮೇಲೆ ಒಳ್ಳೆಯ ಪ್ರಭಾವ ಬೀರಿ ಮನಸ್ಸು ಉಲ್ಲಾಸಭರಿತವಾಗುತ್ತದೆ. ಘಂಟ ನಾದದಿಂದ ಜನ ರಿಗೆ ಪೂಜೆಯ ಸ್ಥಳ ಗೊತ್ತಾಗುತ್ತದೆ. ನಮ್ಮ ಕೈಗಳಿಗೆ ವ್ಯಾಯಾಮ ದೊರಕಿ. ಕೈಯ ನರಗಳಿಗೆ ರಕ್ತ ಸಂಚಾರ ಸುಗುಮವಾಗುತ್ತದೆ. ನೆರೆ ಹೊರೆಯವರೊಂದಿಗೆ ಶಾಂತಿ ಮತ್ತು ಒಗ್ಗಟ್ಟಿನ ಸಂಕೇತವಾಗಿದೆ.



ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# "ಮಾಧವ ಜಯ ಜಯ ಶ್ರೀಧವ ಜಯ ಜಯ"

## ಆತ್ಮನಿವೇದನೆ ಕೀರ್ತನೆಯ ಒಳನೋಟ

ಧಾರಾವಾಹಿ

- ಡಾ|| ಸುಭಾಸ ಕಾಖಂಡಕಿ
79754 42458

ಈ ಕೀರ್ತನೆಯಲ್ಲಿ ದಾಸರು ಲೋಕರಕ್ಷಕನಾದ ಭಗವಂತನನ್ನು ಅವನ ಅಪರೂಪ ನಾಮಗಳೊಂದಾದ "ಮಾಧವ"ನೆಂಬ ನಾಮದಲ್ಲಿ ಜಯಕಾರ ಹೇಳುತ್ತಾ ಸ್ತುತಿ ಸಿದ್ದಾರೆ.

ಮಾಧವ ಜಯ ಜಯ ಶ್ರೀಧವ ಜಯ ಜಯ ।
ಯಾದವ ಕುಲಮಣಿ ಭೂದೇವಿ ಪ್ರಿಯ ॥ಪ॥

ಶ್ರೀ ಧವ=ಮಾಧವ-ಶ್ರೀಧವ ಎನ್ನುವಲ್ಲಿ-ಹೇ ಲಕ್ಷ್ಮೀ ದೇವಿಯ ರಮಣನೇ,"ಯಾದವ ಕುಲಮಣಿಯಾದ ಶ್ರೀ ಕೃಷ್ಣನೇ ! ನಿನಗೆ ಅತ್ಯಂತ ಪ್ರಿಯಳಾದ, ಜಗನ್ಮಾತೆಯಾದ ಶ್ರೀಭೂದೇವಿಗೆ ಪ್ರಿಯ ನಾದವನೇ! ನಿನಗೆ ಜಯ-ಜಯ" ಎಂದಿದ್ದಾರೆ, ದಾಸರು ಪಲ್ಲವಿಯಲ್ಲಿ,

**ಇನ್ನು ನುಡಿ - ೧ ಮತ್ತು ನುಡಿ ೨ ರಲ್ಲಿ**

ವಿದ್ಯಾಧರ ಮುನಿ ಸದ್ಯೋಜಾತ ವಿರಿಂ ।
ಚಾದ್ಯಾತೀತ ವೇದವೇದ್ಯ ಮುಕುಂದಾ ॥೧॥

ಸ್ವರ್ಣ ಗಿರೀಶ ಸುಪರ್ಣಾ ವಾಹನ ವಿಶ್ವ
ನಿರ್ಣಯ ಶೀಲ ದಯಾರ್ಣವ ಪೂರ್ಣಾ ॥೨॥

"ಅಗಾಧ ಪಂಡಿತರಾದ ಮುನಿಗಳಿಂದ ಸದಾ- ಸರ್ವದಾವಂದಿತನಾದವನೇ!ನೀನು ವಿರಿಂಚಾದ್ಯಾತೀತ" ಅಂದರೇ ಜಗತ್ತಿನ ನಿಯಮಗಳಿಗೆ ಅತೀತನಾದ ಪ್ರಭುವೇ! ವೇದಗಳಗೆಲ್ಲ ವೇದ್ಯನಾಗಿ ಆರಾಧಿಸಿಕೊಳ್ಳುತ್ತಿರುವ ಮುಕುಂದನೇ, ಗರುಡ ವಾಹನನಾಗಿ ವಿಶ್ವವನ್ನು ವ್ಯಾಪಿಸುತ್ತ-ಜಗತ್ತಿನ ನೀತಿ ನಿಯಮಗಳನ್ನೇ ನಿರ್ಣಯಿಸುವ ದಯಾಗುಣ ಪೂರ್ಣನೇ ! ಎಂದು ವಿಶೇಷ ಪದಗಳಿಂದ ಸ್ತುತಿಸಿ - ಇಂಥಹ ಮಾಧವನಿಗೆ ಜಯ - ಜಯ ಎಂದಿದ್ದಾರೆ ದಾಸರು

**ಇನ್ನು ನುಡಿ - 3 ರಲ್ಲಿ**

ಪುಣ್ಯ ಪುರುಷ ವರೇಣ್ಯ ದನುಜಾರಾ ।
ರಣ್ಯಪಾವಕ ದೋಷ ಶೂನ್ಯ ಗುಣಾಂಕಾ ॥3॥

ದಾಸರು-ಎಲ್ಲ ದೇವಾನುದೇವತೆಗಳಿಗೆ ಪುಣ್ಯ ಪುರುಷನಾಗಿರುವಂಥವನೇ ! ನೀನು ಸಕಲ ದೋಷಮುಕ್ತನು ಗುಣಾಂಕ ಅಂದರೇ ವಿಶೇಷ ಗುಣ ಪರಿಪೂರ್ಣನು-ಲಕ್ಷ್ಮೀದೇವಿಯಾಗಿ ಎಲ್ಲ ದೇವತೆಗಳು ನಿನ್ನ ಗುಣಗಳನ್ನು ವರ್ಣಿಸಿದರೂ ಕೂಡ ಅವು ಮುಗಿಯುವುದೇ ಇಲ್ಲ ಅಂತಹ ಗುಣ ಪರಿಪೂರ್ಣನು ನೀನು, ನಿನಗೆ ಜಯ ಜಯ ಎಂದು ಸ್ತುತಿಸಿದ್ದಾರೆ.

**ನುಡಿ - 4 ರಲ್ಲಿ**

ಕಠಿಣ ದಂಡಕ ದೇಶಾಟಣ ಪ್ಲವಂಗ ಸಂ
ಘಟಣಾಹಿ ಫಣ ನಟ ನಟನ ಶ್ರೀಮೂರ್ತೆ ॥ ೪ ॥

" ನಿತ್ಯ ನಿರಂತರವಾಗಿ ದೇಶಗಳನ್ನು ಸುತ್ತುವಂತೆ ನೀನು ಸರ್ವತ್ರನಾಗಿ ಸುತ್ತುತ್ತಿರುವೆ. ನೀನು ಆಡುವ ಆಟಗಳು ಜನ ರನ್ನು ಮಾಯೆಯೊಳು ಸಿಲುಕಿ -ಮಾಯಾವಿಯಂತೆ ನಟಿಸಿ ನೀನೆ ದೊಡ್ಡ ನಟನಾಗಿದ್ದೀಯಾ,ಹುಲು ಮಾನವರಾದ ನಮಗೇ ನಿನ್ನ ಆಟದ ಆಳ ತಿಳಿಯದು-ಇಂಥಹ ಶ್ರೀಕರ ಮೂರ್ತಿಯಾದ ನಿನಗೆ ಜಯ ಜಯ ಎಂದು ಸ್ತುತಿಸಿದ್ದಾರೆ ದಾಸರು.

**ಇನ್ನು ಕೊನೆಯ ನುಡಿಯಲ್ಲಿ**

ಕಿಂಕರ ರಕ್ಷಕ ನಿಶ್ಶಂಕ ಸದಾಸುರ
ಸಂಕಟ ಹಾರ ಪ್ರಸನ್ವೇಂಕಟ ಪ್ರಭುವೆ ॥5॥

ಹೇ ಶ್ರೀನಿವಾಸನೇ! ನಿನ್ನನ್ನು ನಂಬಿದ ಕಿಂಕರರನ್ನು ಸದಾ ರಕ್ಷಿಸುವವ ನೀನು ಅವರ ಸಂಕಟದ ಭಾರವನ್ನೆಲ್ಲ ನೀನೆ ಹೊತ್ತು ನಿಶ್ಶಂಕನಾಗಿ ನಿನ್ನ ಭಕ್ತರನ್ನು ಪೊರೆಯುವೆ. ನಿನ್ನನ್ನು ನೆನೆದಗಳಿಗೆ ಎಲ್ಲ ವಿಪತ್ತುಗಳಿಂದ ನಿನ್ನ ಭಕ್ತರನ್ನು ಪಾರು ಮಾಡುವೆ - ಇಂಥ ಪ್ರಸನ್ನವೆಂಕಟ ಪ್ರಭುವೇ ! ನಿನಗೆ ಜಯ - ಜಯ ಎಂದು ದಾಸರು ಅನನ್ಯವಾಗಿ ತಮ್ಮ ಆರಾಧ್ಯ ದೇವರಾದ ಶ್ರೀನಿವಾಸನನ್ನು ಸ್ತುತಿಸಿದ್ದಾರೆ.

॥ಹರೇ ಶ್ರೀನಿವಾಸ ॥






# ದೈತ್ಯ ತಾರತಮ್ಯ - ಒಂದು ವಿಶ್ಲೇಷಣೆ

- ಡಾ॥ ರಾಮಚಂದ್ರದಾಸ್ ಸಿ.ಜೆ.
9483384584

ಹಿಂದಿನ ಸಂಚಿಕೆಯಿಂದ

ಜ್ಞಾನಕರ್ಮೇಂದ್ರಿಯಗಳಿಗೆ ಅಭಿ - ।
ಮಾನಿ ಕಲ್ಯಾದಖಿಳ ದಿತಿಜರು
ಹೀನ ಕರ್ಮವ ಮಾಡಿ  ಮಾಡಿಸುತಿಹರು

ಈ ರೀತಿಯಾಗಿ ಜ್ಞಾನಕರ್ಮೇಂದ್ರಿಯಗಳ ಅಭಿಮಾನಿ ದೈತ್ಯರು ಜೀವರ ದುಷ್ಕರ್ಮಾನುಸಾರವಾಗಿ ತಮ್ಮ ಸಾಧನೆಯನ್ನು ಮಾಡಿಕೊಳ್ಳಲು, ಸಕಲ ಜೀವರುಗಳಲ್ಲಿದ್ದು ಭಗವಂತನ ಪ್ರೇರಣೆಯಿಂದ,ತಾರತಮ್ಯತ್ವೇನ ತಾವು ಪಾಪ ಕರ್ಮಗಳನ್ನು ಮಾಡಿ, ಜೀವರುಗಳಿಂದ ಮಾಡಿಸಿ, ತಮ್ಮಗಳ ಸಾಧನೆಯನ್ನು ಮಾಡಿಕೊಳ್ಳುವರು.

ರುದ್ರಾದಿ ದೇವತೆಗಳೂ ಕೂಡ, ಕೆಲವು ಕಾಲದಲ್ಲಿ ಕಲ್ಯಾದಿಗಳಿಂದ ಪ್ರೇರಿತರಾಗಿ ಭಗವಂತನಿಗೆ ವಿರುದ್ಧವಾದ ಕಾರ್ಯಗಳನ್ನು ಮಾಡಿರುವುದುಂಟು, ಇದು ಭಗವಂತನ ಸಂಕಲ್ಪದಂತೆ ಲೋಕ ವಿಡಂಬನಾರ್ಥವಾಗಿ ಮಾಡಲಾಗಿರುತ್ತದೆ. ಗರುಡಪುರಾಣದಲ್ಲಿ,

ಕಲ್ಯಾದ್ಯೈಃ ಪ್ರೇರಿತಾಃ ಸರ್ವೇ ರುದ್ರಾದ್ಯಾಪ್ಯಧಿಕಾರಿಣಃ ॥
ಕದಾಚಿತ್ಸುಸವಿರುದ್ಧಂಚ ಕುರ್ವಂತಿ ತವ ಸತ್ತಮಃ॥

ಎಂದು ಹೇಳಿದೆ,ಇದರಿಂದ ಉದ್ಭವಿಸಬಹುದಾದ ಅನುಮಾನವನ್ನು ಪರಿಹರಿಸಲು ತಾತ್ಪರ್ಯ ನಿರ್ಣಯದಲ್ಲಿ "ಶುದ್ಧೇ ಭಾಗವತೇ ಧರ್ಮೇ ನಿರತೊ ಯದ್ವೃಕೋದರಃ॥" ವಾಯುದೇವರು, ಬ್ರಹ್ಮದೇವರು, ಭಾರತೀ ಮತ್ತು ಸರಸ್ವತಿ ಇವರುಗಳಲ್ಲಿ ಕಲಿಯ ಪ್ರವೇಶವೇ ಇಲ್ಲ ಎಂದು ದೃಢಪಡಿಸಿದೆ.

ಪುಣಕರ್ಮವ ಪುಷ್ಕರಾದಿ ಹಿ - ।
ರಣ್ಯಗರ್ಭಾಂತರ್ಗತ ಬ್ರ ।
ಹ್ಮಣ್ಯದೇವನಿಗರ್ಪಿಸುತಲಿರು ಪಾಪಕರ್ಮಗಳ
ಜನ್ಯ ದುಃಖವ ಕಲಿಮುಖ್ಯಾದ್ಯರಿ
ಗುಣ್ಣಲೀವನು ಸಕಲ ಲೋಕ ಶ
ರಣ್ಯ ಶಾಶ್ವತ, ಮಿಶ್ರ ಜನರಿಗೆ  ಮಿಶ್ರಫಲವೀವ ॥

ಈ ಪದ್ಯದಲ್ಲಿ ಪಾಪ ಪುಣ್ಯ ಕರ್ಮಗಳೆರಡನ್ನು ಭಗವಂತನೇ ನಮ್ಮಲ್ಲಿ ನಿಂತು, ನಮ್ಮ ಕರ್ಮಾನುಸಾರ ಮಾಡಿ ಮಾಡಿಸಿದ್ದಾನೆಂದೂ ಅನುಸಂಧಾನಿಸಿ,ಭಗವಂತನಿಗೆ ಸರ್ವ ಸಮರ್ಪಣೆ ಮಾಡಿದರೆ,ಪುಣ್ಯ ಕರ್ಮಗಳ ಫಲವನ್ನು ತತ್ವಾಭಿಮಾನಿ ದೈತ್ಯರಿಗೆ ದೇವತೆಗಳಿಗೆ, ಪಾಪ ಕರ್ಮಗಳ ಫಲವನ್ನು ತತ್ವಾಭಿಮಾನಿ ಕೊಟ್ಟು, ಜೀವರಿಗೆ ಅದು ನಿರ್ಲೇಪವಾಗುವಂತೆ ಮಾಡಿ ಸಾಧನೆ ಮಾಡಿಸುತ್ತಾನೆ. ಇದರಿಂದ ಕರ್ಮನಾಶವಾಗುತ್ತದೆ, ಬಂಧಕವೂ ಆಗುವುದಿಲ್ಲ.

ಆದ್ದರಿಂದ ತತ್ವಾಭಿಮಾನಿ ದೈತ್ಯರು ನಮ್ಮಲ್ಲಿದ್ದು ನಮ್ಮ ಪಾಪಕರ್ಮಗಳನ್ನು ತಾರತಮ್ಯತ್ವೇನ  ಕಡಿಮೆ ಮಾಡಿಸಿ ತಾವು ಅವುಗಳ ಫಲವನ್ನುಣ್ಣುತ್ತಾರೆ. ಇಂತಹ ದೈತ್ಯರು ನಮ್ಮಲ್ಲಿದ್ದು ಕರ್ಮಗಳನ್ನು ಮಾಡಿಸುವಾಗಲೂ ಭಗವಂತನನ್ನು, ಪ್ರಾಣದೇವರನ್ನು ದ್ವೇಷಿಸುತ್ತಾ ಮಾಡಿಸುತ್ತಾರಾದ್ದರಿಂದ, ಅವರುಗಳನ್ನು ತಾರತಮ್ಯತ್ವೇನ ದೂಷಿಸುವುದು ಪುಣ್ಯಕರ್ಮ ಎಂಬುದು ದಾಸರ ಅಭಿಪ್ರಾಯ.

ಗರುಡಪುರಾಣ ಬ್ರಹ್ಮಕಾಂಡದ 12 ನೇ ಅಧ್ಯಾಯದಲ್ಲಿ, ಬ್ರಹ್ಮದೇವರು ಪರಮಾತ್ಮನನ್ನು ಸ್ತೋತ್ರ ಮಾಡುವ ಪ್ರಕರಣದಲ್ಲಿ ಈ ದೈತ್ಯ ತಾರತಮ್ಯದ ವಿಷಯವು  ಪ್ರಸ್ತಾಪವಾಗಿದೆ. ಇದನ್ನೇ ಆಧರಿಸಿ ದೈತ್ಯ ತಾರತಮ್ಯ ಸಂಧಿಯನ್ನು ಶ್ರೀಜಗನ್ನಾಥ ದಾಸರು ಹರಿಕಥಾಮೃತಸಾರದಲ್ಲಿ ರಚಿಸಿ, ಜೀವರ  ಸಾಧನೆ ಉಪಾಸನೆಗೆ ಅನುವು ಮಾಡಿಕೊಟ್ಟಿದ್ದಾರೆ.



# ಸುಖ, ಶಾಂತಿ, ಸಮೃದ್ಧಿಯ ಶಿವರಾತ್ರಿ...

– ಹನುಮಂತ.ಮ.ದೇಶಕುಲಕರ್ಣಿ,
94803 64915



ಮಾಘ ಮಾಸ ಕೃಷ್ಣ ಪಕ್ಷದ ಚತುರ್ದಶಿಯಂದು ಆಚರಿಸಲಾಗುವ ಶಿವರಾತ್ರಿ. ಶಿವ ಭಕ್ತರ ಪಾಲಿಗೆ ಮಂಗಳಕರ ರಾತ್ರಿ. ಹಗಲು ಉಪವಾಸವಿದ್ದು, ರಾತ್ರಿ ವೇಳೆ ಜಾಗರಣೆ ಮಾಡಿ, ಶಿವಧ್ಯಾನ ಮಾಡಿ ಶಿವನ ಕೃಪೆಗೆ ಪಾತ್ರವಾಗುವ ಶುಭ ದಿನ. ಸ್ಕಂದಪುರಾಣದಲ್ಲಿ ಶಿವರಾತ್ರಿ ಹಬ್ಬದ ಬಗ್ಗೆ ಉಲ್ಲೇಖವಿದೆ. ಶಿವರಾತ್ರಿಯು ಸಮಯ ಪೂಜೆಗೆ ಬಹು ಪ್ರಾಶಸ್ತ್ಯವಾದ ಸಮಯ...

ಆ ದಿನ ರಾತ್ರಿಯಲ್ಲಿ ಮೋಡಗಳಿಲ್ಲದ ಶುಭ್ರ ಆಕಾಶ, ಮಂಗಳಕರನಾದ ಶುಭ್ರ ಚಂದ್ರ ಸ್ಫೂರ್ತಿ ಹುಟ್ಟಿಸುವ ಸಂವೇದನಾಶೀಲ ವಾತಾವರಣವನ್ನು ಕಾಣಬಹುದು...

ಈ ಪರ್ವಕಾಲವು ಪೂಜೆಗೆ ಪ್ರಶಸ್ತವಾದ ಕಾಲವಾಗಿದ್ದು ಶಿವನ ಆರಾಧನೆ ಮಾಡಿದರೆ ಪಾಪ ಕರ್ಮಗಳನ್ನು ಕಳೆಯುತ್ತಾನೆ ಎಂಬ ಪ್ರತೀತಿ ಇದೆ.



ಈ ದಿನ ಶಿವನನ್ನು ಭಕ್ತಿಯಿಂದ ಪೂಜಿಸಿದರೆ,ತಾವು ಮಾಡಿದ ಪಾಪಗಳೆಲ್ಲವೂ ಪರಿಹಾರವಾಗಿ,ಮೋಕ್ಷ ಪ್ರಾಪ್ತವಾಗುತ್ತದೆ ಎಂಬುದು ಭಕ್ತರ ಬಲವಾದ ನಂಬಿಕೆ. ಮದುವೆಯಾಗದ ಹೆಣ್ಣುಮಕ್ಕಳು ಶಿವ ಗುಣರೂಪಿಯಾದ ಅನುರೂಪ ಪತಿಗಾಗಿ ಪ್ರಾರ್ಥಿಸಿದರೆ, ಮುತ್ತೈದೆಯರು ಪತಿಯ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸುವುದು ಸಂಪ್ರದಾಯ. ಶಿವರಾತ್ರಿಯಂದು ಶಿವನನ್ನು ಪೂಜಿಸಿದರೆ,ಸುಖ,ಶಾಂತಿ, ಸಮೃದ್ಧಿ ದೊರೆಯುವುದೆಂಬ ನಂಬಿಕೆ ಆಸ್ತಿಕರದು.

ಶಿಶಿರ ಋತುವಿನ ಮಾಘ ಮಾಸದ ಕೃಷ್ಣಪಕ್ಷ ಚತುರ್ದಶಿಯಂದು ರಾತ್ರಿ ಸಮಯದಲ್ಲಿ ಶಿವ ಪಾರ್ವತಿ ಜೊತೆಯಲ್ಲಿ ಭೂಮಿಗೆ ಬರುತ್ತಾನೆ. ಭೂಮಿಯಲ್ಲಿ ಸಂಚರಿಸುತ್ತ ಎಲ್ಲ ಸ್ಥಾವರ ಜಂಗಮ ಲಿಂಗಗಳಲ್ಲಿ ಸಂಕ್ರಮಣಗೊಳ್ಳುತ್ತಾನೆ. ಆ ಸಮಯದಲ್ಲಿ ಅಂದ್ರೆ ಶಿವರಾತ್ರಿ ರಾತ್ರಿ ವೇಳೆಯಲ್ಲಿ ತನ್ನನ್ನು ಯಾರು ಪೂಜಿಸುವರೋ ಅವರ ಪಾಪಗಳು ಪರಿಹಾರವಾಗುತ್ತವೆ ಎಂದು ಸ್ವತಃ ಶಿವನೇ ತಿಳಿಸಿದ್ದಾನೆ ಎಂಬುದರ ಬಗ್ಗೆ ಶಾಸ್ತ್ರೋಕ್ತಿಯೂ ಇದೆ.

ಲಿಂಗಪುರಾಣದ ಪ್ರಕಾರ, ಲಿಂಗರೂಪಿಯಾಗಿ ಭಕ್ತರಿಗೆ ಅನುಗ್ರಹ ನೀಡಿದ ದಿನವಿದು. ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ವಿಷ್ಣು ಹಾಗೂ ಬ್ರಹ್ಮನಿಗೆ, ಶಿವರಾತ್ರಿಯಂದು ಶಿವ ಲಿಂಗರೂಪಿಯಾಗಿ ದರ್ಶನ ನೀಡಿದ ಎಂಬುದು ಪ್ರತೀತಿ. ಹಿಂದೆ ಬೇಡನೊಬ್ಬ ಕಾಡಿನಲ್ಲಿ ಬೇಟೆಗಾಗಿ ತೆರಳಿದ್ದ. ದಿನವಿಡಿ ಅಲೆದರೂ ಆತನಿಗೆ ಯಾವುದೇ ಬೇಟೆ ಸಿಗಲಿಲ್ಲ. ಬೇಟೆ ಅರಸಿ ಹೊರಟ ಬೇಡ ದಾರಿ ತಪ್ಪಿ ಅರಣ್ಯದಲ್ಲೇ ಅಲೆಯ ತೊಡಗಿದ. ಅದಾಗಲೇ ಸಂಜೆಯಾಗಿತ್ತು, ಕ್ರೂರ ಪ್ರಾಣಿಗಳು ಆತನನ್ನು ಸುತ್ತುವರಿಯ ತೊಡಗಿದವು.ಭಯಗ್ರಸ್ತನಾದ ಬೇಡ ಮರವೇರಿದ. ಮನದಲ್ಲೇ ಶಿವನನ್ನು ಧ್ಯಾನಿಸುತ್ತಾ ಮರದ ಎಲೆಗಳನ್ನು ಕಿತ್ತು ಕೆಳಗಡೆ ಹಾಕತೊಡಗಿದ.

ಆ ಎಲೆಗಳು ಅವನಿಗರಿವಿಲ್ಲದಂತೆಯೇ ಕೆಳಗಡೆಯಿದ್ದ ಶಿವಲಿಂಗದ ಮೇಲೆ ಬೀಳತೊಡಗಿದವು.ಕಾಕತಾಳೀಯವೆಂದರೆ ಆತ ಏರಿದ್ದ ಮರ ಬಿಲ್ವಮರವಾಗಿತ್ತು. ಶಿವರಾತ್ರಿಯಂದು ಪೂರ್ತಿ ಜಾಗರಣೆಯಿದ್ದು, ಬಿಲ್ವಪತ್ರೆಯನ್ನು ಶಿವನಿಗೆ ಅರ್ಪಿಸಿದ ಬೇಡನಿಗೆ ಶಿವ ಅಭಯ ನೀಡಿದ. ಶಿವನೇ ಆತನನ್ನು ರಕ್ಷಿಸಿದ ಎಂಬ ಸುದ್ದಿ ಹರಡಿ ಭಕ್ತರು ಶಿವರಾತ್ರಿಯಂದು ಶಿವನನ್ನು ಪೂಜಿಸಲು ಆರಂಭಿಸಿದರು. ಪುಣ್ಯ ಫಲವಾಗಿ ಬೇಡ ಮುಂದಿನ ಜನ್ಮದಲ್ಲಿ ರಾಜಾ ಚಿತ್ರಭಾನುವಾಗಿ ಜನಿಸಿದ



ಎಂಬುದು ಕಥೆ. ಮಹಾಭಾರತದಲ್ಲಿ ಬರುವ ಈ ಕಥೆಯನ್ನು ಮರಣಶಯ್ಯೆಯಲ್ಲಿ ಮಲಗಿದ್ದ ಭೀಷ್ಮ ಹೇಳಿದನೆಂಬುದು ಪ್ರತೀತಿ.

ಶಿವನಿಗೆ ಶಿವರಾತ್ರಿ ಅತ್ಯಂತ ಪ್ರಿಯವಾದ ದಿನ. ಶಿವರಾತ್ರಿಯಂದು ತನ್ನನ್ನು ಪೂಜಿಸುವ ಭಕ್ತರಿಗೆ ತಾನು ವಿಶೇಷವಾಗಿ ಅನುಗ್ರಹ ನೀಡುವುದಾಗಿ ಸ್ವತಃ ಶಿವನೇ ಪಾರ್ವತಿಯಲ್ಲಿ ಅರುಹಿದ್ದಾನೆ ಎನ್ನುತ್ತದೆ ಶಿವಪುರಾಣ. ಶಿವ-ಪಾರ್ವತಿಯರ ವಿವಾಹ ಮಹೋತ್ಸವದ ದಿನವಿದು ಎಂಬುದು ವಿಶೇಷ. ಹಿಮವಂತನ ಮಗಳು ಪಾರ್ವತಿ ಈ ದಿನದಂದು ರಾತ್ರಿಯಿಡಿ ಶಿವನಾಮ ಪಠಿಸುತ್ತಾ,ತಪಸ್ಸು ಮಾಡಿ,ಶಿವನನ್ನು ಮೆಚ್ಚಿಸಿ ವಿವಾಹವಾದಳೆಂಬುದು ಪ್ರತೀತಿ. ಶಿವ ರುದ್ರತಾಂಡವ ನಾಡಿದ ರಾತ್ರಿಯೂ ಇಂದೇ ಎನ್ನಲಾಗುತ್ತದೆ.ದೇವತೆಗಳು ಹಾಗೂ ಅಸುರರ ನಡುವೆ ಸಮುದ್ರಮಂಥನ ನಡೆದು ವಿಷ ಉದ್ಭವವಾದಾಗ, ಅದನ್ನು ಶಿವ ಕುಡಿದ, ವಿಷಗಂಟಲೊಳಗಿಂದ ಇಳಿಯದಂತೆ ಪಾರ್ವತಿ ಇಡೀ ರಾತ್ರಿ ತಡೆದಳು ಎನ್ನುತ್ತದೆ. ಶಿವಪುರಾಣದ ಇನ್ನೊಂದು ಮಹಿಮೆ.ಹಾಗಾಗಿ,ಭಕ್ತರು ಇಡೀ ರಾತ್ರಿ ಎಚ್ಚರವಿದ್ದು, ನೀಲ ಕಂಠನನ್ನು ಸ್ತುತಿಸುತ್ತಾರೆ. ಭಗೀರಥನ ತಪಸ್ಸಿಗೆ ಮೆಚ್ಚಿ ಇಳೆಗೆ ಇಳಿದು ಬಂದ ಗಂಗೆಯನ್ನು ಶಿವ ತನ್ನ ಜಡೆಯಲ್ಲಿ ತುಂಬಿಸಿಕೊಂಡಿದ್ದ. ಇದರಿಂದ ವಿಚಲಿತನಾದ ಭಗೀರಥ ಗಂಗೆಯನ್ನು ಭೂಮಿಗೆ ಹರಿಸುವಂತೆ ಶಿವನನ್ನು ಪ್ರಾರ್ಥಿಸಿದ. ಆತನ ಭಕ್ತಿಗೆ ಮೆಚ್ಚಿ ಶಿವ ಗಂಗೆಯನ್ನು ಹರಿಯ ಬಿಟ್ಟಿದ್ದು ಇದೇ ದಿನ ಎನ್ನುತ್ತದೆ ಪುರಾಣ.

### ಉಪವಾಸ ಮತ್ತು ಜಾಗರಣೆ :

ಶಿವನನ್ನು ಪೂಜಿಸುವುದರಿಂದ ಕರುಣಾಮಯಿಯಾದ ಶಿವನು ಸರ್ವರನ್ನು ಅನುಗ್ರಹಿಸುತ್ತಾನೆ ಎಂಬ ಪ್ರತೀತಿ ಇದೆ. ಬೇಡರ ಕಣ್ಣಪ್ಪನು ಶಿವನನ್ನು ಪೂಜಿಸಿದ್ದರಿಂದ ಅವನನ್ನು ಅನುಗ್ರಹಿಸಿ ಮುಕ್ತಿಮಾರ್ಗ ತೋರಿಸಿದನು. ಸ್ಕಂದಪುರಾಣದ ಪ್ರಕಾರ ಬೇಡ ಚಂದ್ರನನಿಗೂ ಶಿವನು ಅನುಗ್ರಹ ನೀಡಿದ್ದಾನೆ.ಗರುಡ ಮತ್ತು ಅಗ್ನಿ ಪುರಾಣಗಳಲ್ಲಿ ಉಲ್ಲೇಖವಿರುವಂತೆ, ಬೇಡ ಸುಂದರ ಸೇನನಿಗೂ ಶಿವನು ಆಶೀರ್ವಾದಿಸಿದ್ದಾನೆ. ಹೀಗಾಗಿ ಮಹಾಶಿವರಾತ್ರಿಯಂದು ಉಪವಾಸ ಮಾಡಿ ಶಿವನಿಗೆ ಅಭಿಷೇಕ ಮಾಡಿ, ಬಿಲ್ವಪತ್ರೆಗಳನ್ನು ಅರ್ಪಿಸುವುದರಿಂದ ಎಲ್ಲರಿಗೂ ಸದ್ಗತಿ ಪ್ರಾಪ್ತವಾಯಿತು.

### ಕೇದಗೆ ಹೂವೇಕೆ ಶಿವಪೂಜೆಗೆ ವರ್ಜ್ಯ ?

ಹಿಂದೆ ವಿಷ್ಣುವಿಗೂ ಮತ್ತು ಬ್ರಹ್ಮನಿಗೂ ತಮ್ಮಿಬ್ಬರಲ್ಲಿ ಯಾರು ಶ್ರೇಷ್ಠ ಎಂದು ವಾಗ್ವಾದ ಶುರುವಾಯಿತು. ಅದು ವಿಕೋಪಕ್ಕೆ ತಿರುಗಿ ಅವರು ಒಬ್ಬರ ಮೇಲೆ ಮತ್ತೊಬ್ಬರು ಯುದ್ಧ ಮಾಡಲು ಶುರು ಮಾಡಿದರು.

ತ್ರಿಮೂರ್ತಿಗಳ ನಡುವೆಯೇ ಯುದ್ಧ ಎಂದಾಗ ಲೋಕವೇ ತತ್ತರಿಸಿತು.ಬ್ರಹ್ಮಮತ್ತು ವಿಷ್ಣು ಪರಸ್ಪರರ ಮೇಲೆ ಆಯುಧಗಳನ್ನು ಪ್ರಯೋಗಿಸುತ್ತಿದ್ದರು.ಇದರಿಂದ ಮೂರು ಲೋಕಗಳೂ ಹಾನಿಗೀಡಾದವು.ಆಗ ದೇವತೆಗಳು ಎಲ್ಲ ಸೇರಿ ಶಿವನ ಮೊರೆ ಹೊಕ್ಕು ಪರಿಸ್ಥಿತಿಯನ್ನು ವಿವರಿಸಿದರು.

ಆಗ ಶಿವನು ಲಿಂಗ ರೂಪವನ್ನು ಧರಿಸಿ ಜಗಳವಾಡುತ್ತಿದ್ದವರ ನಡುವೆ ಕಾಣಿಸಿಕೊಂಡ. ತಮ್ಮ ನಡುವೆ ಇದ್ದಕ್ಕಿದ್ದಂತೆ ಉದ್ಭವವಾದ ಲಿಂಗವನ್ನು ಕಂಡು ಅಚ್ಚರಿಗೊಳಗಾದ

ಬ್ರಹ್ಮನು ಲಿಂಗದ ಮೇಲ್ಭಾಗವನ್ನೂ, ವಿಷ್ಣುವೂ ಲಿಂಗದ ಕೆಳಭಾಗವನ್ನೂ ಅನ್ವೇಷಿಸಲು ಹೊರಟರು. ಆದರೆ ಅದರ ಅಂತ್ಯವನ್ನೇ ಕಾಣಲಿಲ್ಲ.

ಆಗ ಮೇಲ್ಭಾಗದಲ್ಲಿದ್ದ ಬ್ರಹ್ಮನಿಗೆ ಒಂದು ಕೇದಗೆ ಹೂವು ಕೆಳಗೆ ಬೀಳುತ್ತಿರುವುದು ಕಂಡಿತು ಆಗ ಬ್ರಹ್ಮನು ಆ ಕೇದಗೆ ಹೂವಿನ ಬಳಿ ತಾನು ಲಿಂಗದ ಅಂತ್ಯವನ್ನು ಕಂಡದ್ದಾಗಿ ತಿಳಿಸಬೇಕೆಂದು ಕೇಳಿಕೊಂಡ.ಅದಕ್ಕೆ ಕೇದಗೆ ಹೂವು ಸುಳ್ಳು ಹೇಳಲು ಒಪ್ಪಿತು. ಅಂತೆಯೇ ಕೇದಗೆ ಹೂವು ವಿಷ್ಣುವಿನ ಬಳಿ ಬ್ರಹ್ಮನು ಲಿಂಗದ ಅಂತ್ಯವನ್ನು ಕಂಡಿದ್ದಾಗಿ ತಿಳಿಸಿತು. ಆಗ ವಿಷ್ಣುವು ತನ್ನ ಸೋಲನ್ನು ಒಪ್ಪಿಕೊಂಡು ಬ್ರಹ್ಮನೇ ಶ್ರೇಷ್ಠ ಎಂದು ಹೇಳಿದ.

ಇದು ಶಿವನಿಗೆ ತಿಳಿಯಿತು, ಆತನಿಗೆ ಕೇದಗೆ ಹೂವಿನ ಮೇಲೆ ಸಿಟ್ಟು ಬಂತು.ಸುಳ್ಳು ಹೇಳಿದ್ದಕ್ಕಾಗಿ ಆ ಹೂವಿಗೆ ಶಿಕ್ಷೆ ಕೊಡಲು ನಿರ್ಧರಿಸಿದ. ಶಿವನು ಕೇದಗೆ ಹೂವಿಗೆ "ಇನ್ನು ತನ್ನ ಪೂಜೆಗೆ ಯಾರೂ ಕೇದಗೆ ಹೂವನ್ನು ಉಪಯೋಗಿಸಬಾರದು'' ಎಂದು ಶಾಪವಿತ್ತ.ಅಂದಿನಿಂದ ಶಿವಪೂಜೆಗೆ ಯಾರೂ ಕೇದಗೆ ಹೂವು ಬಳಸುವುದಿಲ್ಲ.

### ನಂದೀಶ್ವರ:

ಶಿವಾಲಯಕ್ಕೆ ಹೋದ ಕೂಡಲೆ ಶಿವನಿಗಿಂತ ಮುಂಚಿತವಾಗಿ ನಂದೀಶ್ವರನನ್ನು ಪ್ರಾರ್ಥಿಸಬೇಕು. ನಂದಿಗೆ ಪೂಜೆ ಮಾಡಿದ ಬಳಿಕ ತುಪ್ಪ ಅಥವಾ ಎಳ್ಳೆಣ್ಣೆಯಲ್ಲಿ ದೀಪ ಬೆಳಗಬೇಕು.ಆ ಬಳಿಕ ಮನಸಾರೆ ಪ್ರಾರ್ಥಿಸಬೇಕು. ಆ ರೀತಿ ಮಾಡುವುದರಿಂದ ಭಕ್ತರು ಕೋರಿದ್ದು ಈಡೇರುತ್ತದೆ. ನಂದಿ ವಿಜ್ಞಾನಕ್ಕೆ ಸಂಕೇತ ಎಂದು, ವಿದ್ಯಾರ್ಥಿಗಳು ಆತನನ್ನು ಪೂಜಿಸಿದರೆ ವಿದ್ವಾಂಸರಾಗುತ್ತಾರೆಂದು ಪುರಾಣಗಳಲ್ಲಿ ಹೇಳಲಾಗಿದೆ. ಆದರೆ ನಂದೀಶ್ವರನಿಗೆ ದೀಪ ಬೆಳಗಿದ ಬಳಿಕ ಭಕ್ತರು ತಮ್ಮ ಕೋರಿಕೆಯನ್ನು ಆತನ ಕಿವಿಯಲ್ಲಿ ಹೇಳಬೇಕು. ಅದನ್ನು ಇತರರ ಜೊತೆಗೆ ಹಂಚಿಕೊಳ್ಳಬಾರದು, ಹಾಗೆ ಮಾಡಿದರೆ ಅದು ನೆರವೇರುವುದಿಲ್ಲ ಎಂಬ ನಂಬಿಕೆಯುಂಟು.

### ರುದ್ರಾಭಿಷೇಕ:

ನಂದೀಶ್ವರನಿಗೆ ಪೂಜೆ ಮಾಡಿದ ಬಳಿಕ ಶಿವಾಲಯಕ್ಕೆ ಹೋಗಿ ನಂದಿ ಕೊಂಬಿನ ಮೂಲಕ ಶಿವಲಿಂಗ ದರ್ಶನ ಮಾಡಿಕೊಳ್ಳಬೇಕು. ಆ ಬಳಿಕ ಶಿವಲಿಂಗಕ್ಕೆ ರುದ್ರಾಭಿಷೇಕ ಮಾಡಿದರೆ ಒಳ್ಳೆಯದಾಗುತ್ತದೆ. ಇದರಿಂದ ಮನಸ್ಸಿನಲ್ಲಿರುವ ಮಲಿನಗಳು ದೂರಾಗುತ್ತದೆ.

### ಪಂಚಾಕ್ಷರಿ ಮಂತ್ರ:

ಶಿವ ಪೂಜೆ ಮಾಡುವಾಗ ಪಂಚಾಕ್ಷರಿ ಮಂತ್ರ ಪಠಿಸಬೇಕು. **ಓಂ ನಮಃ ಶಿವಾಯ** ಎಂದು ಶಿವನನ್ನು ಪ್ರಾರ್ಥಿಸಬೇಕು. ಇದರಿಂದ ಶಿವನ ಕೃಪೆಗೆ ಪಾತ್ರರಾಗುತ್ತೀರಿ.

### ಮಹಾಮೃತ್ಯುಂಜಯ ಮಂತ್ರ:

ಮೃತ್ಯುವಿನ ಭಯ ನಿವಾರಣೆಯಾಗಬೇಕಾದರೆ, ಮೋಕ್ಷ ಸಿಗಬೇಕು ಎಂದರೆ ಈ ಮಂತ್ರವನ್ನು ಮಹಾಶಿವರಾತ್ರಿ ದಿನ ಜಪಿಸಬೇಕು. ಇದನ್ನೇ ತ್ರಯಂಬಕ ಮಂತ್ರ, ರುದ್ರ ಮಂತ್ರ, ಮೃತ ಸಂಜೀವಿನ ಮಂತ್ರ ಎಂದೂ ಕರೆಯುತ್ತಾರೆ. **ಓಂ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ಉರ್ವಾರುಕಮಿವ ಬಂಧನಾತ್ ಮೃತ್ಯೋರ್ಮುಕ್ಷೀಯ ಮಾಽಮೃತಾತ್.**

### ಶಿವನ ಮೂರನೇ ಕಣ್ಣು ಮತ್ತು ಮಗ ಅಂಧಕ:

ವಿಶ್ವದ ಚರಾಚರಾ ವಸ್ತುಗಳ ಜೀವ ಕೂಡ ಪರಶಿವನಲ್ಲಿದೆ ಎಂಬ ಮಾತಿದೆ. ಶಿವನ ಹಣೆಯಲ್ಲಿ ಮೂರನೇ ಕಣ್ಣು ಇದೆ. ಮೂರನೇ ಕಣ್ಣು ಸೃಷ್ಟಿಯಾದ ಬಗ್ಗೆ ಕುತೂಹಲ ಎಲ್ಲರಿಗೂ ಇದೆ.ಒಮ್ಮೆ ಶಿವನು ಧ್ಯಾನದಲ್ಲಿ ಕುಳಿತಿದ್ದಾಗ ಅವರ ಪತ್ನಿ ಪಾರ್ವತಿ ದೇವಿಯು ಸುಮ್ಮನೆ ಆಟಕ್ಕಾಗಿ ತನ್ನೆರಡು ಕೈಗಳಿಂದ ಶಿವನ ಕಣ್ಣುಗಳನ್ನು ಮುಚ್ಚುತ್ತಾರೆ. ಆ ಕೂಡಲೇ ಸಂಪೂರ್ಣ ವಿಶ್ವ ಕತ್ತಲೆಯಿಂದ ತುಂಬಿ ಹೋಯಿತು. ದೇವಾಧಿದೇವತೆಗಳೂ ಕೂಡ ಅಧೈರ್ಯಗೊಳ್ಳುತ್ತಾರೆ. ಎಲ್ಲಾ ಕಡೆ ಕೋಲಾಹಲ ಉಂಟಾಗುತ್ತದೆ.ಆಗ ಶಿವನು ತಮ್ಮ ಶಕ್ತಿಯಿಂದ ಮೂರನೆಯ ಕಣ್ಣನ್ನು ತಮ್ಮ ಹಣೆಯಲ್ಲಿ ಸೃಷ್ಟಿಸಿಕೊಳ್ಳುತ್ತಾರೆ. ಈ ಕಣ್ಣಿನಲ್ಲಿ ಬೆಂಕಿಯುಂಟಾಗಿ ವಿಶ್ವಕ್ಕೆ ಬೆಳಕು ಉಂಟಾಗುತ್ತದೆ.

ಈ ಮೂರನೆಯ ಕಣ್ಣಿನಿಂದ ಉಂಟಾದ ಬೆಂಕಿಯು ಪಾರ್ವತಿಯ ಕೈಗಳನ್ನು ಸುಡುತ್ತದೆ. ಏಕೆಂದರೆ ಆಕೆ ಶಿವನ ಬಲ ಮತ್ತು ಎಡಗಣ್ಣನ್ನು ಮುಚ್ಚಿರುತ್ತಾರೆ. ಈ ಸಮಯದಲ್ಲಿ ಶಿವ ಮತ್ತು ಪಾರ್ವತಿಯ ಶಕ್ತಿಯು ಸಮ್ಮಿಲನಗೊಂಡು ಅಂಧಕ ಎಂಬ ಮಗು ಜನನಗೊಳ್ಳುತ್ತಾನೆ.


ಅಂಧಕನನ್ನು ಶಿವನ ಅಸುರ ಭಕ್ತನೊಬ್ಬ ಪೋಷಿಸುತ್ತಾನೆ. ತನ್ನ ಮೂಲ ಹುಟ್ಟನ್ನು ಅರಿತುಕೊಳ್ಳದೆಯೇ ಅಂಧಕನು ಬೆಳೆಯುತ್ತಾನೆ. ತನ್ನ ಯುವ ವಯಸ್ಸಿನಲ್ಲಿ ಕಠಿಣವಾದ ತಪಸ್ಸನ್ನು ಆಚರಿಸಿ ಅಂಧಕನು ತನ್ನ ತಂದೆಯಲ್ಲದೆ ಮತ್ತಾರೂ ತನ್ನನ್ನು ವಧಿಸಬಾರದು ಎಂಬ ವರವನ್ನು ಪಡೆದುಕೊಳ್ಳುತ್ತಾನೆ. ತನ್ನ ವರದ ಬಲದಿಂದ ಅಂಧಕನು ಮೂರು ಲೋಕಗಳ ಮೇಲೆ ವಿಜಯವನ್ನು ಗಳಿಸುತ್ತಾನೆ.

ಪಾರ್ವತಿಯನ್ನು ರಕ್ಷಿಸುವುದಕ್ಕಾಗಿ ಶಿವನು ಅಂಧಕನನ್ನು ವಧಿಸುತ್ತಾರೆ. ಹೀಗೆ ಅಂಧಕನು ತಾನು ಬೇಡಿದ ವರದಿಂದಲೇ ತನ್ನ ಅಂತ್ಯವನ್ನು ಕಂಡುಕೊಳ್ಳುತ್ತಾನೆ. ತನ್ನ ಹುಟ್ಟಿನ ಸತ್ಯವನ್ನು ಅರಿತ ಅಂಧಕನು ತನ್ನ ಕುಕೃತ್ಯಗಳಿಗಾಗಿ ಶಿವನಲ್ಲಿ ಕ್ಷಮೆಯನ್ನು ಯಾಚಿಸುತ್ತಾನೆ.



# ಸಕಲರಿಂದ ಪೂಜ್ಯರು ರಾಘವೇಂದ್ರರು

ಡಾ॥ ಪ್ರಕಾಶ್ ಕೆ. ನಾಡಿಗ್
9845529789



ಪ್ರಹ್ಲಾದರಾಜಃ ಪ್ರಥಮೋ, ದ್ವಿತೀಯೋ ವ್ಯಾಸರಾಜಕಃ
ರಾಘವೇಂದ್ರ ಸ್ತೃತೀ ಯಸ್ತು ಭಗವತ್ಕಾರ್ಯ ಸಾಧಕಃ

ಭೂಲೋಕದಲ್ಲಿ ಭಗವತ್ಕಾರ್ಯ ಸಾಧನೆಗಾಗಿ ಪ್ರಥಮ ಜನ್ಮದಲ್ಲಿ ಪ್ರಹ್ಲಾದರಾಜರಾಗಿ,ದ್ವಿತೀಯ ಜನ್ಮದಲ್ಲಿ ವ್ಯಾಸರಾಜರಾಗಿ, ಮೂರನೇ ಜನ್ಮದಲ್ಲಿ ಶ್ರೀರಾಘವೇಂದ್ರ ತೀರ್ಥರಾಗಿ ಜನ್ಮತಾಳಿ ದೇಹೀ ಎಂದು ಬಂದವರನ್ನು ಉದ್ಧರಿಸುತ್ತಾ ಮಂತ್ರಾಲಯದಲ್ಲಿ ವಿರಾಜಮಾನರಾಗಿ ಸಕಲರಿಂದಲೂ ಪೂಜಿತರಾಗಿದ್ದಾರೆ ಶ್ರೀರಾಘವೇಂದ್ರರು. ಭೂಲೋಕದಲ್ಲಿ ಧರ್ಮ ಸ್ಥಾಪನೆಗಾಗಿ, ಕಲಿಯುಗದಲ್ಲಿ ಭಕ್ತಜನರನ್ನು ಉದ್ಧರಿಸಲು ಭಗವತತ್ತ್ವವನ್ನು ಪ್ರಚಾರ ಮಾಡಲು ಶಂಖುಕರ್ಣರಾಗಿ, ಪ್ರಹ್ಲಾದರಾಜರಾಗಿ, ವ್ಯಾಸರಾಜರಾಗಿ ಅನಂತರ ಶ್ರೀರಾಘವೇಂದ್ರತೀರ್ಥರಾಗಿ ಅವತರಿಸಿದ ಮಹಾಮಹಿಮರಿವರು. ಶ್ರೀಮಧ್ವಾಚಾರ್ಯರ ಅನುಯಾಯಿಯಾಗಿ ಮಧ್ವಮತದ ದ್ವೈತ ಸಿದ್ಧಾಂತ ವನ್ನು ಪ್ರತಿಪಾದಿಸಿದವರು. ಮೋಕ್ಷವನ್ನು ತಿರಸ್ಕರಿಸಿ ಭೂಮಿಯಲ್ಲಿ ಅವತಾರವೆತ್ತುತ್ತಾ ಕೊನೆಯಲ್ಲಿ ರಾಘವೇಂದ್ರ ತೀರ್ಥರಾಗಿ ಜನಿಸಿ ಮಂತ್ರಾಲಯದಲ್ಲಿ ನೆಲಸಿ ಕೋಟಿ ಕೋಟಿ ಭಕ್ತ ಜನರಿಗೆ ಆಶೀರ್ವದಿಸುತ್ತಿದ್ದಾರೆ.

ಸ್ವರ್ಣಯುಗವೆಂದು ಕರೆಯುವ ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಶ್ರೀಕೃಷ್ಣದೇವರಾಯನ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದ ಕನಕಾಚಲ ಭಟ್ಟರ ಮಗನಾದ ತಿಮ್ಮಣ್ಣ ಭಟ್ಟರು ವೇದವೇದಾಂಗಗಳಲ್ಲಿ ಪರಿಣಿತರಾಗಿದ್ದರು. ಇವರ ಧರ್ಮಪತ್ನಿ ಗೋಪಾಂಬ. ಒಂದು ಗಂಡು ಒಂದು ಹೆಣ್ಣು ಮಗು ಇದ್ದ ಇವರಿಗೆ ಇನ್ನೊಂದು ಗಂಡು ಮಗು ಬೇಕೆಂಬ ಬಯಕೆಯಿಂದ ತಿರುಪತಿಗೆ ಹೋಗಿ ಶ್ರೀವೆಂಕಟೇಶ್ವರನಿಗೆ ಸೇವೆ ಸಲ್ಲಿಸಿದರ ಫಲವಾಗಿ 1595 ಫಾಲ್ಗುಣ ಮಾಸದ ಶುದ್ಧ ಸಪ್ತಮಿಯಂದು ಗೋಪಿಕಾಂಬ ಮತ್ತೊಂದು ಗಂಡು ಮಗುವಿಗೆ ಜನ್ಮವಿತ್ತರು. ವೆಂಕಟೇಶ್ವರನ ವರಪ್ರಸಾದವಾದ್ದರಿಂದ ಆ ಬಾಲಕನಿಗೆ ವೆಂಕಟನಾಥ ಎಂಬ ಹೆಸರನ್ನೇ ಇಟ್ಟರು.

ದಿನದಿಂದ ದಿನಕ್ಕೆ ಪ್ರವರ್ಧಮಾನಕ್ಕೆ ಬರುತ್ತಿದ್ದ ವೆಂಕಟನಾಥನಿಗೆ ತಿಮ್ಮಣ್ಣಭಟ್ಟರು ಅಕ್ಷರಾಭ್ಯಾಸ ಮಾಡಿಸಿದರು.ಇದಾದ ಕೆಲವು ದಿನಗಳಲ್ಲೇ ವಯೋಸಹಜವಾಗಿ ತಿಮ್ಮಣ್ಣ ಭಟ್ಟರು ದೇಹತ್ಯಾಗ ಮಾಡಿದರು. ಈಗ ಕುಟುಂಬದ ಪೋಷಣೆ ತಿಮ್ಮಣ್ಣ ಭಟ್ಟರ ದೊಡ್ಡ ಮಗನಾದ ಗುರುರಾಜರ ಮೇಲೆ ಬಿತ್ತು. ಕಷ್ಟಪಟ್ಟು ತನ್ನ ತಮ್ಮ ವೆಂಕಟನಾಥನ ಉಪನಯನವನ್ನು ಮಾಡಿ ಭಾವನಾದ ಲಕ್ಷ್ಮೀನರಸಿಂಹಾಚಾರ್ಯರಲ್ಲಿ ವಿದ್ಯಾಭ್ಯಾಸಕ್ಕೆ ಕಳಿಸಿದರು.

ದೇವರ ವರಪ್ರಸಾದದಿಂದ ಜನಿಸಿದ ವೆಂಕಟನಾಥ, ಜನ್ಮತಃ ಪ್ರಾಪ್ತವಾಗಿದ್ದ ಜಾಣತನದಿಂದ ಅಧ್ಯಯನ ಮಾಡಿ ವೇದವೇದಾಂಗಗಳು, ಆರು ಶಾಸ್ತ್ರಗಳು, ಅಷ್ಟಾದಶ ಪುರಾಣಗಳನ್ನು ಅಧ್ಯಯನ ಮಾಡಿ ಅಪಾರ ಪಾಂಡಿತ್ಯವನ್ನು ಪಡೆದನು. ತೀಕ್ಷ್ಣ ಬುದ್ಧಿವಂತನಾದ, ಸ್ಥಿತ ಪ್ರಜ್ಞನಾದ ಅಪಾರ ವೇದ ಜ್ಞಾನವನ್ನು ಪಡೆದಿದ್ದ ವಿನಯವಂತನಾಗಿದ್ದ ವೆಂಕಟನಾಥನಿಗೆ ಯುಕ್ತ ವಯಸ್ಸು ಪ್ರಾಪ್ತವಾಗಿರುವುದನ್ನು ಗುರುತಿಸಿದ ಅಣ್ಣ ಗುರುರಾಜ ರೂಪವತಿಯಾದ, ಸದ್ವಂಶದಲ್ಲಿ ಜನಿಸಿದ ಸರಸ್ವತಿ ಎಂಬ ಕನ್ಯೆಯೊಡನೆ ವೆಂಕಟನಾಥನ ವಿವಾಹವನ್ನು ಮಾಡಿದನು.

ವಿವಾಹದ ನಂತರ ಅಣ್ಣನಿಗೆ ಭಾರವಾಗಬಾರದೆಂಬ ಕಾರಣದಿಂದ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿ ವೆಂಕಟನಾಥನು ತನ್ನ ಸಂಸಾರವನ್ನು ನಡೆಸಲಾರಂಭಿಸಿದ್ದನು. ಆದರು ತಾನು ತಿಳಿದುಕೊಳ್ಳಬೇಕಾಗಿರುವುದು ಇನ್ನೂ ಬಹಳವಿದೆ ಎಂದು ಆತನ ಮನಸ್ಸು ಹೇಳುತ್ತಿತ್ತು. ಉತ್ತಮ ಪಂಡಿತರ ಹುಡುಕಾಟದಲಿದ್ದ ವೆಂಕಟನಾಥನಿಗೆ ಕಂಡದ್ದು ಪಂಡಿತೋತ್ತಮರಾದ ಶ್ರೀಸುಧೀಂದ್ರರು. ಅವರ ಬಳಿಗೆ ಹೋಗಿ ಸಾಷ್ಟಾಂಗ ನಮಸ್ಕಾರ ತಿಳಿಸಿ ತನ್ನ ಮನದಿಂಗಿತವನ್ನು ತಿಳಿಸಲು, ವೆಂಕಟನಾಥನ ತೇಜಸ್ಸು,ವಿನಯಶೀಲತೆ, ಶ್ರೀಸುಧೀಂದ್ರರ ಮನಸ್ಸನ್ನು ಆಕರ್ಷಿಸಿತು. ವೇದಾಂತ ಭೋದನೆ ಮಾಡುವುದಕ್ಕೆ ಒಪ್ಪಿಕೊಂಡು ಉನ್ನತ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು.



## ವೆಂಕಟನಾಥ ಪರಿಮಳಾಚಾರ್ಯರಾದರು :

ವೆಂಕಟನಾಥನು ಶ್ರದ್ಧಾ ಭಕ್ತಿಯಿಂದ ಶ್ರೀಸುಧೀಂದ್ರರ ಆಶ್ರಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದನು. ಒಂದು ದಿನ ಪಾಠ ಮಾಡುತ್ತಿದ್ದ ಶ್ರೀಸುಧೀಂದ್ರರು ಮಧ್ಯದಲ್ಲಿ ಒಂದು ವಾಕ್ಯಕ್ಕೆ ಅರ್ಥ ಹೇಳುವುದರಲ್ಲಿ ಗೊಂದಲವಾದ ಕಾರಣ ಮಾರನೇದಿನ ಅದರ ಅರ್ಥ ಹೇಳುವೆನೆಂದು ಪಾಠವನ್ನು ಅರ್ಧಕ್ಕೆ ನಿಲ್ಲಿಸಿದ್ದರು. ಸುಧೀಂದ್ರರು ಅಂದು ರಾತ್ರಿ ತನ್ನ ಶಿಷ್ಯನನ್ನು ಪರೀಕ್ಷೆ ಮಾಡುವ ಸಲುವಾಗಿ ವೆಂಕಟನಾಥನು ಮಲಗಿದ್ದ ಸ್ಥಳಕ್ಕೆ ಹೋದರು. ಚಳಿಯಲ್ಲಿ ನಡುಗುತ್ತಾ ಹರಿದಿರುವ ಧೋತ್ರವನ್ನು ಬಿಟ್ಟು ಬೇರೆ ಹೊದಿಕೆ ಇಲ್ಲದೆ "ಸುಧಾ" ಗ್ರಂಥವನ್ನು ತಲೆ ಬಳಿ ಇಟ್ಟು ವೆಂಕಟನಾಥನು ಮಲಗಿದ್ದನು. ಸುಧೀಂದ್ರರು ಸುಧಾ ಗ್ರಂಥವನ್ನು ತೆಗೆದು ನೋಡಿ ಒಂದು ಕ್ಷಣ ಆಶ್ಚರ್ಯಚಕಿತರಾದರು, ತಾವು ಹೇಳುವ ಪಾಠಗಳಿಗೆ "ಪರಿಮಳ" ಎಂಬ ಹೆಸರಿನಿಂದ ಸುಂದರವಾದ ಟೀಕೆ ಬರೆದಿದ್ದನ್ನು, ಆ ದಿನ ಪಾಠದಲ್ಲಿ ತಮಗೆ ಗೊಂದಲವಾದ ವಾಕ್ಯಕ್ಕೆ ಸುಂದರ ವಿವರಣೆ ಬರೆದಿರುವುದನ್ನು ನೋಡಿ ಆನಂದ ಪರವಶರಾದರು. ಚಳಿಗೆ ನಡುಗುತ್ತಿದ್ದ ವೆಂಕಟನಾಥನಿಗೆ ತಮ್ಮ ಶಾಲನ್ನು ಹೊದೆಸಿ ತಾಳ ಪತ್ರೆಗಳನ್ನು ತೆಗೆದುಕೊಂಡು ತಮ್ಮ ಕುಟೀರಕ್ಕೆ ಹೊರಟು ಹೋದರು. ಮರುದಿನ ಬೆಳಗ್ಗೆ ಎದ್ದ ವೆಂಕಟನಾಥ ಗುರುಗಳ ಶಾಲು ತನ್ನ ಬಳಿ ಇರುವುದನ್ನು, ಹಾಗೂ ಸುಧಾ ಗ್ರಂಥ ಕಾಣದಿರುವುದನ್ನು ಕಂಡು ಭಯಗೊಂಡನು. ಪ್ರಾತಃ ಕಾರ್ಯಗಳನ್ನು ಮುಗಿಸಿ ಗುರುಗಳ ಬಳಿ ಹೋಗಿ ನಮಸ್ಕಾರ ಮಾಡಿ, ಶಾಲನ್ನು ಮುಂದಿಟ್ಟು ಆ ಶಾಲು ತನ್ನ ಹತ್ತಿರ ಹೇಗೆ ಬಂದಿರುವುದೋ ತಿಳಿಯದೆಂದೂ, ತಲೆ ಬಳಿ ಇಟ್ಟು ಕೊಂಡಿದ್ದ ಪುಸ್ತಕ ಕಾಣಿ ಸುತ್ತಿಲ್ಲವೆಂದು ಭಯದಿಂದ ವಿನಂತಿಸಿದನು. ಈ ವೇಳೆಗಾಗಲೇ ರಾತ್ರಿ ನಡೆದಿದ್ದ ಘಟನೆಯನ್ನು ಉಳಿದ ಶಿಷ್ಯರಲ್ಲಿ ಅರುಹಿದ್ದ ಸುಧೀಂದ್ರರು, ವೆಂಕಟನಾಥನು "ಪರಿಮಳ" ಎಂಬ ಟೀಕೆ ಬರೆದಿದ್ದ ಕಾರಣ ಶ್ರೀಸುಧೀಂದ್ರರು ವೆಂಕಟನಾಥನಿಗೆ" ಪರಿಮಳಾಚಾರ್ಯ"ಎಂಬ ಬಿರುದನ್ನು ಪ್ರಸಾದಿಸಿ ಸತ್ಕರಿಸಿದರು.

ತಮ್ಮ ಗುರುಗಳಾದ ಶ್ರೀಸುಧೀಂದ್ರರೊಂದಿಗೆ ಧರ್ಮ ಪ್ರಚಾರಕ್ಕಾಗಿ ದೇಶ ಸಂಚಾರ ಮಾಡುತ್ತಿದ್ದ ಕಾಲದಲ್ಲಿ ಗುರುಗಳ ಆಜ್ಞಾನುಸಾರ ಅನೇಕ ಪಂಡಿತ ಪಾಮರರನ್ನು ತಮ್ಮ ಪ್ರತಿಭೆಯಿಂದ ಸೋಲಿಸಿದ್ದರು. ಸುಧೀಂದ್ರರಲ್ಲಿದ್ದು ತರ್ಕ ವೇದಾಂತಾದಿ ಅನೇಕ ಗ್ರಂಥಗಳನ್ನು ಓದಿ ನಂತರ ಗುರುಗಳ ಆಜ್ಞೆಯಂತೆ ಸ್ವಸ್ಥಾನಕ್ಕೆ ಹಿಂದಿರುಗಿ ಪತ್ನಿ ಸರಸ್ವತಿಯೊಡನೆ ಸಂಸಾರವನ್ನು ಸಾಗಿಸುತ್ತಿದ್ದರು. ಕೆಲವೇ ದಿನಗಳಲ್ಲಿ ಇವರಿಗೆ ಮುದ್ದಾದ "ಲಕ್ಷ್ಮೀನಾರಾಯಣನೆಂಬ" ಪುತ್ರನು ಜನಿಸಿದನು. ಕೆಲವು ದಿನಗಳಲ್ಲೇ ಇವರ ಜೀವನದಲ್ಲಿ ದಾರಿದ್ರ್ಯ ಹೆಚ್ಚಾಯಿತು. ಮನೆಯಲ್ಲೇ ಅನೇಕ ಶಿಷ್ಯರು ವಿದ್ಯಾಭ್ಯಾಸ ಮಾಡುತ್ತಿದ್ದರು. ಸಂಸಾರಭಾರ ಹಾಗೂ ಶಿಷ್ಯರ ಭಾರದಿಂದ ಇವರ ಮನಸ್ಸು ಅಶಾಂತಿಯ ಗೂಡಾಗಿತ್ತು.

## ಮತ್ತೆ ಶ್ರೀಸುಧೀಂದ್ರರ ಆಶ್ರಮಕ್ಕೆ:

ಬಡತನ ಬೇಗೆಯಿಂದ ನೊಂದು ಬೆಂದ ವೆಂಕಟನಾಥ ಹೆಂಡತಿ ಮಗನ ಜೊತೆ ಸುಧೀಂದ್ರರ ಬಳಿ ಬಂದು ಕಾಲಿಗೆ ಬಿದ್ದು ತಮ್ಮ ತೊಂದರೆಯನ್ನು ಅರುಹಿದರು. ಶಿಷ್ಯನ ದುಸ್ಥಿತಿಯನ್ನು ಅರಿತ ಸುಧೀಂದ್ರರು, ಶಿಷ್ಯನ ನಡೆ - ನುಡಿ ಪಾಂಡಿತ್ಯಕ್ಕೆ ಮಾರು ಹೋಗಿದ್ದ ಗುರುಗಳು ಹೆಂಡತಿ ಮಗನ ಸಮೇತ ಆಶ್ರಮದಲ್ಲೇ ಇರಲು ಅನುಮತಿಯಿತ್ತರು.

## ಸನ್ಯಾಸ ಸ್ವೀಕರಿಸಲು ಗುರುಗಳ ಆಗ್ರಹ :

ಮಠದಲ್ಲಿ ಪಂಡಿತ ಪಾಮರರೊಂದಿಗೆ ಚರ್ಚೆ, ಶಿಷ್ಯರಿಗೆ ಪಾಠ ಭೋದಿಸುತ್ತಾ ವೆಂಕಟನಾಥ ಕಾಲಕಳೆಯುತ್ತಿದ್ದಾಗ ಆಕಸ್ಮಾತ್ತಾ ಶ್ರೀ ಸುಧೀಂದ್ರರಿಗೆ ಅನಾರೋಗ್ಯವುಂಟಾಯಿತು.ಆಗ ಅವರು ವೆಂಕಟನಾಥನಿಗೆ ಸನ್ಯಾಸ ಸ್ವೀಕಾರ ಮಾಡಬೇಕೆಂದು ಬಯಸುತ್ತಾರೆ. ಗುರುಗಳ ಮಾತು ಶಿರೋಧಾರ್ಯವಾದರೂ ಪತ್ನಿ ಇನ್ನೂ ಚಿಕ್ಕವಳು, ಮಗ ಇನ್ನೂ ಚಿಕ್ಕವನು ಎಂಬ ಕಾರಣಕ್ಕೆ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಾನೆ. ಗುರುಗಳಿಗೂ ಇದು ಸಮಂಜಸವೆನಿಸುತ್ತದೆ.

## ಕನಸಿನಲ್ಲಿ ಸರಸ್ವತಿ ಸಾಕ್ಷಾತ್ಕಾರ :

ಸನ್ಯಾಸತ್ವ ಸ್ವೀಕರಿಸಬೇಕೆಂಬ ಗುರುಗಳ ಮನೋ ಇಂಗಿತವನ್ನು ಅರಿತಿದ್ದ ವೆಂಕಟನಾಥನ ಮನಸ್ಸು ಗೊಂದಲದ ಗೂಡಾಗಿರುತ್ತದೆ. ರಾತ್ರಿ ಹಾಗೆ ನಿದ್ದೆ ಹತ್ತಿದವನ ಕನಸಿನಲ್ಲಿ ಸರಸ್ವತಿ ದೇವಿಯ ದರ್ಶನ, ಸಂಸಾರ ನೀರಿನ ಮೇಲಿನ ಗುಳ್ಳೆ ಇದ್ದಂತೆ, ಅಶಾಶ್ವತ ಕಳೆದು ಶಾಶ್ವತ ದೆಡೆಗೆ ನಡೆ, ಸನ್ಯಾಸತ್ವವನ್ನು ಹೊಂದಿ ಮೂಲರಾಮನನ್ನು ಪೂಜಿಸುವಂತಹನಾಗು ಎಂದು ಆಜ್ಞೆಯಿಟ್ಟಳು. ಮುಂಜಾನೆ ಗುರುವಿನ ಬಳಿ ಬಂದು ನಮಸ್ಕರಿಸಿ ನಿಂತನು, ಶಿಷ್ಯನ ಮುಖದ ಮೇಲಿನ ಕಳೆಯನ್ನು ಕಂಡು ಸನ್ಯಾಸತ್ವಕ್ಕೆ ಶಿಷ್ಯನ ಒಪ್ಪಿಗೆ ಕೇಳಿ ಮನಸ್ಸು ಆನಂದವಾಯಿತು, ವೆಂಕಟನಾಥನ ಮಗನಿಗೆ ಉಪನಯನ ಕಾರ್ಯವು ಸಾಂಗವಾಗಿ ನಡೆದು ಸನ್ಯಾಸತ್ವದೆಡೆಗೆ ಹೆಜ್ಜೆ ಇಡಲು ಅನುವಾದರು.

## ವೆಂಕಟನಾಥ ರಾಘವೇಂದ್ರ ತೀರ್ಥರಾದರು :

ಗುರುಗಳ ಮನದಿಂಗಿತವನ್ನು, ಸರಸ್ವತಿದೇವಿ ತಮಗೆ ಕನಸಿನಲ್ಲಿ ಕೊಟ್ಟ ಆಜ್ಞೆಯನ್ನು ವೆಂಕಟನಾಥ ತನ್ನ ಪತ್ನಿ ಸರಸ್ವತಿಗೆ ತಿಳಿಸಿದರು. ಸರಸ್ವತಿಯನ್ನು ಸಮಾಧಾನ ಪಡಿಸಿ ಗುರುಗಳು ಕುಂಭಕೋಣಕ್ಕೆ ಹೋಗಿ ವೆಂಕಟಭಟ್ಟನಿಗೆ ಆಶ್ರಮವನ್ನು ಒಪ್ಪಿಸುವುದಕ್ಕೆ ಬೇಕಾದ

ವ್ಯವಸ್ಥೆ ಮಾಡಿದರು. ರುಧಿರೋದ್ಗಾರಿ ನಾಮ ಸಂವತ್ಸರ ಫಾಲ್ಗುಣ ಬಹುಳ ದಿನದಂದು ಸುಧೀಂದ್ರರು ವೆಂಕಟಭಟ್ಟನಿಗೆ ಸನ್ಯಾಸಾಶ್ರಮವನ್ನು ಕೊಟ್ಟು "ಶ್ರೀ ರಾಘವೇಂದ್ರ ತೀರ್ಥ'' ರೆಂಬ ಹೆಸರಿಟ್ಟರು.

ತಮ್ಮ ಸನ್ಯಾಶ್ರಮದಲ್ಲಿ ಅನೇಕ ಪವಾಡಗಳನ್ನು ತೋರಿದರು. ಸತ್ತ ಮಗುವನ್ನು ಬದುಕಿಸಿದರು, ಹೊಲೆಯ ಕನಕದಾಸನಿಗೆ ಮುಕ್ತಿ ಕೊಡಿಸಿದರು. ಯೋಗದೃಷ್ಟಿಯಿಂದ ಮಂಚಾಲಮ್ಮನ ಸುತ್ತಮುತ್ತಲ ಬಂಜರು ಭೂಮಿಯೇ ತಮ್ಮ ಬೃಂದಾವನಕ್ಕೆ ಬೇಕೆಂದು ಕೇಳಿ ಪಡೆದರು. ಪೂರ್ವಜನ್ಮದಲ್ಲಿ ರಾಯರು ಪ್ರಹ್ಲಾದರಾಜರಾಗಿದ್ದಾಗ ಅದೇ ಜಾಗದಲ್ಲಿ ಯಜ್ಞವನ್ನು ಮಾಡಿದ್ದರು. ಅದೇ ಯಜ್ಞಕುಂಡವಿದ್ದ ಜಾಗವನ್ನೇ ಆರಿಸಿಕೊಂಡಿದ್ದರು. ಈಗಿನ ಮಂತ್ರಾಲಯ ಬೆಳೆದಿರುವುದು ನೋಡಿದರೆ ಹಿಂದೊಮ್ಮೆ ಅದು ಬಂಜರು ಭೂಮಿಯಾಗಿತ್ತೆಂದರೆ ಯಾರು ನಂಬುವುದು ಕಷ್ಟ, ಎರಡನೆ ವೈಕುಂಠದಂತೆ ಕಾಣುವ ಈಗಿನ ಮಂತ್ರಾಲಯ ಶ್ರೀರಾಯರ ಆಶೀರ್ವಾದವಲ್ಲದೇ ಮತ್ತೇನು?

**ಬೃಂದಾವನ ಪ್ರವೇಶ :**

ಬೃಂದಾವನ ನಿರ್ವಹಣೆಯ ಹೊಣೆ ಹೊತ್ತಿದ್ದ ದಿವಾನ ವೆಂಕಣ್ಣನಿಗೆ ಮಾಧವರ ಹತ್ತಿರ ಒಂದು ಅಗಲವಾದ ಒರಟು ಬಂಡೆಯನ್ನು ತರಲು ಹೇಳಿದರು. ಆದರೆ ವೆಂಕಣ್ಣನಿಗೆ ಆ ಬಂಡೆಯ ಹಿರಿಮೆ ತಿಳಿದಿರಲಿಲ್ಲ. ಇದನ್ನರಿತ ರಾಯರು ದಿವಾನನಿಗೆ ತ್ರೇತಾಯುಗದಲ್ಲಿ ಶ್ರೀರಾಮಚಂದ್ರ ಆ ಬಂಡೆಯ ಮೇಲೆ ಏಳು ನಿಮಿಷ ಕುಳಿತು ವಿಶ್ರಮಿಸಿದ್ದನು, ರಾಮನ ಪಾದಸ್ಪರ್ಶವಾದ ಈ ಶಿಲೆ ಬೃಂದಾವನ ರೂಪದಲ್ಲಿ ಏಳು ನೂರು ವರುಷ ಪೂಜಿಸಲ್ಪಡುತ್ತೆ ಎಂದಿದ್ದರು. ಬೃಂದಾವನ ನಿರ್ಮಾಣವಾದ ನಂತರ ಅಪಾರ ಶಿಷ್ಯ ವೃಂದ, ಭಕ್ತಸಾಗರದ ನಡುವೆ ಮಂಗಳ ವಾದ್ಯ ಘೋಷಗಳ ನಡುವೆ 1671 ಶ್ರೀ ವಿರೋಧಿನಾಮ ಸಂವತ್ಸರ ಶ್ರಾವಣ ಬಹುಳ ಬಿದಿಗೆಯ ಗುರುವಾರದಂದು ಸಶರೀರರಾಗಿ ಬೃಂದಾವನದಲ್ಲಿ ಕುಳಿತರು. ಅವರ ಆಜ್ಞೆ ಯಂತೆ ಬೃಂದಾವನದಲ್ಲಿ ಏಳುನೂರು ಸಾಲಿಗ್ರಾಮಗಳನ್ನು ಇರಿಸಲಾಯಿತು. ಬೃಂದಾವನ ಸ್ಥಾಪನೆ ವಿಜೃಂಭಣೆಯಿಂದ ನೆರವೇರಿತು.

**ಭಕ್ತ ಕೋಟಿಯ ಉದ್ಧಾರ :**

ತಮ್ಮ ಜೀವಿತಾವಧಿಯಲ್ಲಿ ಶ್ರೀಗುರುರಾಯರು ಸುಸಂಕೃತವಾದ ಮೌಲಿಕ ಧಾರ್ಮಿಕ ಸಮಾಜವನ್ನು ನಿರ್ಮಾಣ ಮಾಡಲು ಅನೇಕ ಪವಾಡಗಳನ್ನು ತೋರಿದರು. ಸನ್ಯಾಸಾಶ್ರಮ ಸ್ವೀಕಾರವಾದೊಡನೆ ತಾವು ಹೆಜ್ಜೆ ಇಟ್ಟಲೆಲ್ಲಾ ಹರಿನಾಮಸ್ಮರಣೆ ಮಹತ್ವವನ್ನು ದಿಕ್ಕು ದಿಕ್ಕಿನಲ್ಲಿ ಹರಡಿದರು. ಸ್ವತಃ ಬಡತನದ ನೋವನ್ನು ಅನುಭವಿಸಿದ್ದ ಶ್ರೀಗುರುರಾಯರಿಗೆ ಬಡವರನ್ನು, ದೀನದಲಿತರನ್ನು ಕಂಡರೆ ಅಪಾರ ಕರುಣೆಯಿಂದ ಅವರನ್ನು ಅನುಗ್ರಹಿಸುತ್ತಿದ್ದರು. ಬಡತನ ದುಃಖ ಕಷ್ಟ ಕಾರ್ಪಣ್ಯಗಳಿಂದ ನೊಂದು ಬಂದವರನ್ನು ಹರಸಿ ದೇವ ಬಿಂದುವಾದವರು ಶ್ರೀಗುರುರಾಯರು, ಇವರ ಅಗಣಿತ ತಪೋ ಶಕ್ತಿಯ ಕಾರಣ "ದೇವರೆಂದರೆ ತಿರುಪತಿ ತಿಮ್ಮಪ್ಪ, ರಾಯರೆಂದರೆ ಮಂತ್ರಾಲಯ ರಾಘಪ್ಪ'' ಎಂಬ ಉಕ್ತಿ ಜನನಿತವಾಗಿದೆ. ವೀಣಾ ವಾದನದಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಿದ್ದ ಇವರು ವೀಣಾ ವೆಂಕಣ್ಣನೆಂದೇ ಪ್ರಸಿದ್ಧರಾದವರು.

ಕಲಿಯುಗದ ಕಾಮಧೇನು, ಭಕ್ತರ ಪಾಲಿನ ಕಲ್ಪವೃಕ್ಷರೆಂದೇ ಪ್ರಖ್ಯಾತರಾದ ಸರ್ವರಿಂದಲೂ ಪೂಜ್ಯರಾದವರು ಮಂತ್ರಾಲಯದ ಶ್ರೀ ರಾಘವೇಂದ್ರ ಗುರುಸಾರ್ವಭೌಮರು. ಮೂರು ಶತಮಾನಗಳಿಂದಲೂ ಮಂತ್ರಾಲಯದ ಬೃಂದಾವನದಲ್ಲಿ ಕುಳಿತು ದೇಹಿ ಎಂದು ಬಂದವರನ್ನು ಹರಸುತ್ತಿರುವ ಶ್ರೀರಾಘವೇಂದ್ರರ ಜಾತಿ ಮತ ಪಂಥದ ಬೇದವಿಲ್ಲದೇ ಭಕ್ತರು ವರ್ಧಂತಿ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಭಕ್ತಿಯಿಂದ ಕೂಗಿ ಕರೆಯುವವರಿಗೆ ಕಾಮಧೇನುವಾಗಿ, ಭಜಿಸುವ ಭಕ್ತರ ಕಲ್ಪವೃಕ್ಷವಾಗಿ, ಭಕ್ತರ ಚಿಂತೆಯನ್ನು ದೂರ ಮಾಡುವ ಚಿಂತಾಮಣಿಗಳು ರಾಯರು.

ಶ್ರೀಗುರುರಾಯರು, ಶ್ರೀರಾಘವೇಂದ್ರತೀರ್ಥರು, ಮಂತ್ರಾಲಯದ ಪ್ರಭುಗಳು, ಪರಿಮಳಾಚಾರ್ಯರು ಮುಂತಾದ ಹೆಸರುಗಳಿಂದ ಪ್ರಖ್ಯಾತರಾದ ಶ್ರೀಗುರುರಾಯರ ಮಹಿಮೆ ಬಣ್ಣಿಸಲಸದಳ, ಮಧ್ವ ಪರಂಪರೆಯಲ್ಲಿ ಬರುವ ಯತಿಗಳಲ್ಲಿ ಸೋಂದೆಯ ಶ್ರೀವಾದಿರಾಜರನ್ನು ಬಿಟ್ಟರೆ ಸಶರೀರವಾಗಿ ಬೃಂದಾವನಸ್ಥರಾದವರು. ಶ್ರೀರಾಘವೇಂದ್ರತೀರ್ಥರು ಒಬ್ಬರೆ. ಬರಿ ಮಂತ್ರಾಲಯವಲ್ಲದೇ ಪ್ರಪಂಚದಾದ್ಯಂತ ಇರುವ ರಾಯರ "ಮೃತ್ತಿಕಾ'' ಬೃಂದಾವನ ಇರುವ ಮಠಗಳಲ್ಲಿ ಕುಳಿತು ದೇಹಿ ಎಂದು ಬಂದವರನ್ನು ಇಂದಿಗೂ ತಮ್ಮ ತಪೋಶಕ್ತಿಯಿಂದ ಅನುಗ್ರಹಿಸುತ್ತಿದ್ದಾರೆ. ಶ್ರೀರಾಯರ ಮಠಗಳು ಭಕ್ತರ ನೆಮ್ಮದಿಯ ಸಾಂತ್ವಾನ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ ಎಂದರೆ ತಪ್ಪಾಗುವುದಿಲ್ಲ. ಇವರು ಹುಟ್ಟಿದ ದಿನವನ್ನೇ ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಜಯಂತ್ಯುತ್ಸವವನ್ನಾಗಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಫಾಲ್ಗುಣಮಾಸ ಶುಕ್ಲಪಕ್ಷದ ಸಪ್ತಮಿಯಂದು ರಾಯರ ವರ್ಧಂತಿ ಉತ್ಸವವನ್ನಾಗಿ ಆಚರಿಸುತ್ತಾರೆ. ಅಂದು ಮಂತ್ರಾಲಯದಲ್ಲಿ ಶ್ರೀಗುರುರಾಯರ ಮೂಲ ಬೃಂದಾವನಕ್ಕೆ ವಿಶೇಷ ಪೂಜೆ, ಅಭಿಷೇಕ, ವರ್ಧಂತೋತ್ಸವದ ಅಂಗವಾಗಿ ತಿರುಪತಿ ತಿರುಮಲೆ ದೇವಸ್ಥಾನದಿಂದ ಬರುವ ಶೇಷ ವಸ್ತ್ರವನ್ನು ರಾಯರ ಬೃಂದಾವನಕ್ಕೆ ತೊಡಿಸಲಾಗುತ್ತದೆ.

ಶ್ರೀಗುರುರಾಯರು ಎಲ್ಲರನ್ನು ಮುನ್ನಡೆಸುವವರು, ಹಾಗಾಗಿಯೇ ಅವರು ಪೂಜ್ಯರು. ಶ್ರೀ ರಾಘವೇಂದ್ರ ಸಕಲ ಪ್ರದಾತ ಎಂದು ಅವರನ್ನು ಸ್ತುತಿಸಲಾಗಿದೆ. "ಧರೆಯ ಮೇಲಿದ್ದ ಜನರ ಪೊರೆಯುವೆ'' ಎಂದು ಹೇಳಿ ಅದರಂತೆ ನಡೆದು ಭಕ್ತಕೋಟಿಯನ್ನು ಉದ್ಧಾರ ಮಾಡುತ್ತಿರುವ ಶ್ರೀಗುರುರಾಯರನ್ನು ಸ್ಮರಿಸಿ ಪುನೀತರಾಗೋಣ.

**ಕರ್ನಾಟಕದ ವೈಷ್ಣವ ದೇವಾಲಯಗಳು**

# ಹಲಸಿಯ ಭೂವರಾಹ ನರಸಿಂಹ ದೇವಾಲಯ

27

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಒಂದು ಪ್ರಸಿದ್ಧ ಸ್ಥಳ ಪ್ರಾಚೀನ ಶಾಸನಗಳಲ್ಲಿ ವಿಜಯ ಫಲಸಿದ, ಹಲಸಿಗೆ ಎಂಬ ಹೆಸರುಗಳಿರುವ ಹಲಸಿಯು ಆದಿ ಕದಂಬರ ದ್ವಿತೀಯ ರಾಜಧಾನಿಯೂ ಆಗಿತ್ತು ಗೋವೆಯ ಕದಂಬರ ಕಾಲದಲ್ಲಿ ಫಲಸಿಗೆ 12000 ಎಂಬ ಆಡಳಿತ ಪ್ರದೇಶದ ಕೇಂದ್ರಸ್ಥಾನವಾಗಿತ್ತು. ಹಿಂದೆ ಪ್ರಾಚೀನ ಜೈನ ಕೇಂದ್ರವೂ ಆಗಿದ್ದ ಹಲಸಿಯಲ್ಲಿ ಆದಿ ಕದಂಬರ ಕಾಲದ ಏಳು ತಾಮ್ರ ಶಾಸನಗಳು ದೊರೆತಿವೆ.

ಕದಂಬ ದೊರೆ ಕಾಕುತ್ಸವರ್ಮ, ರಘು ಮುಂತಾದ ದೊರೆಗಳು ಹಲಸಿಯಲ್ಲಿ ಆಡಳಿತ ನಡೆಸಿರುವರು ಕದಂಬ ದೊರೆ ಮೃಗೇಶವರ್ಮನು ಕ್ರಿ.ಶ.455ರಲ್ಲಿ ತಂದೆ ಶಾಂತಿವರ್ಮನ ಸ್ಮರಣಾರ್ಥವಾಗಿ ಜಿನಾಲಯವನ್ನು ನಿರ್ಮಿಸಿದ್ದನು.


ಹಲಸಿಯು ದೇವಾಲಯಗಳ ಬೀಡು ಇಲ್ಲಿ ವರಾಹ ನರಸಿಂಹ ದೇವಾಲಯ,ಸುವರ್ಣೇಶ್ವರ ದೇವಾಲಯ, ರಾಮಲಿಂಗೇಶ್ವರ,ಜಿನಬಸದಿ ಮುಂತಾದ ದೇವಾಲಯಗಳಿವೆ.

ಭೂವರಾಹ ನರಸಿಂಹ ದೇವಾಲಯವು ಹಲಸಿಯ ಗ್ರಾಮದ ನಡುವೆ ಇದ್ದು ಒಳಗಿರುವ ಭವ್ಯ ಮೂರ್ತಿ ಶಿಲ್ಪಗಳಿಂದ ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ದೇವಾಲಯವು ದ್ವಿಕೂಟಾಚಲವಾಗಿದ್ದು ಪೂರ್ವಾಭಿಮುಖವಾಗಿದೆ ಪಶ್ಚಿಮ ಗರ್ಭಗುಡಿಗೆ ಕದಂಬ ನಾಗ ಶೈಲಿಯ ಏಳು ಹಂತಗಳ ಶಿಖರವಿದೆ.

ಭೂವರಾಹ ನರಸಿಂಹ ದೇವಾಲಯದಲ್ಲಿ ಒಂದು ಗರ್ಭಗುಡಿಯಲ್ಲಿ ಯೋಗ ಮುದ್ರೆಯಲ್ಲಿರುವ ಯೋಗ ನಾರಾಯಣ ಹಾಗೂ ಅದರ ಎದುರುಗಿರುವ ಗರ್ಭಗುಡಿಯಲ್ಲಿ ಭೂ ವರಾಹ ಸ್ವಾಮಿಯ ಮನೋಹರ ಮೂರ್ತಿಗಳಿವೆ. ಯೋಗನಾರಾಯಣನ ಗರ್ಭಗೃಹದಲ್ಲಿ ಬಹಳ ಅಪರೂಪದ ಕ್ರಿ.ಶ. ನಾಲ್ಕನೆಯ ಶತಮಾನದ ಕೇವಲ ನರಸಿಂಹನ ಮೂರ್ತಿಯನ್ನು ಇಡಲಾಗಿದೆ.

### ಯೋಗನಾರಾಯಣ ಸ್ವಾಮಿ :

ಭೂವರಾಹ ನರಸಿಂಹ ದೇವಾಲಯದಲ್ಲಿರುವ ಯೋಗ ನಾರಾಯಣನ ಮೂರ್ತಿಯು ತಿಳಿ ಹಸಿರು ಶಿಲೆಯಿಂದ ಮಾಡಿರುವ ಸುಂದರಮೂರ್ತಿ ಸುಮಾರು ಮೂರು ಅಡಿ ಎತ್ತರದ ಪೀಠದ ಮೇಲೆ ಆರು ಅಡಿ ಎತ್ತರವಿರುವ ದಿವ್ಯ ನಾರಾಯಣನು ಕಮಲ ಪೀಠದ ಮೇಲೆ ಪದ್ಮಾಸನ ಹಾಕಿ ಕುಳಿತಿದ್ದು ಚತುರ್ಭುಜನಾಗಿರುವನು ದೇವನು ಮೇಲಿನ ಕೈಗಳಲ್ಲಿ ಚಕ್ರ ಹಾಗೂ ಪದ್ಮಧಾರಿಯಾಗಿದ್ದು ಕೆಳಗಿನ ಕೈಗಳು ಧ್ಯಾನಮುದ್ರೆಯಲ್ಲಿದೆ ಮಂದಸ್ಮಿತನಾಗಿರುವ ನಾರಾಯಣನ ಸುತ್ತಲೂ ಅಲಂಕೃತ ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪಗಳನ್ನು ಮೂಡಿಸಲಾಗಿದೆ. ಸ್ವಾಮಿಯು ಧರಿಸಿರುವ



-ಕೆಂಗೇರಿ ಚಕ್ರಪಾಣಿ
9448386886



ಕಂಠಾಭರಣ,ಭುಜಕೀರ್ತಿ,ಸೂಕ್ಷ್ಮ ಕೆತ್ತನೆಗಳು ಕಿರೀಟ, ಇಳೆವಸ್ತ್ರ ಬಹಳ ಸೊಗಸಾಗಿದೆ.

### ಭೂ ವರಾಹಸ್ವಾಮಿ

ಯೋಗನಾರಾಯಣನ ಎದುರು ಬದಿಯಲ್ಲಿರುವ ಗರ್ಭಗೃಹದಲ್ಲಿ ಯೋಗ ನಾರಾಯಣನಷ್ಟೇ ಸುಂದರ ವಾದ ಭೂ ವರಾಹಸ್ವಾಮಿಯ ದಿವ್ಯ ಮೂರ್ತಿಯಿದೆ. ಸುಮಾರು ಆರು ಅಡಿ ಎತ್ತರವಿರುವ ವರಾಹಸ್ವಾಮಿಯು ಪಾಶ್ವಕ್ಕೆ ತಿರುಗಿದ್ದು ತನ್ನ ಎಡಭುಜದ ಮೇಲೆ ಲಕ್ಷ್ಮಿಯನ್ನು ಕೂರಿಸಿಕೊಂಡಿ ರುವನು ದೇವನ ಒಂದು ಕಾಲು ನಾಗ ರಾಜನ ಮೇಲೆಯು ಮತ್ತೊಂದು ಕಾಲು ಆವೆಯ ಮೇಲೆ ಇದ್ದು ಮೂರ್ತಿಯು ಚಲಿಸುತ್ತಿರುವಂತೆ ಗೋಚರಿಸುತ್ತದೆ. ತಿಳಿಹಸಿರು ಬಣ್ಣದ ಕಲ್ಲಿನಿಂದ ರಚಿಸಿರುವ ದೇವನ ಮೂರ್ತಿಯ ಕಿರೀಟ ತೆರದ ಬಾಯಿ ಯಿಂದ ಹೊರ ಬಂದಿರುವ ಕೋರೆ ಹಲ್ಲುಗಳು, ತೀಕ್ಷ್ಣವಾದ ನೇತ್ರ, ಧರಿಸಿ ರುವ ಆಭರಣಗಳು ವರ್ಣನೆಗೆ ನಿಲು ಕಷ್ಟು ಸುಂದರವಾಗಿವೆ. ಚಲಿಸುತ್ತಿ ರುವಂತಿರುವ ದೇವನು ಧರಿಸಿರುವ ವಸ್ತ್ರಗಳು ವಾಲಿದಂತೆ ಬಿಂಬಿಸ ಲಾಗಿದೆ. ಈ ಎರಡೂ ಮೂರ್ತಿಗಳು ಹನ್ನೊಂದನೆಯ ಶತಮಾನಕ್ಕೆ ಸೇರಿದ್ದು, ನಮ್ಮ ನಾಡಿಗೆ ಗೋವೆಯ ಕದಂಬರ ಕೊಡುಗೆ ಈ ರೀತಿಯ ದಿವ್ಯ ಮೂರ್ತಿ ಗಳು ಕನ್ನಡ ನಾಡಿನಲ್ಲಿ ಹಲಸಿಯಲ್ಲಿದೆ ಬೇರೆಲ್ಲೂ ಕಾಣಸಿಗುವುದಿಲ್ಲ.

### ಆದಿನರಸಿಂಹ

ಹಲಸಿಯ ಯೋಗನಾರಾಯ ಣನ ಗರ್ಭಗುಡಿಯಲ್ಲಿರುವ ಆದಿ ನರ ಸಿಂಹ ಸ್ವಾಮಿಯು ಕ್ರಿ.ಶ.ನಾಲ್ಕನೆಯ ಶತಮಾನಕ್ಕೆ ಸೇರುವ ಕನ್ನಡ ನಾಡಿನ ಪ್ರಾಚೀನ ನರಸಿಂಹನ ಮೂರ್ತಿ ಯಾಗಿದೆ ಪ್ರಸಿದ್ಧ ವಿದ್ವಾಂಸರಾದ ಡಾ॥ ಆ.ಸುಂದರರವರು ಹಲಸಿಯ ನರ ಸಿಂಹನನ್ನು ವಿಶೇಷವಾಗಿ ಅಭ್ಯಸಿಸಿರು ವರು. ಶಿವಮೊಗ್ಗ ಜಿಲ್ಲೆ ಕುಬಟೂರು, ಕುಪ್ಪಗದ್ದೆ, ಉಡುಪಿ ಜಿಲ್ಲೆಯ ಸಾಲಿಗ್ರಾಮ ಮುಂತಾದ ಕಡೆಗಳಲ್ಲಿ ಆದಿಕದಂಬರ ಕಾಲದ ಪ್ರಾಚೀನ ನರಸಿಂಹ ಶಿಲ್ಪಗಳಿ ರುವುದು ಉಲ್ಲೇಖನೀಯ ಬಲಗಾಲವನ್ನು ಲಂಬವಾಗಿ ಮಡಚಿಕೊಂಡಿರುವ ದ್ವಿಬಾಹು ನರಸಿಂಹ ಮೂರ್ತಿಯು ನರ ಸಿಂಹಮೂರ್ತಿ ಶಿಲ್ಪದ ವಿಕಸನದ ಪ್ರಥಮ ಹಂತವನ್ನು ಸೂಚಿಸುತ್ತದೆ.

ಸ್ಥಳೀಯವಾಗಿ ಬಾಲನರಸಿಂಹ ನೆಂದು ಕರೆಯಲಾಗಿರುವ ದೇವನು ಹಲಸಿಯಲ್ಲಿರುವ ಮೂರ್ತಿಗಳಲ್ಲಿಯೇ ಪ್ರಾಚೀನ ಶಿಲ್ಪವಾಗಿರುವುದು ಕ್ರಿ.ಶ.1171 ರಲ್ಲಿ ಗೋವೆಯ ಕದಂಬ ಅರಸು ಶಿವ ಚಿತ್ತಪೆರ್ಮಾಡಿ ದೇವನು ತನ್ನ ತಾಯಿಯ ಮನೋಭಿಲಾಷೆಯಂತೆ ನರಸಿಂಹ ದೇವರ ನಿತ್ಯ ಪೂಜೆಗಾಗಿ ದತ್ತಿಯನ್ನು ಬಿಟ್ಟಿರುವ ಉಲ್ಲೇಖವಿದೆ.

ಭೂವರಾಹ ನರಸಿಂಹ ದೇವಾ ಲಯವು ನರಸಿಂಹ ಜಾಗೃತ ಸ್ಥಳ ಎಂದು ಆಸ್ತಿಕರ ನಂಬಿಕೆ, ಭೂ ವರಾಹ ಸ್ವಾಮಿಯ ಗರ್ಭಗುಡಿಯಲ್ಲಿ ಹನ್ನೊಂದ ನೆಯ ಶತಮಾನಕ್ಕೆ ಸೇರುವ ಸೂರ್ಯ



ದೇವನ ಮೂರ್ತಿಯನ್ನು ಇರಿಸಿರು ವರು.

ಕೇಂದ್ರ ಪುರಾತತ್ವ ಇಲಾಖೆಯ ರಕ್ಷಣೆಯಲ್ಲಿರುವ ದೇವಾಲಯದ ಸುತ್ತಲೂ ಅಂದವಾದ ಹಸಿರು ಉದ್ಯಾ ನವನ್ನು ನಿರ್ಮಿಸಿರುವುದು ದೇವಾಲ ಯದ ಹೊರನೋಟವು ನಯನ ಮನೋಹರವಾಗಿ ಗೋಚರಿಸುತ್ತದೆ. ಹಲಸಿಯ ಭೂವರಾಹ ನರಸಿಂಹ ದೇವಾಲಯವನ್ನು ಗೋವೆಯ ಕದಂಬ ದೊರೆ ಮೂರನೆಯ ಜಯ ಕೀರ್ತಿಯು ಕ್ರಿ.ಶ.1186ರಲ್ಲಿ ಸ್ಥಾಪಿಸಿರುವುದಕ್ಕೆ ಶಾಸನಾಧಾರವಿದೆ.

### ಹೀಗೆ ಬನ್ನಿ:

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಹಲಸಿಯು ಬೆಳಗಾವಿ ಯಿಂದ ಸುಮಾರು 60 ಕಿ.ಮೀ ಹಾಗೂ ಖಾನಾಪುರದಿಂದ 14 ಕಿ.ಮೀ. ದೂರ ದಲ್ಲಿದೆ. ಬೆಳಗಾವಿಯಿಂದ ಖಾನಾ ಪುರಕ್ಕೆ ಬಂದು ಹಲಸಿಯನ್ನು ಸೇರ ಬಹುದು. ಇತಿಹಾಸ ಪ್ರಸಿದ್ಧ ಸ್ಥಳ ಕಿತ್ತೂರಿನಿಂದಲೂ ಖಾನಾಪುರಕ್ಕೆ ಬಂದು ಹಲಸಿಗೆ ಬರಬಹುದು.

ಧಾರಾವಾಹಿ



# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

### ಪಾಂಡ್ಯರ ಆಳ್ವಿಕೆಯಲ್ಲಿ ತಿರುಮಲೆ

ಒಂದನೇ ಜಟಾವರ್ಮ ಸುಂದರ ಪಾಂಡ್ಯನ ಪ್ರಶಸ್ತಿಯನ್ನು ಸಂಸ್ಕೃತದಲ್ಲಿ ಹೊಂದಿದ ಒಂದೇ ಒಂದು ಪಾಂಡ್ಯರಾಜ ಶಾಸನ ಉಪಲಬ್ಧವಾಗಿದೆ.

ಜಿ.ಟಿ.175 ರಲ್ಲಿ ನೀಡಲಾಗಿರುವ ಅವನ ಪ್ರಶಸ್ತಿಯಂತೆ ಅವನು ಸೋಮಕುಲ ತಿಲಕ. ಮಧುರೆಯ ರಾಜ (ಮಧುರಪುರಿ ಮಾಧವ) ಕೇರಳಿಗರ ಹರ (ಕೇರಳವಂಶ ನಿರ್ಮೂಲನ) ಲಂಕಾಪುರದ ನಾಶಕನಾದ (ಲಂಕಾಪುರಿ ಲುಂಠನ ದ್ವಿತೀಯರಾಮ) ಎರಡನೇ ಶ್ರೀರಾಮಚಂದ್ರ, ಚೋಳಕುಲ ಶೈಲಕುಲಿಶ, ಕರ್ನಾಟಕ ರಾಜನನ್ನು ಓಡಿಸಿದವ (ಕರ್ನಾಟಕ ರಾಜ ವಿದ್ರಾವಣ) ಹಲವು ಮಂದಿ ಶತ್ರುಗಳ ಕೋಟೆಗಳನ್ನು ನಾಶ ಮಾಡಿದವ (ವಿವಿಧ ರಿಪು ದುರ್ಗಮಥನ) ವೀರಗಂಡಗೋಪಾಲನೆಂಬ ಅರಣ್ಯದ ಬೆಂಕಿ(ವೀರಗಂಡಗೋಪಾಲ ವಿಪಿನ ದಾವ ದಹನ) ನಗರ ಶ್ರೇಷ್ಠ ಕಂಚಿಯ ಪ್ರಭು (ಕಾಂಚೀ ಪುರವರಾಧೀಶ್ವರ) ಗಣಪತಿಯೆಂಬ ಜಿಂಕೆಗೆ ಹುಲಿಯಾದವ (ಗಣಪತಿ ಹರಿಣ ಶಾರ್ದೂಲ) ಆಶ್ರಿತ ರಾಜರ ಪ್ರತಿಷ್ಠಾಪಕ (ಪ್ರಣತರಾಜ ಪ್ರತಿಷ್ಠಾಧಿಪತಿ) ಅಧಿರಾಜ ಮಹಾರಾಜರ ರಾಜ (ತ್ರಿಭುವನ ಚಕ್ರವರ್ತಿ)ಅವನು ಸುಂದರ ಪಾಂಡ್ಯಪ್ಪೆರುಮಾಳ್. ಈ ರಾಜನಿಗೆ ಸಂಬಂಧಿಸಿದಂತೆ ತಿರುಮಲೆಯ ಆಲಯದಲ್ಲಿ ಇನ್ನೂ ಹಲವಾರು ಶಾಸನಗಳಿದ್ದರೂ (127,140,164,172, 175, 230,241,ತಿ.ತಿ. ಹಾಗೂ ಜಿ.ಟಿ.11) ಅವುಗಳಲ್ಲಿ ಇತರ ಯಾವುದೇ ಉಪಯುಕ್ತ ಸಾಮಗ್ರಿಯಿಲ್ಲ.

### ಪಾಂಡ್ಯ ಮಾಂಡಳಿಕ ಯಾದವರಾಯರು

ಈ ಭಾಗದ ತೊಂಡಮಂಡಲವನ್ನು ಮೊದಲಿಗೆ ಚೋಳರ ಮಾಂಡಳಿಕರಾಗಿ ನಂತರ ಪಾಂಡ್ಯರ ಸಾಮಂತರಾಗಿ ನಂತರ ಸ್ವತಂತ್ರ ದೊರೆಗಳಾಗಿ ಆಳಿದ ಯಾದವ ರಾಯರು ತಿರುಮಲೆಯ ಹಿರಿಯ ಭಕ್ತರಾಗಿದ್ದು, ಆಲಯದ ಪೋಷಕರಾಗಿದ್ದರು. ತಿರುಮಲೆಯ ಆಲಯದೊಡನೆ ಸಂಬಂಧ ಹೊಂದಿದ ಮೊದಲಿಗರಲ್ಲಿ ವೀರನರಸಿಂಹದೇವನು ಪ್ರಥಮ. ಈ ದೊರೆಯು ಆಲಯದಲ್ಲಿ ಪ್ರತಿದಿನ ನೈವೇದ್ಯಕ್ಕಾಗಿ ಅಕ್ಕಿತುಪ್ಪಗಳನ್ನು ದೊರಕಿಸಿ ಕೊಡಲು ಒಂದು ಗ್ರಾಮವನ್ನು ದತ್ತಿ ನೀಡಿದ. (ತಿ.ತಿ.164) ಅವಿಲಾಲದ ಬಳಿಯ ಸ್ವಲ್ಪ ಜಮೀನನ್ನು ಇನ್ನೊಬ್ಬ ಸದಸ್ಯ ತಿರುಕಾಳತ್ತಿ ದೇವನು ಆಲಯಕ್ಕೆ ನೀಡಿದ (ತಿ.ತಿ.170) ವೀರ ರಾಕ್ಷಸ ಯಾದವರಾಯನೂ ಸ್ವಲ್ಪ ಜಮೀನನ್ನು ಆಲಯಕ್ಕೆ ನೀಡಿದ (ತಿ.ತಿ.293) ವೀರ ನರಸಿಂಗನ ರಾಣಿಯು ಎರಡು ನಂದಾದೀಪಗಳ ತುಪ್ಪಕ್ಕಾಗಿ 64 ಹಸುಗಳನ್ನೂ ಎರಡು ಗೂಳಿಗಳನ್ನೂ ನೀಡಿದಳು. (ತಿ.ತಿ.381) ವೀರ

ನರಸಿಂಗನ ಆಳ್ವಿಕೆಯ ನಲವತ್ತನೆಯ ವರ್ಷದಲ್ಲಿ ಇಲ್ಲಿಗೆ ಯಾತ್ರಿಕನಾಗಿ ಬಂದ ತಿರುಪುಲ್ಲಾಣಿದಾಸರು ಶ್ರೀವೆಂಕಟೇಶ್ವರನ ಆಲಯವನ್ನು ದೊರೆಯ ಅನುಮತಿ ಪಡೆದು ಜೀರ್ಣೋದ್ಧಾರಗೊಳಿಸಿದ. ಈ ದೊರೆಯು ತಿರುಮಲೆಯಲ್ಲಿ ತುಲಾಭಾರವನ್ನು ನಡೆಸಿ ವೆಂಕಟಗಿರಿಯನ್ನು ಮೇರು ಪರ್ವತವೆನ್ನಿಸಿದ. (ತಿ.ತಿ.371) ಈ ವಂಶದ ಇನ್ನೊಬ್ಬ ರಾಜ ತಿರುವೆಂಕಟನಾಥನು ದೇವರ ಆಡಿ-ತಿರುನಾಳ್ ಮಹೋತ್ಸವ ನಡೆಸಲು ಒಂದು ಗ್ರಾಮವನ್ನು ಸರ್ವಮಾನ್ಯವಾಗಿ ನೀಡಿದ. (ತಿ.ತಿ.189) ಇವನ ಮಾವ ಮಹಾಪ್ರಧಾನಿ ಸಿಂಗಯ ದಣ್ಣಾಯಕನು ಆಲಯದಲ್ಲಿ ಸಿತಕರ ಸಂಧಿಯ ನೈವೇದ್ಯದ ಏರ್ಪಾಡು ಮಾಡಿದ (ತಿ.ತಿ.195) ಈ ಕುಟುಂಬದ ಇನ್ನೊಬ್ಬ ರಾಜ ಶ್ರೀರಂಗನಾಥನ ಆಡಳಿತದ ಮೂರನೇ ವರ್ಷದ ದಾಖಲೆಯು ಬೆಟ್ಟದ ಮೇಲಿನ ಮಠಗಳು, ಹೂದೋಟಗಳನ್ನು ಹೇಳಿ, ಶ್ರೀವೆಂಕಟೇಶ್ವರಸ್ವಾಮಿಯ ಪಾರುವೇಟೆ ಉತ್ಸವನ್ನು ವಿವರಿಸುತ್ತದೆ. ಹದಿನಾರು ವರ್ಷಗಳ ನಂತರದ ಇನ್ನೊಂದು ದಾಖಲೆ; ಲೋಹದ ಮಲೈ ಕುನಿಯ ನಿನ್ರ ಪೆರುಮಾಳ್ ಹಾಗೂ ಅವನ ನಾಯಕಿಯರನ್ನು ವಿವರಿಸುತ್ತದೆ. (1-106) ಒಂದು ದಾಖಲೆ ವಸಂತೋತ್ಸವದ್ದು (1-113 337 ತಿ.ತಿ.) ಹೋಬಲ ಯಾದವರಾಯನು ದೇವರ ವರದಹಸ್ತಕ್ಕೆ (ಬಲಗಡೆಯ ಕೆಳಗೈಗೆ) ಒಂದು ಆಭರಣ ನೀಡಿದ (56ಎ ತಿ.ತಿ. 1-117).

ಈ ಶಾಸನಗಳಿಂದ ಆಲಯಕ್ಕೆ ನೀಡಲಾದ ದತ್ತಿಗಳ ಬಗ್ಗೆ ಹಲವು ಆಸಕ್ತಿಕರ ವಿವರಗಳು ತಿಳಿದುಬರುತ್ತವೆ. ತಿ.ತಿ.165- ರಾಜರು ನೀಡುತ್ತಿದ್ದ ಜಮೀನು ಅಥವಾ ಹಳ್ಳಿಗಳ ದಾನವನ್ನು ವಿವರಿಸುತ್ತದೆ. ಆಲಯದ ಸ್ಥಾನತ್ತಾರರು ಅಗರಪ್ಪರುವಿನಲ್ಲಿ ಜಮೀನಿನ ದೇಣಿಗೆಗಾಗಿ ಚಿನ್ನಹ ಸಲ್ಲಿಸಿದಾಗ, ಕುಡವೂರು ನಾಡು ಹಾಗೂ ತೊಂಡಪಡಿಪ್ಪರ್ ನಾಡವರು ಅದನ್ನು ಒಪ್ಪಿ ಕೊನೆಗೆ ವಲಿಯವಿಮಾನಾಟ್ಟನ್ (ಕಂದಾಯಾಧಿಕಾರಿ) ಅದನ್ನು ಅನುಮೋದಿಸಿದ ನಂತರ ರಾಜನು ಚಿನ್ನಹದಲ್ಲಿ ಸೂಚಿಸಿರುವಂತೆಯೇ ದೇಣಿಗೆ ನೀಡಲು ಒಪ್ಪಿ ಯಾದವರಾಯನ ಮೂಲಕ ಬಾಯಿ ಮಾತಿನಲ್ಲಿ ಆಜ್ಞೆ ನೀಡುತ್ತಿದ್ದ. ಈ ಪದ್ಧತಿ ಚೋಳರ ಕಾಲದಲ್ಲಿ-ವಿಶೇಷವಾಗಿ ಮೂರನೇ ರಾಜೇಂದ್ರನ ಕಾಲದಲ್ಲಿ ಜಾರಿಯಲ್ಲಿದ್ದಿತು. (ಜಿ.ಟಿ.126)

## ವಿಜಯನಗರದ ಅರಸುಗಳು

ಕ್ರಿ.ಶ.1336ರಲ್ಲಿ ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯು ದಕ್ಷಿಣ ಭಾರತದ ಧಾರ್ಮಿಕ,ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಪ್ರಮುಖ ತಿರುವು. ಹದಿನಾಲ್ಕನೇ ಶತಮಾನದ ಮೊದಲ ಮೂರು ದಶಕಗಳಲ್ಲಿ ನಡೆದ ಮುಸಲ್ಮಾನ ಧಾಳಿಗಳಿಂದಾಗಿ ಈ ಭಾಗದ ಆಲಯಗಳು ಹಾಗೂ ದೇವರ ವಿಗ್ರಹಗಳು ಒಂದು ಕಠಿಣವಾದ ಪರಿಸ್ಥಿತಿಯನ್ನೆದುರಿಸಬೇಕಾಯಿತು. ಹೈಂದವ ಸಾಮ್ರಾಜ್ಯ ಇವುಗಳಿಗೆ ಅಗತ್ಯವಿದ್ದ ಎಲ್ಲ ರಕ್ಷಣೆ ಹಾಗೂ ಪೋಷಣೆಗಳನ್ನು ನೀಡಿತು. ತಿರುಮಲೆಯ ಆಲಯವು ಸಾಮ್ರಾಜ್ಯದ ಎಲ್ಲ ರಾಜರ ಭಕ್ತಿಯನ್ನು ಆಕರ್ಷಿಸಿ, ಅಪೂರ್ವವಾದ ಪ್ರಸಿದ್ಧಿಯ ಘಟ್ಟಕ್ಕೇರಿತು.

## ಸಂಗಮವಂಶದ ಆಳ್ವಿಕೆಯಲ್ಲಿ ತಿರುಮಲೆ

ಆಲಯದ ಶಾಸನಗಳಲ್ಲಿ ಸುಲಭವಾಗಿ ಗುರುತಿಸಲ್ಪಡುವ ಸಂಗಮವಂಶದ ರಾಜನೆಂದರೆ ಎರಡನೇ ಹರಿಹರ. ಪ್ರಭವ ಶಕವರ್ಷ 1309 ರಲ್ಲಿ ತಿ.ತಿ.103 ರಲ್ಲಿ ಹೆಸರಿಸಲ್ಪಟ್ಟ ಹಿರಿಯ. ಆದರೆ ಇವನಿಗೂ ಮೊದಲಿನ ಬುಕ್ಕನ ಶಾಸನಗಳು ಹಲವು ಇವೆ. (ತಿ.ತಿ.487, 237, 238 ಹಾಗೂ 485) ಇವುಗಳಲ್ಲಿ ಯಾವುದರಲ್ಲೂ ರಾಜನ ಹೆಸರು ಸೂಚಿತವಾಗಿಲ್ಲವಾದರೂ, ಜೀರ್ಣಾವಸ್ಥೆಯಲ್ಲಿರುವ ಕಾಲಸೂಚನೆಯಿಲ್ಲದ 487, ತಿ.ತಿ. ಶಾಸನವು ಬುಕ್ಕರಾಯನ್ ಸಂಧಿ ಎಂಬ ಹೆಸರಿನಲ್ಲಿ ಸಂಧಿ ಕಾಲದ ನೈವೇದ್ಯಕ್ಕಾಗಿ ಒಂದು ಗ್ರಾಮದ ದೇಣಿಗೆಯನ್ನು ತಿಳಿಸುತ್ತದೆ. ತಿ.ತಿ.44ರಲ್ಲಿ ಇದೇ ಬುಕ್ಕರಾಯನ್ ಸಂಧಿ ನೈವೇದ್ಯವನ್ನು ಶಕ 1379 ರಲ್ಲಿ (ಕ್ರಿ.ಶ. 1457) ಉಲ್ಲೇಖಿಸಲಾಗಿದೆ.

ಆಲಯದ ಗರ್ಭಗೃಹವನ್ನು ಚಿನ್ನದ ಗಿಲೀಟು ಮಾಡಿಸಿ ವಿಮಾನಶಿಖರದಲ್ಲಿ ಒಂದು ಚಿನ್ನದ ಕಳಶವನ್ನು ಪ್ರಮುಖ ಮಾಂಡಳಿಕನಾದ ಮಹಾಮಂಡಲೇಶ್ವರ ಮಂಗಿದೇವನು ಕ್ರಿ.ಶ.1369 ರಲ್ಲಿ ಸ್ಥಾಪಿಸಿದ. (ತಿ.ತಿ.237) ಕಂಪಣನ ಒಬ್ಬ ಮಂತ್ರಿಯು ಆಲಯಕ್ಕೆ 26 ಹಸು ಹಾಗೂ ಒಂದು ಗೂಳಿಯನ್ನು ನೀಡಿದ. (ತಿ.ತಿ.373,485) ಕ್ರಿ.ಶ.1388 ರಲ್ಲಿ ಅಂದು ರಾಜ್ಯವಾಳುತ್ತಿದ್ದ ಹರಿಹರರಾಯನ ಹೆಸರಿನಲ್ಲಿ ಮುಲ್ಲೈ ತಿರುವೆಂಕಟಜಿಯರು ಮಾಸಿ ತಿರುನಾಳ್ ಉತ್ಸವವನ್ನೇರ್ಪಡಿಸಿದರು (ತಿ.ತಿ.103) ಕ್ರಿ.ಶ.1390 ರ ಒಂದು ದಾಖಲೆ ಉತ್ಸವ ಮೂರ್ತಿಗಳ ಮುಂದೆ ಪಾಶುರಗಳನ್ನು ಹಾಡುವ ತಿರುಪ್ಪಾವೈ ಉತ್ಸವವನ್ನು ವಿವರಿಸುತ್ತದೆ. ಮೂರು ವರ್ಷಗಳ ನಂತರದ ಒಂದು ಶಾಸನ ಪ್ರತಿ ಉತ್ಸವದ ವಿಡಯಾಟ್ರು (ವಿದಾಯ ಹೇಳುವ ದಿನ) ದಿನವನ್ನು ಕುರಿತು ಹೇಳುತ್ತದೆ. (ತಿ.ತಿ.143) ಕ್ರಿ.ಶ.1404 ರ ಒಂದು ಶಾಸನ ಕೊಡೈ ತಿರುನಾಳನ್ನು ಕುರಿತು ಹೇಳುತ್ತದೆ (ತಿ.ತಿ.340).

ಎರಡನೇ ಹರಿಹರನ ಒಂದು ಶಾಸನ (ತಿ.ತಿ.103) ಶ್ರೀ ವೆಂಕಟೇಶ್ವರಸ್ವಾಮಿಗೆ ತನ್ನ ಹೆಸರಿನಲ್ಲಿ ಮಾಡಿಸಿದ ಉತ್ಸವವೊಂದರ ವ್ಯವಸ್ಥೆಯನ್ನು ವಿವರಿಸಿ ಅದರ ಏರ್ಪಾಡಿಗೆ

ಪೂಂಗೋಡು ಗ್ರಾಮದ ವಾರ್ಷಿಕ ಆದಾಯವಾದ ನೂರು ಪಣಂ ಅನ್ನು ಶ್ರೀವೈಷ್ಣವ ಮಠದ ಅಧಿಕಾರಿಯು ನೀಡಬೇಕೆಂದು ತಿಳಿಸುತ್ತದೆ.ಮಠದ ಅಧಿಕಾರಿಗೆ ಗ್ರಾಮವನ್ನು ಒಪ್ಪಿಸಿರಬೇಕೆಂದು ತೋರುತ್ತದೆ. ಈ ಮಠದ ಧಾರ್ಮಿಕ ಪ್ರಭಾವಕ್ಕೆ ವಿಜಯನಗರದ ಅರಸರ ಮೊದಲ ವಂಶ ನಿಧಾನವಾಗಿ ಒಳಗಾಗಿ, ಈ ದೇವಾಲಯದಲ್ಲಿ ವೇದಪಾರಾಯಣವು ಎರಡನೇ ದೇವರಾಯನ ಕಾಲದಲ್ಲಿ ಮೊದಲಿಯಾರ್ ತಿರುಕಲಿಕನ್ರಿ ದಾಸರ್ ಅಳಗಪ್ಪಿರ ನಾರ್ ಅವರ ಪ್ರಯತ್ನದಿಂದಾಗಿ ಉಂಟಾಯಿತು.ಜೊತೆಗೇ ಮಂಟಪ, ಗೋಪುರಗಳ ನಿರ್ಮಾಣವೂ ಆಯಿತು.ಇದರೊಡನೆಯೇ ಅನ್ನಸತ್ರಗಳು,ತುಳಸೀತೋಟಗಳು,ಹೆಚ್ಚಾಗಿ ಉತ್ಸವಗಳು ಹೆಚ್ಚಾಗಿ ಅವುಗಳ ನಿರ್ವಹಣೆಗಾಗಿ ಗ್ರಾಮಗಳ ಮಾನ್ಯಗಳೂ ಕಂದಾಡೈ ರಾಮಾನುಜಅಯ್ಯಂಗಾರ್ಯನ ಪ್ರಭಾವದಿಂದ ಸಾಳುವ ನರಸಿಂಹನು ನೀಡುವಂತಾಯಿತು.

ಎರಡನೇ ದೇವರಾಯನು ಅರೆಡಜನ್ ಶಾಸನಗಳಲ್ಲಿ ಪ್ರತಿನಿಧಿಸಲ್ಪಟ್ಟಿದ್ದಾನೆ. ಶಕ 1351ರ ಸೌಮ್ಯ ನಾಮ ಸಂವತ್ಸರದಲ್ಲಿ (5-12-1429) ಆಲಯದ ನಿತ್ಯನಿವೇದನಕ್ಕಾಗಿ ಈತ ಮೂರು ಹಳ್ಳಿಗಳನ್ನು ಮಾನ್ಯನೀಡಿ, 1200 ಪೊನ್‌ಗಳನ್ನೂ ನೀಡಿದ. (ತಿ.ತಿ.188) ಶಕ 1355 ರ ಪ್ರಮಾದೀಚನಾಮ ಸಂವತ್ಸರದಲ್ಲಿ ದೇವಣ್ಣ ಒಡೆಯರ ಶಿಫಾರಸ್ಸಿನಂತೆ ಸಿದ್ಧಕುಟ್ಟೈ ಅಥವಾ ಶ್ರೀನಿವಾಸಪುರದ ರಾಜಾದಾಯದ ಅರ್ಧಭಾಗವನ್ನು (ವರ್ಷಕ್ಕೆ ಪ್ರಾಯಶಃ 200 ಪೊನ್ ಆದಾಯದ್ದು) ಆಲಯದ ಶ್ರೀಭಂಡಾರಕ್ಕೆ ಮೊದಲೇ ಸೇರಿದ್ದ ಉಳಿದ ಅರ್ಧಭಾಗದಂತೆಯೇ ಸೇರಿಸಿ ಆ ವರ್ಷ ಪುನಃ ನವೀಕೃತವಾದ ವೇದ ಪಾರಾಯಣ ಮಾಡುವ 24 ಮಂದಿ ಬ್ರಾಹ್ಮಣರಿಗೆ ಇನಾಮು ನೀಡಿದ. (ತಿ.ತಿ 89,149) ಈ ಹಳ್ಳಿ ಕೊತ್ತಲಸ್ಥಳದಲ್ಲಿ ವೈಕುಂಡ-ವಲನಾಡುಗಳ ಉಪವಿಭಾಗವಾಗಿರಬೇಕು. ಕೊಟ್ಟಂ ಹೆಸರನ್ನು ಹೇಳದಿದ್ದರೂ, ವೈಕುಂಡ ವಲನಾಡು ಮತ್ತು ತಿರುಕ್ಕುಡವೂರುಗಳೆರಡೂ ಚಂದ್ರಗಿರಿ ರಾಜ್ಯದ ತಿರುವೆಂಕಟಕೊಟ್ಟಂ ಜಿಲ್ಲೆಯದೆಂದು ತಿಳಿಯುವುದು.

ದೇವಣ್ಣ ಒಡೆಯರಲ್ಲದೆ ಎರಡನೇ ದೇವರಾಯನ ಇನ್ನೊಬ್ಬ ಅಧಿಕಾರಿ ಮಲ್ಲಣ್ಣನೂ ಶಕ 1330ರ ಸರ್ವಧಾರಿ(13-3-1409) ಸಂವತ್ಸರದ ಶಾಸನದಲ್ಲಿ ಉಲ್ಲೇಖಿತನಾಗಿದ್ದಾನೆ. ಈತನು ಮೊದಲಿಗೆ ಮೈಸೂರು ಪ್ರಾಂತ್ಯದ ಆಡಳಿತಾಧಿಕಾರಿಯಾಗಿ ಕೆಲಸ ನಿರ್ವಹಿಸಲು ಕಳುಹಿಸಲ್ಪಟ್ಟು ನಂತರ ಚಂದ್ರಗಿರಿಯ ರಾಜ್ಯಪಾಲನಾದ.ಮೇಲೆ ಹೇಳಿದ ಶಕ 1330 ಪ್ರಾಯಶಃ ಆತ ಆಡಳಿತ ಸ್ವೀಕರಿಸಿದ ವರ್ಷವಾಗಿರಬೇಕು. ಈತ ಶ್ರೀವೆಂಕಟೇಶ್ವರ ಸ್ವಾಮಿಗೆ ನೈವೇದ್ಯ ಹಾಗೂ ನಿತ್ಯದೀಪದ ಏರ್ಪಾಡು ಮಾಡಿದ.

ಆತನ ಹೆಸರು ಮೂಡಿಬರುವ ನಂತರದ ಶಾಸನವೆಂದರೆ ಶಕವರ್ಷ 1339 ರ ಹೇವಿಳಂಬಿ ಸಂವತ್ಸರ (25-8-1417) (ತಿ.ತಿ.88), ಈ ಬಾರಿ ಆತ ಮಧ್ಯದೇವಾಲಯದ ಮುಂದಿರುವ ತಿರುಮಾಮಣಿ ಮಂಟಪ ನಿರ್ಮಾಣವನ್ನು ತಳದಿಂದ ಮೇಲು ಛಾವಣಿಯವರಿಗೆ ಪೂರ್ತಿಗೊಳಿಸಿ, ಆನಂದ ನಿಲಯ (ಗರ್ಭಗುಡಿಯ ಮೇಲಿನ) ವಿಮಾನದ ಜೀರ್ಣೋದ್ಧಾರ ಮಾಡಿರಬೇಕು. (ತಿ.ತಿ.235) ಆತನ ಅತಿ ಈಚಿನ ಶಾಸನವೆಂದರೆ ಶಕ 1336 ರ ರಕ್ತಾಕ್ಷಿ ಸಂವತ್ಸ ರದ್ದು (2-10-1444)(ತಿ.ತಿ.64) ಇದು ಎರಡನೇ ದೇವರಾಯನ ಆಳ್ವಿಕೆಯ ಕೊನೆಯ ಐದಾರು ವರ್ಷಗಳ ಮೊದಲಿಗೆ ನಮ್ಮನ್ನು ಕರೆದೊಯ್ಯುತ್ತದೆ. ಪ್ರಾಯಶಃ ಕ್ರಿ.ಶ.1347 ವರ್ಷದಲ್ಲಿ ಇರಗಪ್ಪ ಒಡೆಯನ ಉತ್ತರಾಧಿಕಾರಕ್ಕೆ ಪ್ರಾಯಶಃ ಈತನು (ಆ.ಸ.ವರದಿ- 1907.08 ಪುಟ-248) ವರ್ಗಾಯಿತನಾಗಿರಬೇಕು.

(ತಿ.ತಿ.92) ಶಾಸನ ಸಂಸ್ಕೃತ ಶಾರ್ದೂಲ ವಿಕ್ರೀಡಿತ ವೃತ್ತದ ಪದ್ಯವಾಗಿದ್ದು,ಆತನನ್ನು ಅಮಾತ್ಯಶೇಖರ ಎಂದು ಕರೆದಿದೆ. ಈ ಪದವಿ ವಿಜಯನಗರದ ರಾಜಪ್ರತಿನಿಧಿಗಳು, ರಾಜ್ಯಪಾಲರು, ಮಂತ್ರಿಗಳ ಪದವಿಗೆ ಸಮಾನವಾಗಿದ್ದು,ಶಕ 1309 ರ ವೇಳೆಗೇ ಎರಡನೇ ಹರಿಹರನ ಕಾಲದಲ್ಲಿಯೇ ಮಲ್ಲಣನು ಈ ಪದದಿಂದ ಸನ್ಮಾನಿತನಾಗಿರಬೇಕು. ಆತನ ಬಗೆಗಿನ ದೀರ್ಘ ಅವಧಿಯ ಕಾಲಾಂತರವುಳ್ಳ ಶಾಸನಗಳಲ್ಲೆಲ್ಲ ಆತ ಚಂದ್ರಗಿರಿ ವಾಸಿ ಎಂದು ಗುರುತಿಸಲಾಗಿರುವುದರಿಂದ ಚಂದ್ರಗಿರಿ ರಾಜ್ಯವನ್ನು ಆತ ಶಕವರ್ಷ 1330 ರಿಂದ 1366ರ ವರೆಗೆ ಪಾಲಿಸಿದನೆಂದು ತೀರ್ಮಾನಿಸಬಹುದು. ಆದರೆ ಶಕವರ್ಷ 1335 ರಲ್ಲಿ ದೇವಣ್ಣ ಒಡೆಯನು ಚಂದ್ರಗಿರಿ ರಾಜ್ಯವನ್ನಾಳುತ್ತಿದ್ದನೋ ಅಥವಾ ಸಾದಲಿಯ ರಾಜ್ಯವನ್ನಾಳುತ್ತಿದ್ದನೋ ಎಂಬುದು ತಿಳಿದುಬರುವುದಿಲ್ಲ.

ಮಲ್ಲಣನು ದೇವರಸರ ಮಗ ಹಾಗೂ ಗೋಪೀನಾಥಯ್ಯನ ಶಿಷ್ಯ ತನ್ನ ಗುರುವಿನ ಹೆಸರು ಹೇಳುವುದು ಹಾಗೂ ಶ್ರೀಮಾಧವದಾಸ ಎಂಬ ಅಂಕಿತವನ್ನು ಬಳಸಿರುವುದು ಆತ ಅತಿ ಹೆಚ್ಚಿನ ಧಾರ್ಮಿಕ ಶ್ರದ್ಧೆ ಹೊಂದಿದ್ದವನಾಗಿದ್ದ ಎಂಬುದನ್ನು ಸೂಚಿಸುತ್ತದೆ.

(ಮುಂದುವರೆಯುತ್ತದೆ)









1) ತಿರುಮಲೆಯಲ್ಲಿ 02-01-2023 ರಂದು ಸ್ವಾಮಿಯವರ ವೈಕುಂಠ ದ್ವಾರ ದರ್ಶನಕ್ಕೆ ಹೋಗುತ್ತಿರುವ ಭಕ್ತರು.

2) 02-01-2023 ರಂದು ವೈಕುಂಠ ಏಕಾದಶಿ ಸಂದರ್ಭವಾಗಿ ವಿವಿಧ ಪುಷ್ಪಾಲಂಕಾರದಲ್ಲಿ ಶ್ರೀಪದ್ಮಾವತಿ ಅಮ್ಮನವರೊಂದಿಗೆ ಸ್ವಾಮಿಯವರು.

3) 02-01-2023 ರಂದು ವೈಕುಂಠ ಏಕಾದಶಿ ಸಂದರ್ಭವಾಗಿ ಸ್ವಾಮಿಯವರ ಸ್ವರ್ಣರಥೋತ್ಸವದ ದೃಶ್ಯಮಾಲಿಕೆ.

4) 03-01-2023 ರಂದು ಶ್ರೀಸ್ವಾಮಿ ತೀರ್ಥ ಮುಕ್ಕೋಟಿ ಸಂದರ್ಭದಲ್ಲಿ ನಡೆದ ಚಕ್ರತ್ತಾಳ್ವಾರ್ ಪೂಜಾಕೈಂಕರ್ಯ ದೃಶ್ಯಮಾಲಿಕೆ.



# ದ್ವಾದಶಜ್ಯೋತಿರ್ಲಿಂಗಗಳು



## 1) ಸೋಮನಾಥಲಿಂಗೇಶ್ವರ ಸ್ವಾಮಿ

ಚಂದ್ರನು ಸೌರಾಷ್ಟ್ರದ ಪ್ರಭಾಸತೀರ್ಥದಲ್ಲಿ ಪಾರ್ಥಿವ ಲಿಂಗವನ್ನು ಪ್ರತಿಷ್ಠಾಪಿಸಿ,ಮೃತ್ಯುಂಜಯ ಮಹಾಮಂತ್ರವನ್ನು ಪಠಿಸಿ ಕುಷ್ಠರೋಗದಿಂದ ಮುಕ್ತನಾದನು.ಆ ಚಂದ್ರನ ಅಪೇಕ್ಷೆಯಿಂದ ಇಲ್ಲಿ ಸೋಮನಾಥೇಶ್ವರ ಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.



## 2) ಶ್ರೀಶೈಲಮಲ್ಲಿಕಾರ್ಜುನಲಿಂಗೇಶ್ವರ ಸ್ವಾಮಿ

ಚಂದ್ರಾವತಿ ಎಂಬ ಕನ್ಯೆಯು ಶ್ರೀಶೈಲದಲ್ಲಿರುವ ಜ್ಯೋತಿರ್ಲಿಂಗಕ್ಕೆ ಮಲ್ಲಿಗೆ ಹೂಮಾಲೆಯನ್ನು ಸಮರ್ಪಿಸಿದಾಗ, ಭಗವಂತ ಅವು ಎಂದಿಗೂ ಒಣಗದಂತೆ ಅನುಗ್ರಹಿಸಿದನು.ಹೀಗೆ ಶ್ರೀಶೈಲಮಲ್ಲಿಕಾರ್ಜುನ ಸ್ವಾಮಿಯು ಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.



## 3) ಮಹಾಕಾಲಲಿಂಗೇಶ್ವರ ಸ್ವಾಮಿ

ಅವಂತಿಕಾ ಪಟ್ಟಣದಲ್ಲಿ ವೇದಪ್ರಿಯ ಎಂಬ ಭಕ್ತನು ದೂಷಣನೆಂಬ ರಾಕ್ಷಸನಿಂದ ರಕ್ಷಣೆ ಪಡೆಯಲು ತನ್ನ ಮನೆಯಲ್ಲಿ ಪಾರ್ಥಿವ ಲಿಂಗವನ್ನು ಪ್ರತಿಷ್ಠಿಸಿ ಪ್ರಾರ್ಥಿಸಿದನು. ಸ್ವಾಮಿಯು ಪ್ರತ್ಯಕ್ಷನಾಗಿ ಆತನ ಇಚ್ಛೆಯಂತೆ ಅಲ್ಲಿಯೇ ಮಹಾಕಾಳೇಶ್ವರ ಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.



## 4) ಓಂಕಾರಲಿಂಗೇಶ್ವರ ಸ್ವಾಮಿ

ಪರ್ವತ ರಾಜನಾದ ವಿಂಧ್ಯನು ತನ್ನ ಶಿಖರದ ಮೇಲೆ ಓಂಕಾರ ಯಂತ್ರವನ್ನು ಮತ್ತು ಮಧ್ಯದಲ್ಲಿ ಪಾರ್ಥಿವಲಿಂಗವನ್ನು ಪ್ರತಿಷ್ಠಾಪಿಸಿ ಪ್ರಾರ್ಥಿಸಿದನು. ಆಗ ಸ್ವಾಮಿ ಪ್ರತ್ಯಕ್ಷವಾಗಿ ಆ ಎರಡನ್ನೂ ಸಂಯೋಜಿಸಿದಾಗ ಓಂಕಾರೇಶ್ವರ ಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.



## 5) ವೈದ್ಯನಾಥಲಿಂಗೇಶ್ವರ ಸ್ವಾಮಿ

ರಾವಣಾಸುರನು ತನ್ನ ತಾಯಿ ಲಿಂಗವನ್ನು ಪೂಜಿಸುವ ಸಲುವಾಗಿ ಕೈಲಾಸಕ್ಕೆ ಹೋಗಿ ಶಿವನನ್ನು ಕೇಳಿ ಆತ್ಮಲಿಂಗವನ್ನು ತಂದು ದರ್ಶಿಸಿ ಮಾನವರು ದೀರ್ಘ ವ್ಯಾಧಿಗಳ ನಿವಾರಣೆಗೆ ಇಲ್ಲಿ ವೈದ್ಯನಾಥ ಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.



## 6) ಭೀಮಾಶಂಕರ ಲಿಂಗೇಶ್ವರ ಸ್ವಾಮಿ

ಸಹ್ಯಾದ್ರಿ ಪರ್ವತಗಳಲ್ಲಿ ಕರ್ಕಟಿ ಮತ್ತು ವಿರಾಧು ಎಂಬ ರಾಕ್ಷಸರ ಮಗ ಭೀಮನು.ಈ ರಾಕ್ಷಸರಿಂದ ಕಾಪಾಡು ಎಂದು ಸುದಕ್ಷಿಣನೆಂಬ ರಾಜನು ಪಾರ್ಥಿವಲಿಂಗವನ್ನು ಪ್ರತಿಷ್ಠಾಪಿಸಿ ಪ್ರಾರ್ಥಿಸಿದನು ಆಗ ಸ್ವಾಮಿ ಪ್ರತ್ಯಕ್ಷನಾಗಿ ಭೀಮನನ್ನು ಸಂಹರಿಸಿ ಭೀಮೇಶ್ವರಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.

# ದ್ವಾದಶಜ್ಯೋತಿರ್ಲಿಂಗಗಳು





## 7) ರಾಮಲಿಂಗೇಶ್ವರ ಸ್ವಾಮಿ

ಶ್ರೀರಾಮನು,ರಾವಣನ ವಧೆಯ ಸಮಯದಲ್ಲಿ ಬ್ರಹ್ಮ ಹತ್ಯಾದೋಷ ನಿವಾರಣೆಗೆ ಶಿವಲಿಂಗವನ್ನು ಪೂಜಿಸಲು ಆಂಜನೇಯನನ್ನು ಕೈಲಾಸಕ್ಕೆ ಕಳುಹಿಸಿದನು. ಆದರೆ ಹಿಂತಿರುಗಿ ಬರಲಿಲ್ಲವೆಂದು ತಾನೇ ಸ್ವತಃ ಸೈಕತಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಿದನು.ಆ ಲಿಂಗವೇ ರಾಮಲಿಂಗೇಶ್ವರ ಜ್ಯೋತಿರ್ಲಿಂಗವೆಂದು ಪ್ರಸಿದ್ಧಿಯಾಯಿತು.



## 8) ನಾಗಲಿಂಗೇಶ್ವರ ಸ್ವಾಮಿ

ದಾರುಕುಡು, ದಾರುಕ ರಾಕ್ಷಸ ದಂಪತಿಗಳನ್ನು ತಡೆಯಲು, ಸುಪ್ರಿಯನು ರಾಕ್ಷಸರಿಂದ ಬಂಧಿಗಳಾಗಿದ್ದವರ ಬಳಿ ಶಿವನಾಮವನ್ನು ಜಪಿಸುವಂತೆ ಮಾಡುತ್ತಾನೆ. ಅಲ್ಲಿಗೆ ನಾಗ ಸರ್ಪ ಪ್ರವೇಶಿಸಿ ಆ ರಾಕ್ಷಸರನ್ನು ಸಂಹರಿಸಿತು. ಆ ಭಕ್ತನ ಅಪೇಕ್ಷೆಯಂತೆ ಆ ಸರ್ಪದ ತಲೆಯ ಮೇಲಿರುವ ಮಣಿಯೇ ನಾಗೇಶ್ವರಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.



## 9) ಕಾಶಿವಿಶ್ವೇಶ್ವರಲಿಂಗೇಶ್ವರ ಸ್ವಾಮಿ

ಕಾಶಿಯಲ್ಲಿ, ಬ್ರಹ್ಮ ವಿಷ್ಣುವು ಶಿವನನ್ನು ಇಲ್ಲಿ ಶಾಶ್ವತವಾಗಿ ನೆಲೆಸಿ ಸೃಷ್ಟಿಯನ್ನು ಕಾಪಾಡಬೇಕೆಂದು ಪ್ರಾರ್ಥಿಸಿದನು.ಆಗ ಕಾಶಿವಿಶ್ವೇಶ್ವರಜ್ಯೋತಿರ್ಲಿಂಗವಾಗಿ ಆವಿರ್ಭವಿಸಿ ಪ್ರಸಿದ್ಧನಾದನು.



## 10) ತ್ರ್ಯಂಬಕಲಿಂಗೇಶ್ವರ ಸ್ವಾಮಿ

ಬ್ರಹ್ಮಗಿರಿಯಲ್ಲಿ ತಪಸ್ಸು ಮಾಡುತ್ತಿರುವ ಗೌತಮನು ಗೋವು ಮತ್ತು ಕರುಗಳ ಸಾವಿನ ಬಗ್ಗೆ ದುಃಖಿಸುತ್ತಾ ಶಿವನನ್ನು ಕುರಿತು ತಪಸ್ಸು ಮಾಡಿದನು.ಶಿವನು ಪ್ರತ್ಯಕ್ಷವಾಗಿ ಆತನ ಪ್ರಾರ್ಥನೆಯ ಮೇರೆಗೆ ತ್ರ್ಯಂಬಕೇಶ್ವರಜ್ಯೋತಿರ್ಲಿಂಗವಾಗಿ ಪ್ರಸಿದ್ಧನಾದನು.



## 11) ಕೇದಾರಲಿಂಗೇಶ್ವರ ಸ್ವಾಮಿ

ಬದರಿಕಾವನದಲ್ಲಿ ನರನಾರಾಯಣರೆಂಬ ಮಹರ್ಷಿಗಳು ಕೇದಾರ ಕ್ಷೇತ್ರದಲ್ಲಿ ಪಾರ್ಥಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಿದಾಗ ಆ ಸ್ವಾಮಿ ಪ್ರತ್ಯಕ್ಷವಾಗಿ ಭಕ್ತರಿಗೆ ಕೈವಲ್ಯವನ್ನು ಅನುಗ್ರಹಿಬೇಕೆಂದು ಬೇಡಿದಾಗ ಅವರ ಕೋರಿಕೆಯ ಮೇರೆಗೆ ಕೇದಾರೇಶ್ವರ ಜ್ಯೋತಿರ್ಲಿಂಗವೆಂದು ಪ್ರಸಿದ್ಧನಾದನು.



## 12. ಘೃಷ್ಣಲಿಂಗೇಶ್ವರ ಸ್ವಾಮಿ

ವೇದಗಿರಿ ಎಂಬ ಊರಿನಲ್ಲಿ ಘೃಷ್ಣನೆಂಬ ಭಕ್ತೆಯ ಸದ್ಗುಣ ಮತ್ತು ಉತ್ತಮ ನಡವಳಿಕೆಯಿಂದ ಆಶೀರ್ವದಿಸಲ್ಪಟ್ಟಳು ಮತ್ತು ಆಕೆಯ ಹೆಸರಿನಲ್ಲಿಯೇ ಘೃಷ್ಣೇಶ್ವರಜ್ಯೋತಿರ್ಲಿಂಗವೆಂದು ಪ್ರಸಿದ್ಧವಾಯಿತು.



ಈ ದ್ವಾದಶಜ್ಯೋತಿರ್ಲಿಂಗಗಳನ್ನು ಜೀವನದಲ್ಲಿ ಒಮ್ಮೆಯಾದರು ದರ್ಶಿಸಿ ಪುನೀತರಾಗೋಣ.



ತಿರುಮಲ ಆಲಯದಲ್ಲಿ 27-12-2022 ರಂದು ನಡೆದ ಕೋಯಿಲ್ ಆಳ್ವಾರ್ ತಿರುಮಂಜನ ಮಹೋತ್ಸವ.
ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ ಸಿಂಘಾಲ್
ಐ.ಎ.ಎಸ್., (ಎಫ್.ಎ.ಸಿ) ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.



22-12-2022 ರಿಂದ 15-01-2023 ರ ವರೆಗೆ ತಿರುಮಲ ಸ್ವಾಮಿಯವರಿಗೆ ನಡೆದ
ಅಧ್ಯಯನೋತ್ಸವ ಕಾರ್ಯಕ್ರಮದ ದೃಶ್ಯಮಾಲಿಕೆ.





02-01-2023 ರಂದು ತಿರುಮಲ ವೈಕುಂಠ ಏಕಾದಶಿ ಸಂದರ್ಭವಾಗಿ ವೈಕುಂಠ ದ್ವಾರ ದರ್ಶನಕ್ಕೆ ಆಗಮಿಸಿದ ಭಕ್ತರು ಮತ್ತು
ಉನ್ನತಾಧಿಕಾರಿಗಳು ಪಾಲ್ಗೊಂಡ ದೃಶ್ಯಮಾಲಿಕೆ.






18-12-2022 ರಂದು ವೈ.ಎಸ್.ಆರ್.ಜಿಲ್ಲೆ ಪ್ರೊದ್ದುಟೂರು, (ಆಂಧ್ರಪ್ರದೇಶ್) ಉನ್ನತ ಪಾಠಶಾಲೆಯ ಮೈದಾನದಲ್ಲಿ
ತಿ.ತಿ.ದೇ., ಯವರ ನೇತೃತ್ವದಲ್ಲಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವದ ದೃಶ್ಯಮಾಲಿಕೆ.





18-12-2022 ರಂದು ತಿರುಮಲ ಆಲಯದಲ್ಲಿ ನಡೆದ ವಿಶ್ವಶಾಂತಿ ಮಹಾಯಜ್ಞ ಕಾರ್ಯಕ್ರಮದ ದೃಶ್ಯಮಾಲಿಕೆ . ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ
ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು .



# ಉಪನಿಷತ್ತುಗಳು

## ಒಂದು ಸ್ಥೂಲ ಪರಿಚಯ

– ಪಿ.ಜೆ. ಶ್ರೀನಿವಾಸನ್
98453 66813

ಈಶ ಕೇನ ಕಠ ಪ್ರಶ್ನ ಮುಂಡ ಮಾಂಡೂಕ್ಯ ತಿತ್ತಿರಿಃ
ಐತರೇಯಂಚ ಛಾಂದೋಗ್ಯಂ ಬೃಹದಾರಣ್ಯಕಂ ತಥಾ ॥

ಅಖಂಡ ಭೂಮಂಡಲದ ಏಕದೇಶವಾದ ಭರತ ಖಂಡವು ಪುಣ್ಯ ಭೂಮಿಯೆಂದು ಪ್ರಸಿದ್ಧವಾಗಿದೆ. ಇಲ್ಲಿರುವ ಅಪೂರ್ವ ಗ್ರಂಥ ರಾಶಿಗಳಲ್ಲಿ ಮೊದಲ ಸ್ಥಾನ ವೇದಗಳಿಗೆ ಸಲ್ಲುತ್ತದೆ.ವ್ಯಾಸರು ಅವುಗಳನ್ನು ವಿಭಜಿಸಿ ಋಗ್ವೇದ.ಯಜುರ್ವೇದ. ಸಾಮವೇದ ಹಾಗೂ ಅಥರ್ವ ವೇದವೆಂದು ಕರೆದರು. ಈ ನಾಲ್ಕು ವೇದಗಳನ್ನು ಪುನಃ ಮೂರು ವಿಭಾಗಗಳಾಗಿ ವಿಭಜಿಸಿ ಮಂತ್ರ ಬ್ರಾಹ್ಮಣ ಅರಣ್ಯಕಗಳೆಂದು ಗುರುತಿಸಲಾಗಿದೆ. ಇವುಗಳಲ್ಲಿ ಕೊನೆಯದಾದ ಅರಣ್ಯಕಗಳಲ್ಲಿ ಸೇರಿದವುಗಳು ಉಪನಿಷತ್ತುಗಳು,ಇವುಗಳನ್ನು ವೇದಾಂತಗಳೆಂದು ಕರೆಯಲಾಗುವುದು. ಉಪನಿಷತ್ತುಗಳ ಅರ್ಥವನ್ನು ವಿಚಾರ ಮಾಡುವುದಕ್ಕಾಗಿಯೇ ಹೊರಟಿರುವುದರಿಂದ ಬ್ರಹ್ಮ ಸೂತ್ರಗಳು, ಅವುಗಳ ಭಾಷ್ಯಗಳು ಹಾಗೆಯೇ ಉಪನಿಷತ್ತುಗಳನ್ನು ವೇದಾಂತಗಳೆಂದು ಹೇಳಲಾಗುವುದು. ಉಪನಿಷತ್ತುಗಳ ಸಾರಸರ್ವಸ್ವವನ್ನೊಳಗೊಂಡ ಭಗವದ್ಗೀತೆ ಹಾಗೂ ಅದರ ಭಾಷ್ಯಗಳನ್ನು ಸಹ ವೇದಾಂತವೆಂದು ಹೇಳುವರು.

ಅಮೂಲ್ಯವಾದ ಭಾರತೀಯ ಮೌಲ್ಯಗಳ ವಿವೇಚನೆಯನ್ನು ಮಾಡುವಾಗ ವೇದಗಳ ಸ್ಥಾನ ಅತ್ಯುತ್ತಮವಾದುದು ಎಂದು ಎಲ್ಲರಿಗೂ ತಿಳಿದು ಬರುವ ವಿಷಯ. ಆ ವೇದದ ಸಾರ ಉಪನಿಷುತ್ತಗಳಲ್ಲಡಗಿದೆ. ಆ ಉಪನಿಷತ್ತುಗಳು 108 ಅವುಗಳಲ್ಲಿ ಪ್ರಧಾನ 32, ಮುಖ್ಯವಾದವು 10 ಆಚಾರ್ಯ ರಾಮಾನುಜರ ದೃಷ್ಟಿಯಲ್ಲಿ ಈ 10 ರೊಂದಿಗೆ ಸುಬಾಲ,ಶ್ವೇತಾಶ್ವತರ ಹಾಗೂ ಕೌಷೀತಕಿಗಳೂ ಸೇರಿ 13 ಕ್ಕೂ ಪ್ರಾಧಾನ್ಯ ಈ ಮೂರರ ವಾಕ್ಯಗಳನ್ನು ರಾಮಾನುಜರು ವಿಶೇಷವಾಗಿ ಚರ್ಚಿಸಿದ್ದಾರೆ.

ಸಾಮಾನ್ಯವಾಗಿ ಮತಾಚಾರ್ಯರುಗಳು ಪ್ರಸ್ಥಾನ ತ್ರಯಗಳಿಗೆ ಭಾಷ್ಯ ಬರೆದಿದ್ದಾರೆ. ಆದರೆ ರಾಮಾನುಜರು ಸೂತ್ರ ಮತ್ತು ಗೀತೆಗೆ ಮಾತ್ರ ಭಾಷ್ಯ ಬರೆದಿದ್ದಾರೆ. ಉಪನಿಷತ್ತುಗಳಿಗೆ ರಾಮಾನುಜರ ಭಾಷ್ಯವಿಲ್ಲ. ವೇದಾರ್ಥ ಸಂಗ್ರಹದಲ್ಲಿ ಆಚಾರ್ಯರು ಮುಖ್ಯವಾದ ಉಪನಿಷತ್ತುಗಳ ಅರ್ಥವನ್ನು ವಿವೇಚಿಸಿ ಅವುಗಳಲ್ಲಿ ತೋರುವ ಪರಸ್ಪರ ವಿರೋಧವನ್ನು ಪರಿಹರಿಸಿದ್ದಾರೆ. ಇದರಿಂದ ಉಪನಿಷದ್ಭಾಷ್ಯವನ್ನು ರಚಿಸಿದಂತೆಯೇ ಆಯಿತು. ಆದ್ದರಿಂದ ಇವರನ್ನು ಭಾಷ್ಯಕಾರರು ಎಂದು ಹೇಳಲು ಯಾವ ಬಾಧಕವು ಇಲ್ಲ.

ಈ 108 ಉಪನಿಷತ್ತುಗಳು ಯಾವ ವೇದಗಳಿಗೆ ಸೇರಿವೆ, ಅವುಗಳಿಗೆ ಶಾಂತಿ ಪಾಠ ಯಾವುದು ಎಂಬ ವಿಚಾರಗಳು ಇಂತಿವೆ.

ಐತರೇಯ ಕೌಷೀತಕಿ ಮೊದಲಾದ ಋಗ್ವೇದಕ್ಕೆ ಸಂಬಂಧಿಸಿದ 10 ಉಪನಿಷತ್ತುಗಳಿಗೆ 'ವಾಙ್ಮೇಮನಸೀ' ಎಂಬುದು ಶಾಂತಿಪಾಠ, ಶುಕ್ಲ ಯಜುರ್ವೇದಕ್ಕೆ ಸೇರಿದ ಈಶಾವಾಶ್ಯ, ಬೃಹದಾರಣ್ಯಕ ಮೊದಲಾದ 19 ಉಪನಿಷತ್ತುಗಳಿಗೆ ಪೂರ್ಣ ಮದಃ ಎನ್ನುವುದು ಶಾಂತಿಪಾಠ, ತೈತ್ತಿರೀಯ, ಕಠ, ಮೊದಲಾದ ಕೃಷ್ಣ ಯಜುರ್ವೇದದ 32 ಉಪನಿಷತ್ತುಗಳಿಗೆ 'ಸಹನಾವವತು'

ಎಂಬದು ಶಾಂತಿಪಾಠ, ಕೇನಛಾಂದೋಗ್ಯ ಮೊದಲಾದ ಸಾಮ ವೇದಕ್ಕೆ ಸೇರಿದ 16 ಉಪನಿಷತ್ತುಗಳ ಪಠನಕ್ಕೆ ಮೊದಲು ಅಪ್ಯಾಯಂತು ಮಮಾಂಗಾನಿ ಎಂಬ ಶಾಂತಿ ಪಾಠ ಹೇಳುವರು. ಪ್ರಶ್ನೆ ಮುಂಡಕ ಮಾಂಡೋಕ್ಯ ಮೊದಲಾದ ಅಥರ್ವಣ ವೇದದ 31 ಉಪನಿಷತ್ತುಗಳಿಗೆ 'ಭದ್ರಂ ಕರ್ಣೇಭಿಃ' ಎಂಬ ಶಾಂತಿಪಾಠ ಪ್ರಸಿದ್ಧವಾಗಿದೆ.

ಮುಖ್ಯವಾದ 10 ಉಪನಿಷತ್ತುಗಳನ್ನು ಈ ರೀತಿ ವಿಂಗಡಿಸಿ ಅರಿಯಬಹುದಾಗಿದೆ.

**1. ಈಶಾವಾಸ್ಯ ಉಪನಿಷತ್ತು :**

ಇದು ಶುಕ್ಲ ಯಜುರ್ವೇದಕ್ಕೆ ಸಂಬಂಧಿಸಿದ್ದು, ಇದ ರಲ್ಲಿ ಕರ್ಮ, ಉಪಾಸನೆ, ಜ್ಞಾನ ಇವುಗಳ ಸಂಬಂಧವನ್ನು ಸ್ಪಷ್ಟ ಪಡಿಸಿರುತ್ತದೆ.

**2. ಕೇನೋಪನಿಷತ್ತು :**

ಬ್ರಹ್ಮವು ಎಲ್ಲವನ್ನು ಬೆಳಗುವ ಚೈತನ್ಯ ಸ್ವರೂಪವಾದ ನಮ್ಮೆಲ್ಲರ ಆತ್ಮನು ಅದರ ಶಕ್ತಿಯಿಂದಲೇ ಎಲ್ಲವೂ ತನ್ನ ಕೆಲಸ ಮಾಡುತ್ತಿರುವುದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಉಪನಿಷತ್ತಿಗೆ ಪದಭಾಷ್ಯ, ವಾಕ್ಯಭಾಷ್ಯ ಎಂಬ ಎರಡು ಭಾಷ್ಯಗಳಿವೆ.

**3. ಕಾಠಕೋಪನಿಷತ್ತು :**

ಧರ್ಮಾಧರ್ಮಗಳಿಗೂ ಕಾಲತ್ರಯಕ್ಕೂ ಕಾರ್ಯ ಕಾರಣ ಭಾವಕ್ಕೂ ಕಟ್ಟುಬೀಳದ ಬ್ರಹ್ಮವೇ ನಮ್ಮೆಲ್ಲರ ಆತ್ಮ ವೆಂಬುದನ್ನು ತಿಳಿಸುವ ಉಪನಿಷತ್ತಿದು.

**4. ಮುಂಡಕೋಪನಿಷತ್ತು :**

ವೇದೋಕ್ತವಾದ ವಿದ್ಯೆಯನ್ನು ಪರವಿದ್ಯೆ, ಅಪರ ವಿದ್ಯೆಯೆಂದು ಎರಡು ವರ್ಗಗಳಾಗಿ ವಿಂಗಡಿಸಿ ಜಗತ್ಕಾರಣ ವಾದ ಅಕ್ಷರವೆಂಬ ಹೆಸರಿನ ಬ್ರಹ್ಮವನ್ನು ಅರಿತುಕೊಳ್ಳುವ ವಿದ್ಯೆಯೇ ಪರವಿದ್ಯೆ ಎಂದು ಇಲ್ಲಿ ತಿಳಿಸಿದೆ. ಎಲ್ಲವೂ ಬ್ರಹ್ಮ ವೊಂದೇ ಆಗಿರುವುದರಿಂದ ಅದನ್ನು ಅರಿತುಕೊಂಡರೆ ಎಲ್ಲವನ್ನು ಅರಿತಂತೆ ಆಗುವುದೆಂತಲೂ, ಈ ಬ್ರಹ್ಮಜ್ಞಾನ ದಿಂದ ಜೀವನ್ಮುಕ್ತಿ ಲಭಿಸುವುದೆಂತಲೂ ಪ್ರತಿಪಾದಿಸಿದೆ, ಜ್ಞಾನಕ್ಕೆ ಬೇಕಾದ ಸತ್ಯಾದಿ ಸಾಧನಗಳನ್ನು ಪ್ರತಿಪಾದಿಸು ವುದು ಇದರ ವಿಶೇಷ.

**5. ಪ್ರಶ್ನೋಪನಿಷತ್ತು:**

ಮುಂಡಕೋಪನಿಷತ್ತಿನ ವಿಷಯವನ್ನು ಇಲ್ಲಿ ವಿವರಿ ಸಿದೆ. ಮುಂಡಕ-ಪ್ರಶ್ನಗಳ ಸಂಬಂಧವನ್ನು ವಿಶದೀಕರಿಸಿ ಅಕ್ಷ ರಾಖ್ಯ ಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯು, ಮುಕ್ತಾಯ ಉಪಾಸನೆಯಿಂದ ಕ್ರಮ ಮುಕ್ತಿಯೂ ಆಗುವು ದೆಂದು ನಿರೂಪಿಸುವ ಪ್ರಸಂಗದಿಂದ ಈ ಉಪನಿಷತ್ತಿನ ಭಾಷ್ಯದಲ್ಲಿ ಆಚಾರ್ಯರು ಅವಸ್ಥಾತ್ರಯ,ಜ್ಞಾನ ಸ್ವರೂಪ, ಕರ್ತವ್ಯ ಭೋಕ್ತೃತ್ವ ಎಂಬ ಮೂರು ವಿಷಯಗಳನ್ನು ವಿಸ್ತಾರ ವಾಗಿ ಪ್ರಸ್ತಾಪಿಸಿರುತ್ತಾರೆ.

**6. ಮಾಂಡೋಕ್ಯೋಪನಿಷತ್ತು :**

ಎಚ್ಚರ, ಕನಸು,ತಣಿನಿದ್ದೆ ಎಂಬ ಮೂರವಸ್ಥೆಗಳ ಸೋಂಕು ಇಲ್ಲದ ನಿರ್ಮಲವಾಗಿರುವ ನಮ್ಮೆಲ್ಲರ ಆತ್ಮನಾದ ಬ್ರಹ್ಮದ ಸ್ವರೂಪವನ್ನು ಅನುಭವಾನುಸಾರವಾಗಿ ವರ್ಣಿಸಿರು ತ್ತದೆ. ಶ್ರೀಗೌಡಪಾದಾಚಾರ್ಯರು ಬರೆದಿರುವ ನಾಲ್ಕು ಪ್ರಸರಣ ಗಳುಳ್ಳ ಕಾರಿಕೆಗಳು, ಶಂಕರಭಾಷ್ಯ ಸಮೇತ ಈ ಉಪನಿಷತ್ತಿ ಗಿರುವುದೊಂದು ವಿಶೇಷ ವೇದಾಂತಸಾರ ಸಂಗ್ರಹವನ್ನು ಭೌದ್ಧರ ಪ್ರಕ್ರಿಯೆ ವೇದಾಂತ ಪ್ರಕ್ರಿಯೆಗೂ ಇರುವ ತಾರತಮ್ಯ ವನ್ನು ಇದರಲ್ಲಿ ಕಾಣಬಹುದು.

**7. ಐತರೇಯೋಪನಿಷತ್ತು :**

ಪರಮಾತ್ಮನು ಈ ಇಡೀ ಜಗತ್ತನ್ನು ಸೃಷ್ಟಿಸಿ ಅದರೊಳ ಗಿನ ಬೇರೆ ಬೇರೆ ಶರೀರಗಳೊಳಗೆ ಹೊಕ್ಕಿರುವ ಪ್ರಜ್ಞಾನ ರೂಪನು. ಅವನೇ ಜ್ಞಾನದಿಂದ ಸಂಸಾರಿಯಾಗಿ ಕಾಣುತ್ತಿರು ವನು. ಆಪರಮಾತ್ಮನ ನಿಜವಾದ ಸ್ವರೂಪವನ್ನು ನಿರ್ಧರಿಸಿ ಕೊಂಡರೆ ಸದ್ಯೋಮುಕ್ತಿಯಾಗುವುದು ಎಂಬುದನ್ನು ವಿವರಿ ಸುವ ಉಪನಿಷತ್ತದು.

**8. ತೈತ್ತಿರಿಯೋಪನಿಷತ್ತು :**

ಇದರಲ್ಲಿ ಶಿಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ ಎಂಬ ಮೂರು ಭಾಗಗಳಿವೆ. ವೇದಾಂತ ಸಿದ್ಧಾಂತಕ್ಕೆ ಅಡಿಗಲ್ಲಾಗಿರುವ ಅನೇಕ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಿದೆ. ಮುಖ್ಯವಾಗಿ ಕರ್ಮಗಳಿಗೂ ಜ್ಞಾನಕ್ಕೂ ಇರುವ ಸಂಬಂಧ,ಪರಬ್ರಹ್ಮ ಪ್ರಾಪ್ತಿಗೂ, ಅಪರಬ್ರಹ್ಮ ಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿ ಶೇಷನಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದು

ಕೊಂಡರೆ ಪರಮ ಮುಕ್ತಿ ಲಭಿಸುವುದು ಎಂಬುದರ ರಹಸ್ಯ, ದ್ವೈತವೂ ಜೀವನ ಸಂಸಾರಿತ್ವವೂ ಆದ್ಯಕವೆಂಬದು ವಿದ್ಯಾ ವಿದ್ಯೆಗಳು ಆತ್ಮನ ಧರ್ಮವಲ್ಲ ಎಂಬುದೇ ಮುಂತಾದ ವಿಷಯಗಳನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

### 9. ಛಾಂದೋಗ್ಯೋಪನಿಷತ್ತು : -

ಈ ಉಪನಿಷತ್ತು ಸಾಮವೇದಕ್ಕೆ ಸೇರಿದ್ದು, ಇದರಲ್ಲಿ ಮೊದಲನೆಯ 5 ಅಧ್ಯಾಯಗಳಲ್ಲಿ ಕ್ರಮವಾಗಿ ಉಪಾಸನೆ ಗಳ ವಿವರವನ್ನು ವಿಸ್ತಾರವಾಗಿ ತಿಳಿಸಿ ಅನಂತರ 6 ನೇ ಅಧ್ಯಾಯದಿಂದ ಆತ್ಮ ಜ್ಞಾನವನ್ನು ಪ್ರತಿಪಾದಿಸಿದೆ. ಈ ಉಪನಿಷತ್ತಿನಲ್ಲಿರುವ ವಿಷಯ ವಾಕ್ಯಗಳು ಬ್ರಹ್ಮ ಸೂಕ್ತ ಭಾಷ್ಯದಲ್ಲಿ ವಿಚಾರಕ್ಕೆ ಬಹಳವಾಗಿ ತೆಗೆದುಕೊಳ್ಳಲ್ಪಟ್ಟಿದೆ. 'ತತ್ವಮಸಿ' ಮಹಾವಾಕ್ಯದ ವಿಸ್ತಾರವಾದ ವಿವರ ಇದ ರಲ್ಲಡಕವಾಗಿದೆ.

### 10. ಬೃಹದಾರಣ್ಯಕೋಪನಿಷತ್ತು :

ಶುಕ್ಲ ಯಜುರ್ವೇದಕ್ಕೆ ಸೇರಿರುವ ಈ ಉಪನಿಷತ್ತಿಗೆ ಆಚಾರ್ಯರು ವಿಸ್ತಾರವಾಗಿ ಭಾಷ್ಯವನ್ನು ಬರೆದಿದ್ದಾರೆ. ಮಧು ಕಾಂಡವೆಂದು ಪ್ರಸಿದ್ಧವಾಗಿರುವ ಇದರ ಮೊದಲನೆಯ ಎರಡು ಅಧ್ಯಾಯಗಳಲ್ಲಿ ಆಗಮ ಪ್ರಧಾನವಾಗಿ ತತ್ವವನ್ನು ತಿಳಿಸಿರುತ್ತದೆ. ಮೂರು ನಾಲ್ಕು ಅಧ್ಯಾಯಗಳು ಮುನಿ ಕಾಂಡವೆಂಬ ಹೆಸರಿನಿಂದ ತರ್ಕ ಪ್ರಧಾನವಾಗಿದ್ದ ಆಗಮ ಉಪನಿಷತ್ತುಗಳಿಂದ ತತ್ವವನ್ನು ವಿವರಿಸಿರುತ್ತದೆ. ಕೊನೆಯ ಎರಡು ಅಧ್ಯಾಯಗಳು ಖಿಲಕಾಂಡವೆಂದು ಪ್ರಸಿದ್ಧವಾಗಿದ್ದು




ಉಪಾಸನಾ ಭಾಗವನ್ನೊಳಗೊಂಡಿದೆ.ಆತ್ಮ ಸ್ವರೂಪವನ್ನು ಅವಸ್ಥಾತ್ರಯ ಪರೀಕ್ಷೆಯಿಂದ ಗೊತ್ತುಪಡಿಸುವ ವಿಚಾರ ಸರ ಣಿಯು ಇದರಲ್ಲಿ ಬಹಳ ಸುಂದರವಾಗಿದೆ. ಯಾಜ್ಞವಲ್ಕ್ಯ-ಮೈತ್ರೇಯಿ ಸಂವಾದ,ಜನಕ ಯಾಜ್ಞವಲ್ಕ್ಯ ಸಂವಾದ ಮುಂತಾದ ಕಥಾ ರೂಪಗಳಿಂದ ತತ್ವವನ್ನು ಹೃದ್ರಯಂಗಮ ವಾಗಿ ಪ್ರತಿಪಾದಿಸುವ ಉಪನಿಷತ್ತಿದು. ಆಚಾರ್ಯರು ತಮ್ಮ ಭಾಷ್ಯದಲ್ಲಿ ಅನೇಕ ವಿಷಯಗಳ ವಿಸ್ತಾರವಾದ ಚರ್ಚೆಮಾಡಿ ಈ ಉಪನಿಷತ್ತಿನ ಸ್ವರೂಪವನ್ನು ಹೊರಗೆಡವಿರುತ್ತಾರೆ.



## ತಿರುಮಲೆಯಲ್ಲಿ ಪ್ಲಾಸ್ಟಿಕ್ ನಿಷೇಧ

ತಿರುಮಲೆಯ ಪರ್ಯಾವರಣ ಪರಿರಕ್ಷಣೆಯ ದೃಷ್ಟ್ಯಾ, ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಗೊಳಿಸಲಾಗಿದೆ. ಹಾಗಾಗಿ ಕೆಳಗಿನ ಹಲವು ಸೂಚನೆಗಳನ್ನು ತಪ್ಪದೆ ಪಾಲಿಸಬೇಕೆಂದು ಸೂಚಿಸಲಾಗಿದೆ. ಪ್ಲಾಸ್ಟಿಕ್ ವಸ್ತುಗಳನ್ನು ಮುಖ್ಯವಾಗಿ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು (ಪಾಲಿಥಿನ್ ಚೀಲಗಳು) ಬಿಸಾಡುವಾಗ ಅವುಗಳಿಗಾಗಿ ಅಲ್ಲಲ್ಲಿ ಇಡಲಾಗಿರುವ ಕಸದ ಬುಟ್ಟಿಗಳಲ್ಲಿ ಮಾತ್ರವೇ ಹಾಕಬೇಕು. ಎಲ್ಲೆಂದರಲ್ಲಿ ಬಿಸಾಡ ಬಾರದು.ಪಾದಚಾರಿಗಳು ಮೆಟ್ಟಿಲದಾರಿಯಲ್ಲಿ ಬರುವಾಗ ಪ್ಲಾಸ್ಟಿಕ್ ನೀರಿನ ಬಾಟಲುಗಳನ್ನು, ಪ್ಲಾಸ್ಟಿಕ್ ಬ್ಯಾಗ್‌ಗಳನ್ನು, ಪ್ಲಾಸ್ಟಿಕ್‌ನ ವ್ಯರ್ಥ ಪದಾರ್ಥಗಳನ್ನು ಅವುಗಳಿಗಾಗಿ ಅಲ್ಲಲ್ಲಿ ಇಟ್ಟಿರುವ ಕಸದ ಬುಟ್ಟಿಗಳಲ್ಲಿಯೇ ಹಾಕಬೇಕು. ದಾರಿಯಲ್ಲಿ ಬಿಸಾಡಬಾರದು. ತಿರುಮಲೆಯಲ್ಲಿ ವ್ಯಾಪಾರಿಗಳು, ಹೋಟೆಲುಗಳವರು, ಪುರಪ್ರಜೆಗಳು, ನಲವತ್ತೇಳು ಮೈಕ್ರಾನುಗಳಿಗಿಂತ ಕಡಿಮೆ ಗೇಜಿನ ಪ್ಲಾಸ್ಟಿಕ್ ವಸ್ತುಗಳನ್ನು, ಚೀಲಗಳನ್ನು, ಪ್ಲಾಸ್ಟಿಕ್ ಪೇಪರನ್ನು ಬಳಸಬಾರದು. ಟೀ-ಕಾಫಿಗಳಿಗಾಗಿ ಪ್ಲಾಸ್ಟಿಕ್ ಕಪ್‌ಗಳನ್ನು ಬಳಸಬಾರದು. ಮುಖ್ಯವಾಗಿ ಹೋಟೆಲಿನ ಯಜಮಾನರುಗಳು ಅಂತಹ ವಸ್ತುಗಳನ್ನು ಬಳಸಿದರೆ ಶಿಕ್ಷಾರ್ಹರಾಗುತ್ತಾರೆ.ತಿರುಮಲೆಯಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಲ್ಲಿಸಿರಿ. ತಿರುಮಲೆಯ ಪಾವಿತ್ರ್ಯವನ್ನೂ, ಪರಿಶುಭ್ರತೆಯನ್ನೂ ಕಾಪಾಡಿರಿ.



# ಆರೋಗ್ಯವನ್ನು ಸಂರಕ್ಷಿಸುವ ದಿವ್ಯ ಮರ ಔದುಂಬರ



**ತೆಲುಗು ಮೂಲ : ಡಾ॥ ಸಿ. ಮಧುಸೂದನಶರ್ಮ**
**90007 61390**
**ಅನುವಾದ :- ಶ್ರೀಮತಿ.**




ಭಾರತೀಯ ಸಂಸ್ಕೃತಿ ಸಂಪ್ರದಾಯಗಳಲ್ಲಿ ವಿಶೇಷತೆಯನ್ನು ಪಡೆದುಕೊಂಡ ಪವಿತ್ರವಾದ ಮಹಾವೃಕ್ಷ ಔದುಂಬರ. ಇದನ್ನು ಹಲವು ಪ್ರಾಂತ್ಯಗಳಲ್ಲಿ ಅತ್ತಿಮರ, ಬೊಡ್ಡ ಮರ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ.

ತಾವ್ರ ಅಥವಾ ರಾಗಿಯಂಥ ಬಣ್ಣವಿರುವ ಹಣ್ಣುಗಳಿರುವುದರಿಂದ (ರಾಗಿಗೆ ಔದುಂಬರ ಎಂಬ ಹೆಸರಿದೆ) ಈ ವೃಕ್ಷವನ್ನು 'ಔದುಂಬರ 'ಎಂದೂ ದತ್ತಾತ್ರೇಯ ಮುನಿ ಈ ವೃಕ್ಷದಲ್ಲಿ ವಾಸವಿರುವುದರಿಂದ ದತ್ತ ವೃಕ್ಷಮುನಿ ಎಂದೂ, ಯಜ್ಞಾದಿ ಪವಿತ್ರ ಕರ್ಮಗಳಲ್ಲಿ ಉಪಯೋಗಿಸಲ್ಪಡುವುದರಿಂದ ಯಜ್ಞಾಂಗ ಎಂದೂ, ಹಾಲಿನಂಥ ದ್ರವ ಹೊಂದಿರುವುದರಿಂದ ಕ್ಷೀರವೃಕ್ಷಮುನಿ ಎಂದೂ, ಇದಕ್ಕೆ ಸಂಸ್ಕೃತದಲ್ಲಿ ಹಲವಾರು ಹೆಸರುಗಳಿವೆ.

"ಮಾರೇಸಿ"ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಈ ವೃಕ್ಷದ ಶಾಸ್ತ್ರೀಯ ನಾಮಧೇಯ "ಫೈಕಸ್ ಗ್ಲೋಮೆರೇಟಾ . ಆಂಗ್ಲ ಭಾಷೆಯಲ್ಲಿ ಕ್ಲಸ್ಟರ್‌ಫಿಗ್ ಎಂದೂ, ಹಿಂದಿಯಲ್ಲಿ ಗುಲಾರ್ ಎಂದೂ ಇದನ್ನು ಕರೆಯುತ್ತಾರೆ.

ಶ್ರೀಮಹಾವಿಷ್ಣುವೂ ನರಸಿಂಹಾವತಾರದಲ್ಲಿ ಹಿರಣ್ಯಕಶಿಪುವಿನ ಕರಳನ್ನು ಬಗೆದಾಗ ರಕ್ತವು ಸ್ವಾಮಿಯ ಕೈಗೆ, ಬೆರಳುಗಳಿಗೆ, ಉಗುರುಗಳಿಗೆ ಅಂಟಿಕೊಂಡಾಗ ತಾಯಿಯಾದ ಮಹಾಲಕ್ಷ್ಮೀದೇವಿಯು ಅತ್ತಿಮರದ ಎಲೆಯ ರಸವನ್ನು ಹಿಂಡಿದುದರಿಂದ ರಕ್ತದಲ್ಲಿದ್ದ ವಿಷವು ಶಮನಗೊಂಡಿದೆಯಾದ್ದರಿಂದ ಸ್ವಾಮಿಗೆ ಅತ್ತಿಮರವೆಂದರೆ ಪ್ರೀತಿಪಾತ್ರವಾದುದು, ಈ ಗಿಡವನ್ನು ಪೂಜಿಸುವವರಿಗೆ ಸಕಲೈಶ್ವರ್ಯಗಳು ಸಿದ್ಧಿಸುತ್ತವೆ. ಆರೋಗ್ಯ ಭಾಗ್ಯವುಂಟಾಗುತ್ತದೆಂದು ಜನರ ನಂಬಿಕೆ.

**ಆಹಾರೌಷಧ ಗುಣಗಳು ಔದುಂಬರ ಮರದಲ್ಲಿ ಹೇರಳ.**

**ಅಧಿಕ ಋತುಸ್ರಾವ ತಗ್ಗಲು : -**

ಅತ್ತಿಯ ಹಣ್ಣುಗಳನ್ನು ತುಂಡರಿಸಿ ಒಣಗಿಸಿ ಮಾಡಿದ ಪುಡಿ 100 ಗ್ರಾಂ, ಸ್ಫಟಿಕ ಬೆಲ್ಲ 100 ಗ್ರಾಂ,ಜೇನು 50 ಮೀ.ಲೀ. ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ ಒಂದು ಟೀ ಸ್ಪೂನ್ ಚಪ್ಪರಿಸಿ ನುಂಗಬೇಕು. ಈ ಔಷಧವನ್ನು ಹೀಗೆ ಸೇವಿಸುವುದರಿಂದ ಸ್ತ್ರೀಯರಲ್ಲಿ ಬಿಳಿಸೆರಗು, ಪುರುಷರಲ್ಲಿ ಶೀಘ್ರ ಸ್ಖಲನದಂತಹ ಸಮಸ್ಯೆಗಳು ತಗ್ಗುತ್ತವೆ. 20 ಮಿ.ಲೀ. ಅತ್ತಿ ಹಣ್ಣಿನ ರಸದಲ್ಲಿ ಒಂದು ಟೀ ಸ್ಪೂನ್ ಜೇನು ಕಲಿಸಿ ಸೇವಿಸುವುದರಿಂದ ಒಳ್ಳೆಯ ಫಲಿತಾಂಶ ಸಿಗುತ್ತದೆ.

**ಅತಿ ಉಷ್ಣ ಶಮನಕ್ಕೆ:**

100ಗ್ರಾಂ ಅತ್ತಿ ಹಣ್ಣಿನ ಪುಡಿಯಲ್ಲಿ 100 ಗ್ರಾಂ ಸ್ಫಟಿಕ ಬೆಲ್ಲದ ಪುಡಿ, 50 ಗ್ರಾಂ ಜೀರಿಗೆ ಪುಡಿ ಕಲಿಸಿಟ್ಟುಕೊಂಡು ಬೆಳಗ್ಗೆ ಸಾಯಂಕಾಲ ಬಾರಿಯೊಂದಕ್ಕೆ ಅರ್ಧ ಟೀ ಸ್ಪೂನ್ ಪುಡಿಯನ್ನು 100 ಮಿ.ಲೀ. ಬಿಸಿ ಹಾಲಲ್ಲಿ ಕಲಿಸಿ ಸೇವಿಸುತ್ತಿದ್ದರೆ ಅಧಿಕ ಉಷ್ಣ ಶಮನಗೊಂಡು ಕೈಕಾಲು - ಕಣ್ಣು ಉರಿತ, ಹೊಟ್ಟೆಯಲ್ಲಿ ಉರಿ, ಮಲಮೂತ್ರ ವಿಸರ್ಜನೆಯ ಸಮಯದಲ್ಲಿ ಉರಿಯಂತ ಲಕ್ಷಣಗಳು ಶೀಘ್ರವಾಗಿ ಕಡಿಮೆಯಾಗುತ್ತವೆ.

**ಬಾಯಿಪೊಕ್ಕಿಗೆ :**

ಅತ್ತಿಮರದ ತೊಗಟೆಯನ್ನು ಸ್ವಲ್ಪ ನೀರಿನಲ್ಲಿ ಹಾಕಿ ಕುಟ್ಟಿ ತೆಗೆದ ರಸವನ್ನು ಬಾರಿಯೊಂದಕ್ಕೆ 20-30 ಮಿ.ಲೀ. ನಷ್ಟು ಬಾಯಲ್ಲಿ ಹಾಕಿ ಮುಕ್ಕಳಿ ಸುತ್ತಿದ್ದರೆ ಬಾಯಿ ಹುಣ್ಣು, ಬಾವು ನಾಲಿಗೆಯ ಉರಿತ, ಬಾಯಲ್ಲಿ ಉರಿಯಾಗಿರುವುದು ಅಂತಹ ಸಮಸ್ಯೆಗಳು ತಗುತ್ತದೆ.

**ವಿವಿಧ ಬಗೆಯ ಸೋಂಕುಗಳಿಗೆ :**

ದಿನವೂ ಮೂರು ಬಾರಿ ಆಹಾರಕ್ಕೆ ಅರ್ಧ ಗಂಟೆ ಮುಂಚೆ ಬಾರಿಯೊಂದಕ್ಕೆ 100 ಮಿ.ಲೀ. ತಾಜಾ ಮಜ್ಜಿಗೆಯಲ್ಲಿ ಅರ್ಧ ಟೀ ಸ್ಪೂನ್ ಅತ್ತಿ ಮರದ ತೊಗಟೆಯ ಚೂರ್ಣವನ್ನು ಕಲಿಸಿ ಕುಡಿ ಯುತ್ತಿದ್ದರೆ ರಕ್ತಹೀನತೆ ನೀರಿನ ಸೋಂಕುಗಳು ಕಡಿಮೆಯಾಗುತ್ತವೆ.

**ಪ್ರಾಥಮಿಕ ಹಂತದ ಮಧುಮೇಹಕ್ಕೆ (ಷುಗರ್) ನಿಯಂತ್ರಣಕ್ಕೆ:**

ದಿನವೂ ಮೂರು ಬಾರಿ, ಬಾರಿಯೊಂದಕ್ಕೆ 15 ಮಿ.ಲೀ. ಹಾಗಲಕಾಯಿಯ ರಸದಲ್ಲಿ ಒಂದೆ ರಡು ಗ್ರಾಂ ಅತ್ತಿ ತೊಗಟೆಯ ಚೂರ್ಣ ಕಲಿಸಿ ಸೇವಿಸುತ್ತಿದ್ದರೆ ಉಪಯೋಗಕಾರಿಯಾಗುತ್ತದೆ.

**ಅಧಿಕ ಹಸಿವು ತಗ್ಗಲು:**

ದಿನವೂ ಬೆಳಗ್ಗೆ, ಸಾಯಂಕಾಲ ಬಾರಿ ಯೊಂದಕ್ಕೆ 200 ಮಿ.ಲೀ. ಹಾಲಿನಲ್ಲಿ ಅರ್ಧ ಟೀಸ್ಪೂನ್ ಅತ್ತಿ ತೊಗಟೆಯ ಚೂರ್ಣ ಹಾಕಿ 100 ಮಿ.ಲೀ.ಹಾಲು ಮಿಗುಲುವಂತೆ ಮರಳಿಸಿ, ಕೆಳಗಿಳಿಸಿ, ಬಿಸಿಯಾರಿದ ನಂತರ ಶೋಧಿಸಿ ಕುಡಿ ಯುತ್ತಿದ್ದರೆ ಅಧಿಕ ಹಸಿವೆಯಾಗುವುದು, ಭಸ್ಮ ಕಾಗ್ನಿ ಎಂಬ ರೋಗದಿಂದ ಉತ್ತಮ ಮುಕ್ತಿ ದೊರೆ ಯುತ್ತದೆ.

**ಬಾಯಿ - ಮೂಗು - ಮಲಮೂತ್ರ ರಂಧ್ರಗಳಿಂದ ರಕ್ತ ಸ್ರಾವವಾಗುತ್ತಿದ್ದರೆ :**

ದಿನವೂ 2 ಬಾರಿ,ಬಾರಿಯೊಂದಕ್ಕೆ ಒಂದು ಅತ್ತಿ ಮರದ ಎಲೆಯನ್ನು ಕುಟ್ಟಿ 100 ಮಿ.ಲೀ. ಅಕ್ಕಿ ತೊಳೆದ ನೀರಿನಿಂದ ಚೆನ್ನಾಗಿ ನುರಿದು ಶೋಧಿಸಿ ಒಂದು ಟೀ ಸ್ಪೂನ್ ಕಲ್ಲುಸಕ್ಕರೆ ಕಲಿಸಿ ಸೇವಿಸುತ್ತಿದ್ದರೆ ಬಹು ಶೀಘ್ರವಾಗಿ ಈ ಸಮಸ್ಯೆಯಿಂದ ಹೊರಬರಬಹುದು.

**ಮೊಣಕಾಲು , ಸೊಂಟನೋವಿಗೆ :**

ಅತ್ತಿ ಹಾಲಿನಲ್ಲಿ ತಕ್ಕಷ್ಟು ಕಾರ್ಜಿಕಾಯಿ ಬೀಜದ ಚೂರ್ಣವನ್ನು ಕಲಿಸಿ ಆಯಾ ಭಾಗದ ಮೇಲೆ ಲೇಪಿಸಿ, 2-3 ಗಂಟೆ ಬಿಟ್ಟು ತೊಳೆದು ಕೊಳ್ಳಬೇಕು. ಅಲ್ಲದೇ ದಿನವೂ ಬೆಳಗ್ಗೆ ಸಾಯಂಕಾಲ ಬಾರಿಯೊಂದಕ್ಕೆ 60 ಮಿ.ಲೀ. ಅತ್ತಿ ಹಣ್ಣಿನ ರಸದಲ್ಲಿ ಅರ್ಧಟೀ ಸ್ಪೂನ್ ಕರ್ಜಿಕಾಯಿ ಬೀಜದ ಚೂರ್ಣವನ್ನು ಕಲಿಸಿ ಸೇವಿಸುತ್ತಿದ್ದರೆ ದೀರ್ಘ ಕಾಲದಿಂದ ಬಾಧಿ ಸುವ ಮೊಣಕಾಲು, ಸೊಂಟ ನೋವುಗಳ ಸಮಸ್ಯೆ ಬಗೆ ಹರಿಯುತ್ತದೆ.

**ಅತಿ ಮೂತ್ರ ಸಮಸ್ಯೆ :**

200 ಮಿ.ಲೀ. ನೀರಿನಲ್ಲಿ 2 ಟೀ ಸ್ಪೂನ್ ಅತ್ತಿ ಮರದ ತೊಗಟೆ ಯನ್ನು ಪುಡಿಮಾಡಿ 100 ಮಿ.ಲೀ. ನೀರು ಮಿಗುಲುವಂತೆ ಸಣ್ಣ ಉರಿಯಲ್ಲಿ ಮರಳಿಸಿ, ಕೆಳಗಿಳಿಸಿ ಶೋಧಿಸಿ ಬಾರಿಯೊಂದಕ್ಕೆ 50 ಮಿ.ಲೀ ರಂತೆ ಎರಡು ಬಾರಿ ಸೇವಿಸುತ್ತಿದ್ದರೆ ಶೀಘ್ರವಾಗಿ ಈ ಬಾಧೆ ಶಮನಗೊಳ್ಳುತ್ತದೆ.

## ಭಕ್ತರಿಗೆ ವಿಜ್ಞಪ್ತಿ

1) ಭಕ್ತರು ತಪ್ಪದೇ ಮಾಸ್ಕನ್ನು ಧರಿಸ ಬೇಕು.

2) ಸಾಮಾಜಿಕ ಅಂತರವನ್ನು ಪಾಲಿಸಬೇಕು.

3) ಸ್ಯಾನಿಟೈಜರ್ ಅನ್ನು ತಪ್ಪದೇ ಉಪಯೋಗಿಸಬೇಕು.

4) ಗುಂಪು ಗುಂಪಾಗಿ ಎಲ್ಲಿಯೂ ನಿಲ್ಲಬಾರದು.

5) ತಪ್ಪದೇ ಕೋವಿಡ್ ಸೂಚನೆಗಳನ್ನು ಪಾಲಿಸಬೇಕು.

ಧಾರಾವಾಹಿ























# ಆಳ್ವಾರುಗಳು ಕಂಡ ತಿರುವೇಂಗಡ

**- ಎಂ. ಆರ್. ನರಸಿಂಹನ್**

ಹಾಗಾದರೆ ತೊಂಡಮಾನನ ಕಾಲದ ಗುಡಿ ಬರಿ ಕಲ್ಪನೆಯೇ? ಕುಲಶೇಖರರ "ಪಡಿಯಾಯ್ ಕಿಡಂದ್ ಪವಳ ವಾಯ್ ಕಾಣ್ಬೇನೇ " ಎನ್ನುವಾಗ ಅಲ್ಲಿದ್ದ ಗುಡಿ, ಗರ್ಭಗುಡಿ, ಹೊಸಲುಗಳು ಕಲ್ಪನೆಯೆ? ಆಳ್ವಾರುಗಳು ತಮ್ಮ ಪಾಶುರಗಳಲ್ಲಿ "ಕೋಯಿಲ್ ಕೊಂಡಾನ್" ಎಂದರೆ ತಿರುಮಲೆಯ ದೇವರು 'ಗುಡಿಯನ್ನು ಹೊಂದಿದ್ದಾನೆ" ಎಂದು ಹೇಳುವ ಮಾತು ಸುಳ್ಳೆ, ಕಲ್ಪನೆಯೆ? ಆಳ್ವಾರುಗಳ ಕಾಲ ೯ ನೇ ಶತಮಾನ ಅಥವಾ ಹತ್ತನೇ ಶತಮಾನದ ಒಳಗೆ ಮುಗಿಯಿತು ಎನ್ನುತ್ತಾರೆ. ಅವರು ಇತ್ತು ಎಂದು ಹೇಳುವ ಕ್ರಿ.ಶ.೮೦೦ ರಿಂದ ೯೦೦ ರೊಳಗಿನ ದೇವಸ್ಥಾನವೇನಾದುವು? ಸೀತಾಪತಿ ಅವರ ೮ ನೇ ಶತಮಾನದ ಗುಡಿ ಕಲ್ಪನೆಯೇ? ಕ್ರಿ.ಶ.೧೦ ನೇ ಶತಮಾನದ ಗುಡಿ ಕಲ್ಪನೆಯೇ? ವಿಜಯನಗರದ ಕಾಲ ಕ್ರಿ.ಶ.೧೫೦೦ಕ್ಕೆ ಬರುತ್ತದೆ. ಹೀಗೆ ವಿಮರ್ಶೆ ಮಾಡುತ್ತಾ ಹೋದರೆ ಎಲ್ಲಾ ಗುಡಿಗಳು ಇದ್ದುವೆ? ಏನಾದುವು? ಎಲ್ಲಿ ಅಡಗಿದುವು? ಎಂಬ ಗೊಂದಲವುಂಟಾಗದೇ ಇರದು.ಏತಕ್ಕೆ ಈ ಗೊಂದಲ, ಸಮಸ್ಯೆ? ತೀರ್ಮಾನವಿಲ್ಲದ ವಿಚಾರ ವ್ಯವಹಾರ ಕಲ್ಪನೆ.

'ಶಿಲಪ್ಪಧಿಕಾರಂ' ನಲ್ಲಿಯೇ ತಿರುಮಲೆಯ ಮೇಲೆ ಜಾತ್ರೆ ನಡೆಯುತ್ತಿದ್ದ ವರ್ಣನೆಯಿದೆ.ಜನ ಸೇರುತ್ತಿದ್ದರು ಎಂದಿದೆ.ಮೊದಲಾಳ್ವಾರ್ ಪಾಶುರಗಳಲ್ಲಿ'ಪಾರಶಿ' (ಮುಕ್ಕೋಟಿ ದ್ವಾದಶಿಯ ) ಜಾತ್ರೆಯ ಸಂಭ್ರಮದ ವಿವರವಿದೆ. ಜನ ಅಧಿಕ ಸಂಖ್ಯೆಯಲ್ಲಿ ಧೂಪದೀಪ ಪುಷ್ಪಾದಿಗಳನ್ನು ತಂದು ಸಮರ್ಪಿಸುತ್ತಿದ್ದ ದೃಶ್ಯವಿದೆ. ವೇದಿಯರ್ ಎಂದರೆ ಶ್ರೋತ್ರಿಯ ಬ್ರಾಹ್ಮಣರು ತಂಡ ತಂಡವಾಗಿ ನೆರೆಯುತ್ತಿದ್ದ ವಿವರವಿದೆ. ಹೆಂಗಸರು ಅಲಂಕಾರ ಮಾಡಿಕೊಂಡು ಜಾತ್ರೆಯಲ್ಲಿ ಅನ್ವಯಿಸುತ್ತಿದ್ದ ವಿಚಾರವಿದೆ. ಇದಕ್ಕಿಂತ ಮಿಗಿಲಾಗಿ ಮೊದಲಾ ಳ್ವಾರ್ ಪಾಶುರಗಳಲ್ಲಿ ಎರಡು ಜಾಗಗಳಲ್ಲಿ ವೇಂಗಡದ ಮೇಲೆ ಊರು ಇದ್ದಿತೆಂದು ನಿಖರವಾಗಿಯೇ ಹೇಳಲ್ಪಟ್ಟಿದೆ. ಪೊಯ್ಗಯ್ ಆಳ್ವಾರ್ ಅವರ ಮೊದಲ್ ತಿರುವಂದಾದಿಯ ೩೭ ನೇ ಪಾಶುರದಲ್ಲಿ "ವೆಣ್‌ಶೆಂಗಮ್ ಊದಿಯ ವಾಯ್‌ಮಾಲ್ ಉಗನ್ದ ಊರ್" ಎಂದೂ,ತಿರುಮಳಿಶೈಆಳ್ವಾರ್ ಅವರ ನಾನ್‌ಮುಗನ್ ತಿರುವಂದಾದಿಯ ೪೭ನೇ ಪಾಶುರದಲ್ಲಿ "ನನ್ ಮಣಿವ ಣ್ಣನೂರ್" ಎಂದೂ ಸ್ಪಷ್ಟಗೊಂಡಿರುವ ಊರ್ ಈ ಜಾತ್ರೆ ಕಾಲದಲ್ಲಿ ಜನರು ನೆರೆಯಲು, ವಸತಿ ಸೌಕರ್ಯಗಳನ್ನು ಹೊಂದಲು ಅನುಕೂಲಕರವಾಗಿದ್ದಿತು ಎಂದಾಗ ಆ ಊರು ಎಷ್ಟು ಸಂಸ್ಕೃತಿಮಯವಾಗಿದ್ದಿತು ಎನ್ನುವ ವಿಚಾರ ತಿಳಿಯುತ್ತದೆ. ಊರು ಎಂದರೆ ಹೋಗಿ ಬರಲು ಮಾರ್ಗವಿಲ್ಲದಿದ್ದರೆ ಹೇಗೆ ? ಇಂತಹ ಸುಸಂಸ್ಕೃತರ ಮಧ್ಯೆ ಸಂಭ್ರಮಗಳ ಮಧ್ಯೆ, ಅದೂ ವೇದಿಯರ್‌ಗಳು ನೆರೆಯುವಾಗ ದೇವರನ್ನು ಮಾತ್ರ ಬಿಸಿಲಿಗೂ ಮಳೆಗೂ ಸಿಲುಕಿಸಿ ಅವನಿಂದ ವರವನ್ನು ಮಾತ್ರ ಪಡೆಯುವ ಕೀಳ್ಮನಸ್ಸು ಅವರಿಗೆ

ಇರಲಾರದೆಂದು ನನ್ನ ಊಹೆ.ಜನ ಹೀಗೆ ನಡೆದುಕೊ
ಳ್ಳುವ ನಿಷ್ಕರುಣಿಗಳೆ ಎಂದು ಮನಸ್ಸು ಪ್ರಶ್ನೆ ಮಾಡುತ್ತದೆ.
ಆದ್ದರಿಂದ ಬಹಳ ಹಿಂದೆಯೇ, ಎಂದರೆ ತೊಂಡಮಾನನ
ಕಾಲದ್ದೇ, ಆದ ದೇಗುಲ ಇದ್ದಿರಬಹುದಾದ ಸಾಧ್ಯತೆಗೆ
ಒತ್ತಾಸೆ ದೊರೆಯುತ್ತದೆ.

ಮೊದಲ ಮೂರು ಆಳ್ವಾರ್‌ಗಳು ಒಂದು ಜಾತ್ರೆ
ಯನ್ನು ವರ್ಣಿಸಿದರೆ, ತಿರುಮಳಿಶೈಆಳ್ವಾರ್ ಅವರು
ಬ್ರಹ್ಮೋತ್ಸವದ (ಶ್ರವಣ ನಕ್ಷತ್ರದ) ವೈಭವವನ್ನು ಕೀರ್ತಿ
ಸಿದ್ದಾರೆ. ತಮ್ಮ ತಿರುವಂದಾದಿಯಲ್ಲಿ! ಎಂದರೆ ಎರಡ
ನೆಯ ಜಾತ್ರೆಯೂ ತಿರುಮಲೆಯ ಮೇಲೆ ವೈಭವೋಪೇತ
ವಾಗಿ ನಡೆಯುತ್ತ ಜನರನ್ನು ಲಕ್ಷಾಂತರವಲ್ಲದಿದ್ದರೂ
ಸಹಸ್ರಾರು ಸಂಖ್ಯೆಯಲ್ಲಿ ಆಕರ್ಷಿಸುತ್ತಿತ್ತು ಎನ್ನುವ ಚಿತ್ರ
ಕಣ್ಣ ಮುಂದೆ ನಿಲ್ಲುತ್ತದೆ. ಸಾಲದ್ದಕ್ಕೆ ಇಷ್ಟು ಸೊಗಸಾದ
ವೈಭವದಿಂದ ಕೂಡಿದ ಉತ್ಸವವನ್ನು ನೋಡಿದ ಮೇಲೆ
ಮನುಷ್ಯ ಜನ್ಮವೇತಕ್ಕೆ ಎಂದು ವ್ಯಥೆ ಪಡುವ ಆಳ್ವಾರ್
ಪಾಶುರದ ವಿವರಣೆಯಿಂದ ಆ ಜಾತ್ರೆಯ ಸಂಭ್ರಮ ದೊರೆ
ಯುತ್ತದೆ. ಇಂತಹ ವೈಭವೋಪೇತವಾದ ದೇವರು ಗುಡಿ
ಯಿಲ್ಲದೆ, ರಾಜಾಶ್ರಯ ಮೊದಲಿನಿಂದ ಇದ್ದರೂ ಬಡವಾಗಿ
ದ್ದನೇ ಎನ್ನುವ ಪ್ರಶ್ನೆ ಏಳದೇ ಇರದು.

ಇವೆಲ್ಲವನ್ನೂ ಅವಲೋಕಿಸುವಾಗ, ಚಿಂತನ
ಮಂಥನ ಮಾಡುವಾಗ ಶ್ರೀರಾಯರ ವಾದಕ್ಕೆ ಸರಿಯಾದ
ಹಿನ್ನೆಲೆ ಇರದೇ ಇರುವುದು ಅರಿವಾಗುತ್ತದೆ. ಆಗಲೇ
ವೇಂಗಡದೊಡೆಯನಿಗೆ ದೊಡ್ಡ ಗುಡಿಯಿದ್ದು ಪೂಜಾ
ವೈಭವದೊಡನೆ ಒಂದು ಅನುಕೂಲ ಹೊಂದಿದ ಊರಿನ
ಮಧ್ಯೆ ಅವನು ಮೆರೆಯುತ್ತಿದ್ದಿರಬಹುದಾದ ಸಾಧ್ಯತೆ
ಹುಲುಸಾಗಿ ಬೆಳೆಯುತ್ತದೆ. ಈ ವಾದದ ಹಿನ್ನೆಲೆಯಲ್ಲಿ
ಶ್ರೀರಾಯರ “ಪುರಿಂದು ಮಲರಿಟ್ಟ ಪುಂಡರೀಕ ಪಾದಂ”
ಎನ್ನುವ ಪಾಶುರದ ಭಾವವನ್ನು ಪುನರಾವಲೋಕನ
ಮಾಡಿದಾಗ ತಿಳಿಯುವ ಅಂಶಗಳಿಷ್ಟು.

ಒಂದು ಎತ್ತರವಾದ ಬೆಟ್ಟದ ಮೇಲೆ ಗುಡಿಯೊಂದು
ನಿಂತಿದೆ ಎನ್ನೋಣ. ಒಳಗಿನ ಪರಮಾತ್ಮನು ಮಹಿ
ಮಾನ್ವಿತ ಎಂದಾಗ ಸುತ್ತಮುತ್ತಣ ಜನ ಅವನಿಗೆ ಭಕ್ತಿ
ಯಿಂದ ನಡೆದುಕೊಳ್ಳುವುದು ಸಹಜವೇ. ಅವರು ತಮ್ಮ
ತಮ್ಮ ಗ್ರಾಮಗಳಿಂದಲೇ ದಿನ ಬೆಳಗಾದರೆ ಆ ಬೆಟ್ಟವನ್ನೂ
ಅದರ ಮೇಲಿನ ದೇಗುಲವನ್ನೂ ಒಳಗಿನ ಸ್ವಾಮಿಯನ್ನೂ
ಊಹಿಸಿಕೊಂಡು ಅತ್ತ ದೃಷ್ಟಿ ಮಾಡಿ ಹೇಳುವ ಮಾತು
ಗಳಿವು.“ದೇವರು ಬೆಟ್ಟದ ಮೇಲೆ ನಿಂತು ನಮ್ಮನ್ನು ಕಟಾ
ಕ್ಷಿಸುತ್ತಿದ್ದಾನೆ, ಸಂರಕ್ಷಿಸುತ್ತಿದ್ದಾನೆ.” ದೇವರು ಒಂದೇ



ದಿಕ್ಕಿಗೆ ತಿರುಗಿದ್ದರೂ ಸಹ, ದೇವಸ್ಥಾನದ ತಲೆವಾಗಿಲು ಒಂದೇ ದಿಕ್ಕಿಗೆ
ಇದ್ದರೂ ಸರಿಯೆ, ಸುತ್ತಮುತ್ತಲಿನ ಹಲವು ಹತ್ತು ಗ್ರಾಮದ ಜನ
“ಆ ದೇವರು ತಮ್ಮನ್ನೇ ನೋಡುತ್ತಿದ್ದಾನೆ, ಅನುಗ್ರಹ ಮಾಡುತ್ತಿದ್ದಾನೆ”
ಎಂದೇ ನಂಬುತ್ತಾರೆ.- ಇದು ಭಾವನೆ. ಈ ಭಾವನೆ ಮೂಡಿದಾಗ
ಆ ದೇವರು ತೆರೆದ ತಾಣದಲ್ಲಿ ನಿಂತಿರುವನೆಂಬುದಾಗಿ ಏಕೆ ಊಹಿಸ
ಬೇಕು? ದೇಗುಲದಿಂದ ದೇವರು ತಮ್ಮನ್ನು ವೀಕ್ಷಿಸಿದರೂ ಅವರು
ಬೆಟ್ಟದ ಮೇಲೆ ನಿಂತು ರಕ್ಷಿಸುತ್ತಿದ್ದಾನೆಂದೇ ಅಭಿಪ್ರಾಯ. ಇದು
“ತೆರಿಂದು ಎಂಗುಂ ತಾನೋಂಗಿ ನಿನ್ರಾನ್” ಎನ್ನುವ ಪದ್ಯ ಭಾಗಕ್ಕೆ
ಸಮರ್ಪಕವಾದ ಉತ್ತರವೆಂದು ನನ್ನ ಭಾವನೆ. ಇಷ್ಟಕ್ಕೂ ತಿರು
ಪತಿಯ ಬೆಟ್ಟವನ್ನು ದರ್ಶಿಸಿರುವವರಿಗೆ ತಿರುಪತಿಯ “ದೇವರು
ತೆರಿಂದು ಎಂಗುಂತಾನ್ ಓಂಗಿ” ನಿಂತಿರುವುದು,ಗೊತ್ತಾಗುವುದಿಲ್ಲ.
ಏತಕ್ಕೆಂದರೆ ಅಲ್ಲಿನ ಸ್ಥಿತಿಯನ್ನು ಗಮನಿಸಿದರೆ ಸುತ್ತಲೂ ಬೆಟ್ಟ
ಎತ್ತರಕ್ಕಿದ್ದು ಮಧ್ಯದ,ತಗ್ಗು ಪ್ರದೇಶದಲ್ಲಿ ದೇವಸ್ಥಾನವಿರುವುದು ಅರಿ
ವಾಗುತ್ತದೆ. ಆದರೂ 'ಯದ್ಭಾವಂತ ದ್ಭವತಿ.' ಬೆಟ್ಟದ ಮೇಲೆ ಅವನು
ಮನೆ ಮಾಡಿದ್ದಾನೆ. ತಮ್ಮನ್ನು ಅನುಗ್ರಹಿಸುತ್ತಿದ್ದಾನೆ ಎಂದು ಆ ಬೆಟ್ಟಕ್ಕೆ
ಜನ ನಮಿಸುತ್ತಾರೆ. ಇನ್ನು 'ಪರಿಂದು ಪಡುಕಾಡುನಿರ್ಪ' ಎನ್ನುವ
ಮಾತಿಗೆ ತನ್ನ ಮಂಟಪದ ಸುತ್ತ ಮುತ್ತ ಮಾತ್ರ ಕಡಿದಿದ್ದಾರೆ ಎಂದೇಕೆ
ಅರ್ಥ ಮಾಡಬೇಕು? ಬೆಟ್ಟದ ಬುಡದಿಂದ ತನ್ನ ಆಲಯದವರೆಗೂ
ಕಾಡನ್ನು ಕಡಿದು ಮಧ್ಯೆ ದಾರಿ ಮಾಡಿಕೊಂಡಿದ್ದಾನೆ ಎಂದೇಕೆ ಅರ್ಥ
ಏರ್ಪಡುವುದಿಲ್ಲ? ಮೊದಲೇ ದೊಡ್ಡ ಬೆಟ್ಟ,ದುರ್ಗಮವಾದ ಅರಣ್ಯ,
ದೂರ ಪ್ರಯಾಣ.ಅಂತಹ ದೀರ್ಘ ಪ್ರಯಾಣ ಯಾವ ಸ್ಥಳಕ್ಕೂ
ಇರಲಿಲ್ಲ. ಆದರೆ ಆಗಲೇ ಜನ ಬೆಟ್ಟಕ್ಕೆ ಹೋಗಿ ಬರಲು ಕಾಡು ಕಡಿದು
ಮೆಟ್ಟಿಲು ನಿರ್ಮಿಸಿದ್ದರು. ಇದೊಂದು ವಿಸ್ಮಯಜನಕ ವಾದ ವೃತ್ತವೇ
ಅಲ್ಲವೆ! ಇಂತಹ ಅದ್ಭುತ ಸ್ಥಿತಿಯನ್ನೇ ಆಳ್ವಾರ್ “ಪರಿಂದು ಪಡು
ಕಾಡು ನಿರ್ಪ”ಎಂದು ಭಾವಾವಿಷ್ಟರಾಗಿ ಹಾಡಿರುವುದರಲ್ಲಿ ಆಶ್ಚರ್ಯ
ವೇನು? ಅಂತಹ ದೇವರು ದೇವತೆಗಳಿಗೂ, ಮಾನವರಿಗೂ ಆದರ
ಣೀಯನೆಂದಾಗ ಆ ಹೊಗಳಿಕೆ ನೂರಕ್ಕೆ ನೂರು ಸತ್ಯ.

(ಮುಂದುವರೆಯುತ್ತದೆ)





# ಜಾಗೃತ ಸೂರ್ಯ ಕ್ಷೇತ್ರ ಅರಸವಲ್ಲಿ


– ಡಾ॥ ಸುಮನ ಬದರಿನಾಥ್

94820 94855


ಪುಣ್ಯಭೂಮಿ ಭಾರತದಲ್ಲಿ ಸೂರ್ಯಾರಾಧನೆ ವೇದಗಳಷ್ಟೇ ಪ್ರಾಚೀನವಾದುದು. ಅಂತೆಯೇ ಸೂರ್ಯಾರಾಧನೆಯ ಪ್ರತೀಕವಾದ ಸೂರ್ಯ ದೇವಾಲಯಗಳಿಗೂ ಬಹು ಪ್ರಾಚೀನವೂ. ಪುರಾತನವೂ ಆದ ಇತಿಹಾಸವಿದೆ. ಭಾರತದಾದ್ಯಂತ ಅನೇಕ ಸೂರ್ಯದೇವಾಲಯಗಳು ಹರಡಿವೆ. ಕಾಶ್ಮೀರದಲ್ಲಿನ ಮಾರ್ತಾಂಡ. ಗುಜರಾತ್‌ನಲ್ಲಿನ ಮೊಧೇರ, ಒರಿಸ್ಸಾದಲ್ಲಿನ ಕೋನಾರ್ಕ ಜಗತ್ಪ್ರಸಿದ್ಧವಾದವು ಅದೇ ಸಾಲಿನಲ್ಲಿ ನಿಲ್ಲುತ್ತದೆ ಆಂಧ್ರಪ್ರದೇಶದ ಅರಸವಲ್ಲಿಯಲ್ಲಿರುವ ಸೂರ್ಯದೇವಾಲಯ.

ಅರಸವಲ್ಲಿ ಪ್ರಖ್ಯಾತವಾದ ಸೂರ್ಯಕ್ಷೇತ್ರ. ಇದು ಆಂಧ್ರ ಪ್ರದೇಶದ ಶ್ರೀಕಾಕುಲಂ ಜಿಲ್ಲೆಯ ಮುಖ್ಯ ನಗರವಾದ ಶ್ರೀಕಾಕುಲಂನಿಂದ ಸುಮಾರು 3 ಕಿ.ಮೀ. ದೂರದಲ್ಲಿದೆ. ರೈಲಿನಲ್ಲಿ ಪಯಣಿಸುವವರು ಚೆನ್ನೈ, ಕಲ್ಕತ್ತ ರೈಲು ಮಾರ್ಗದಲ್ಲಿರುವ ಶ್ರೀಕಾಕುಲಂ ರೈಲು ನಿಲ್ದಾಣದಲ್ಲಿಳಿದು ಅಲ್ಲಿಂದ ಬಸ್ - ಆಟೋಗಳಲ್ಲಿ ಅರಸವಲ್ಲಿಗೆ ಪಯಣಿಸಬಹುದು. ವಿಶಾಖಪಟ್ಟಣ, ಶ್ರೀಕೂರ್ಮಕ್ಷೇತ್ರಗಳಿಗೂ ಇದು ಹತ್ತಿರ. ಈ ಊರಿನ ಮೂಲ ಹೆಸರು ಹರ್ಷವಿಲ್ಲೈ ಎಂದು ಇತ್ತೆಂದು ಪ್ರಾಚೀನ ಗ್ರಂಥಗಳಿಂದ ತಿಳಿದು ಬರುತ್ತದೆ. ಕ್ರಮೇಣ ಅದು ಅರಸವಲ್ಲಿ ಎಂದು ರೂಪಾಂತರಗೊಂಡಿತು. ಪದ್ಮಪುರಾಣ ಮುಂತಾದ ಪುರಾಣಗಳಲ್ಲಿ ಈ ಕ್ಷೇತ್ರ ಪ್ರಸ್ತಾಪಿಸಲ್ಪಟ್ಟಿದೆ. ಐತಿಹಾಸಿಕವಾಗಿಯೂ ಈ ಕ್ಷೇತ್ರ ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ. ಊರಿಗೆ ಕೇಂದ್ರ ಬಿಂದುವಾಗಿ ಮೆರೆಯುತ್ತದೆ ಸೂರ್ಯನಾರಾಯಣನ ಭವ್ಯ ದೇವಾಲಯ.

ಸ್ಥಳಪುರಾಣದಂತೆ ಈ ದೇವಾಲಯ ದೇವರಾಜನಾದ ಇಂದ್ರನಿಂದ ಸ್ಥಾಪಿತವಾದುದು. ಪುರಾಣಗಳಲ್ಲಿ ವರ್ಣಿತವಾಗಿರುವಂತೆ ದ್ವಾಪರಯುಗದಲ್ಲಿ ಶ್ರೀಕೃಷ್ಣನ ಅಣ್ಣನಾದ ಬಲರಾಮ ದೇವರು ತನ್ನ ನೇಗಿಲು ತುದಿಯಿಂದ ನಾಗವಲ್ಲಿ ನದಿಯನ್ನು ಈ ಸ್ಥಳಕ್ಕೆ ಎಳೆದು ತಂದು ಅದರ ದಂಡೆಯ ಮೇಲೆ ರುದ್ರ ಕೂಟೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ. ಸಕಲ ದೇವತೆಗಳೂ ಆ ಲಿಂಗವನ್ನು ಪೂಜಿಸಿದರು. ದೇವರಾಜನಾದ ಇಂದ್ರ ಮಾತ್ರ ತಡವಾಗಿ ಬಂದವನು ದೇಗುಲದ ಒಳಗೆ ಪ್ರವೇಶಿಸಲು ಯತ್ನಿಸಿದ. ಆಗ ಶಿವ ಪಾರ್ವತಿಯರು ಏಕಾಂತದಲ್ಲಿದ್ದರು. ದ್ವಾರಪಾಲಕನಾದ ನಂದಿ ಇಂದ್ರನನ್ನು ತಳ್ಳಿ ಹೊರ ದೂಡಿದ. ಅವಮಾನಿತನಾದ ಇಂದ್ರ ನಂದಿ ತಳ್ಳಿದ ರಭಸಕ್ಕೆ ಅಲ್ಲಿಂದ ಸುಮಾರು 2 ಮೈಲಿ ದೂರಕ್ಕೆ ಈಗ ಸೂರ್ಯ ದೇವಾಲಯವಿರುವ ಸ್ಥಳಕ್ಕೆ ಬಂದು ಪ್ರಜ್ಞಾಹೀನನಾಗಿ ಬಿದ್ದ. ಆ ಅರೆ ಪ್ರಜ್ಞಾವಸ್ಥೆಯಲ್ಲಿ ಸೂರ್ಯದೇವನು ದರ್ಶನ ಕೊಟ್ಟು ತನಗೆ ದೇವಾಲಯವನ್ನು ಕಟ್ಟಿಸಿ ಅಲ್ಲಿ ತನ್ನ ವಿಗ್ರಹವನ್ನು ಪ್ರತಿಷ್ಠಾಪಿಸಿದರೆ ಅವನು ಮೊದಲಿನಂತಾಗುವನೆಂದು ಹೇಳಿದಂತಾಯಿತು.

ಎಚ್ಚರಗೊಂಡ ಇಂದ್ರ ತಾನು ಮಲಗಿದ್ದ ಎಡೆಯಲ್ಲಿಯೇ ದೇವ ಶಿಲ್ಪಿಯಿಂದ ದೇವಾಲಯವನ್ನು ನಿರ್ಮಿಸಿ ಅಲ್ಲಿ ಸೂರ್ಯನ ವಿಗ್ರಹವನ್ನು ಪ್ರತಿಷ್ಠಾಪಿಸಿದನು. ಬಳಿಯಲ್ಲಿಯೇ ಒಂದು ಪುಷ್ಕರಣಿಯನ್ನು ತನ್ನ ವಜ್ರಾಯುಧದಿಂದ ನಿರ್ಮಿಸಿದನು. ಅದಕ್ಕೆ ಸೂರ್ಯಕ್ಷೇತ್ರವೆಂದು ಪ್ರಸಿದ್ಧಿಯಾಯಿತು.

ಅರಸವಲ್ಲಿ ಸೂರ್ಯ ದೇಗುಲಕ್ಕೆ ಸಾವಿರಾರು ವರ್ಷಗಳಷ್ಟು ಸುಧೀರ್ಘವಾದ ಇತಿಹಾಸವೂ ಇದೆ. ದೇವಸ್ಥಾನದ ಹೊರ ಪ್ರಾಕಾರದಲ್ಲಿನ ಗೋಡೆಗಳ ಮೇಲೆ ಕೆತ್ತಲ್ಪಟ್ಟಿರುವ ಶಿಲಾ ಶಾಸನಗಳ ಪ್ರಕಾರ ಇದನ್ನು ಕ್ರಿ.ಶ. 7 ನೇ ಶತಮಾನದಲ್ಲಿ ದೇವೇಂದ್ರವರ್ಮನೆಂಬ ಕಳಿಂಗರಾಜನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಕಳಿಂಗವಂಶದ ಅನೇಕ ರಾಜರು. ಆದಿತ್ಯ ವಿಷ್ಣು ಶರ್ಮ, ಭಾನುಶರ್ಮ, ಜೋಡುಗೊಂಡದೇವ, ದೇವ ವರ್ಮ ಮುಂತಾದ ಶ್ರೀಮಂತ ಭಕ್ತರು ದೇಗುಲಕ್ಕೆ ಅನೇಕ ಗ್ರಾಮಗಳನ್ನು, ದತ್ತಿಗಳನ್ನು ಕೊಟ್ಟಿರುವ ಬಗ್ಗೆ ಹಲವಾರು ಶಿಲಾ ಶಾಸನಗಳಿವೆ. ಈ ದೇಗುಲವೂ ಕನ್ನಡರಾಯನಾದ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಮಹಾವೈಭವದಿಂದ ಮೆರೆಯುತ್ತಿತ್ತು. ಕ್ರಮೇಣ ಮುಸ್ಲಿಮ್ ದಾಳಿಗಾರರ ದಾಳಿಗೆ ಸಿಲುಕಿ ಕಳೆಗುಂದಿತು. ಮೂಲ ವಿಗ್ರಹವನ್ನು ಮಾತ್ರ ದಾಳಿಗಾರರ ಕೈಗೆ ಸಿಕ್ಕದಂತೆ ಒಂದು ಭಾವಿಯಲ್ಲಿ ಬಚ್ಚಿಡಲಾಗಿತ್ತು. ಪ್ರಾಚೀನವಾದ ದೇಗುಲ ಶಿಥಿಲವಾಗುತ್ತಾ ಬಂದಿರಲು ಕ್ರಿ.ಶ. 1778 ರಲ್ಲಿ ಯೆಲಮಾಂಚಿಲಿ ಪುಲ್ಲಾಜಿ ಪಂತುಲು ಎಂಬ ಭಕ್ತರು ದೇಗುಲವನ್ನು ಈಗಿರುವಂತೆ ಜೀರ್ಣೋದ್ಧಾರ ಗೊಳಿಸಿರುತ್ತಾರೆ. ಈಗ ದೇಗುಲವು ಶಿಲ್ಪಕಲಾಕೆತ್ತನೆಗಳಿಂದ ಕೂಡಿ ಮೊದಲಿನ ವೈಭವದಿಂದ ವಿರಾಜಿಸುತ್ತಾ ಸಾವಿರಾರು ಭಕ್ತರನ್ನು, ಯಾತ್ರಿಕರನ್ನು ತನ್ನೆಡೆಗೆ ಆಕರ್ಷಿಸುತ್ತಾ ಭಾರತದ ಸೂರ್ಯ ದೇವಾಲಯಗಳಲ್ಲಿ ದ್ವಿತೀಯಸ್ಥಾನಗಳಿಸಿದೆ.

ಅರಸವಲ್ಲಿಯ ಸೂರ್ಯನಾರಾಯಣ ದೇಗುಲ ಭಾರತದ ಇತರ ಸೂರ್ಯದೇವಾಲಯಗಳಂತಲ್ಲದೆ ಸುಸ್ಥಿತಿಯಲ್ಲಿದೆ. ದೇವಾಲಯದ ಆವರಣವನ್ನು ಪ್ರವೇಶಿಸುತ್ತಿದ್ದಂತೆಯೇ ಎತ್ತರವಾದ ವಿಮಾನಗೋಪುರ ಮತ್ತು ಧ್ವಜಸ್ತಂಭ ಕಣ್ಮನಗಳನ್ನು ಆಕರ್ಷಿಸುತ್ತವೆ. ಸೂರ್ಯನಾರಾಯಣನ ದಿವ್ಯಮಂಗಳ ವಿಗ್ರಹ ಗರ್ಭಗುಡಿಯಲ್ಲಿ ಕಂಗೊಳಿಸುತ್ತದೆ. ಸುಮಾರು 5 ಅಡಿ ಎತ್ತರ, 3 ಅಡಿ ಅಗಲವಿರುವ ಕಪ್ಪು ಸಾಲಿಗ್ರಾಮ ಶಿಲೆಯಿಂದ ನಿರ್ಮಿತವಾದ ಭವ್ಯ ಮೂರ್ತಿ. ಚತುರ್ಭುಜಗಳು. ಮೇಲಿನ ಎರಡು ಕೈಗಳಲ್ಲಿ ಕಮಲ ಪುಷ್ಪಗಳಿವೆ. ಕೆಳಗಿನ ಕೈಗಳು ವರ, ಅಭಯ, ಮುದ್ರೆಯಲ್ಲಿವೆ. ಸುಂದರವಾಗಿ ಜಿಡಿಸಿರುವ ಆಭರಣಗಳು, ನಡುವಿನಲ್ಲಿ ಸೂರ್ಯ ಕಠಾರಿಯಿದೆ. ಶಿರದ ಮೇಲ್ಭಾಗದಲ್ಲಿ ಆದಿಶೇಷ ಛತ್ರಿಯಂತೆ ಹೆಡೆ ಎತ್ತಿದ್ದಾನೆ. ಈ ಪದ್ಮಪಾಣಿಯ ಭಂಗಿ ಬಹು ವಿಶೇಷವಾದುದು. ಕಮಲ ಪುಷ್ಪವು, ಜ್ಞಾನ, ಸೌಂದರ್ಯ ಸೃಷ್ಟಿ, ಪ್ರಕೃತಿ, ಮುಂತಾದ ನಾನಾರ್ಥಗಳನ್ನು ಸೂಚಿಸುತ್ತದೆ. ಎರಡೂ ಪಕ್ಕಗಳಲ್ಲಿ ಅವನ ಪತ್ನಿಯರಾದ ಉಷಾ, ಛಾಯಾ, ಪದ್ಮಿನಿಯರ ವಿಗ್ರಹಗಳಿವೆ. ಪ್ರಾಚೀನ ಶಿಲ್ಪಶಾಸ್ತ್ರದಲ್ಲಿ ಉಕ್ತವಾಗಿರುವಂತೆ ಕೆತ್ತಲ್ಪಟ್ಟಿರುವ ಈ ಎಲ್ಲ ವಿಗ್ರಹಗಳೂ ಬಹು ಸುಂದರವಾಗಿದೆ. ಉಷ ಮತ್ತು ಛಾಯಾ ಬೆಳಗಿನ ಮತ್ತು ರಾತ್ರಿಯ ಅಭಿಮಾನಿ ದೇವತೆಗಳಾಗಿದ್ದಾರೆ. ವಿಗ್ರಹದ ತಳಭಾಗದಲ್ಲಿ ಪಿಂಗಳ ಮತ್ತು ಮಾತಾರ (ದಂಡ ಎಂಬ ಹೆಸರೂ ಹೇಳುತ್ತಾರೆ) ಎಂಬ ಸೂರ್ಯ ಲೋಕದ ದ್ವಾರಪಾಲಕರು ಕೆತ್ತಲ್ಪಟ್ಟಿದ್ದಾರೆ. ಸನಕ, ಸನಂದನ, ಋಷಿಗಳು ಚಾಮರ ಬೀಸುತ್ತಿದ್ದಾರೆ. ಪಾದ ಮೂಲದಲ್ಲಿ ಸಪ್ತಾಶ್ವಗಳು ಮತ್ತು ಸಾರಥಿ ಅರುಣರ ಕೆತ್ತನೆಗಳಿದ್ದು ಸೂರ್ಯ ರಥದ ಕಲ್ಪನೆ ಬಿಂಬಿತವಾಗಿದೆ. ಏಕಾಂಡವಾದ ಶಿಲೆಯಿಂದ ಕೆತ್ತಲ್ಪಟ್ಟ ಈ ಭವ್ಯ ವಿಗ್ರಹಗಳಿಂದ ಗರ್ಭಗುಡಿ ದಿವ್ಯ ಪ್ರಭೆಯಿಂದ ದೈವಿಕ ಶಕ್ತಿಯಿಂದ ತುಂಬಿರುವಂತೆ ಭಾಸವಾಗುತ್ತದೆ. ನಯನಮನೋಹರವಾಗಿ, ನಾನಾವರ್ಣಗಳ ಪುಷ್ಪಗಳು, ರತ್ನಾಭರಣಗಳಿಂದ ರಂಜಿತವಾಗಿ ದಿವ್ಯಾಲಂಕಾರಭರಿತನಾಗಿ ಪತ್ನಿ ಸಮೇತನಾದ ಸೂರ್ಯನಾರಾಯಣ ದರ್ಶನ ನೀಡುತ್ತಾನೆ.

ಪಂಚಾಯತನ ಪೂಜಾ ಪದ್ಧತಿಗೆ ಅನುಸಾರವಾಗಿ ಸೂರ್ಯನ ವಿಗ್ರಹ ಪ್ರಮುಖಸ್ಥಾನದಲ್ಲಿ ಮಧ್ಯದಲ್ಲಿದ್ದು, ವಿಷ್ಣು ಶಿವ,ಅಂಬಿಕೆ,ಗಣೇಶರ ವಿಗ್ರಹಗಳು ಸಣ್ಣ ಗುಡಿಗಳಲ್ಲಿವೆ. ಐರಾವತವನ್ನು ಏರಿರುವ ಇಂದ್ರನ ವಿಗ್ರಹವೂ ಒಂದಿದ್ದು ಸ್ಥಳ ಪುರಾಣವನ್ನು ಸೂಚಿಸುತ್ತದೆ. ಬಳಿಯಲ್ಲೇ ಇರುವ ವಿಶಾಲವಾದ ಶುಭ್ರ ಜಲದಿಂದ ತುಂಬಿ ತುಳುಕುವ ಪುಷ್ಕರಣಿಯನ್ನು ಇಂದ್ರ ಪುಷ್ಕರಣಿ. ಸೂರ್ಯ ನಮಸ್ಕಾರ ಮಂಟಪ ಈ ದೇಗುಲದ ವಿಶೇಷತೆ. ಪರಿಶುಭ್ರವಾದ ವಾತಾವರಣ ಮನಸ್ಸನ್ನು ಉಲ್ಲಾಸಗೊಳಿಸಿ ಭಗವಂತನೆಡೆಗೆ ನಮ್ಮನ್ನು ಒಯ್ಯುತ್ತದೆ.

ಅರಸವಲ್ಲಿ ದೇವಾಲಯದಲ್ಲಿ ಅದನ್ನು ದೇಶದಾದ್ಯಂತ ಪ್ರಖ್ಯಾತಿಗೊಳಿಸಿರುವ ವೈಶಿಷ್ಟತೆಯೊಂದಿದೆ. ಅದೆಂದರೆ ಗರ್ಭಗುಡಿಯಲ್ಲಿನ ಮೂಲ ವಿಗ್ರಹಕ್ಕೆ ಸಲ್ಲುವ ಸೂರ್ಯಕಿರಣಾಭಿ

ಷೇಕ ವರ್ಷದಲ್ಲಿ ಎರಡು ದಿನ ಉತ್ತರಾಯಣ ಮತ್ತು ದಕ್ಷಿಣಾಯನ ಪ್ರಾರಂಭವಾಗುವ ಕಾಲದಲ್ಲಿ ಪ್ರಾತಃಕಾಲದ ಸೂರ್ಯನ ಕಿರಣಗಳು ಗರ್ಭಗುಡಿಯನ್ನು ಪ್ರವೇಶಿಸಿ ವಿಗ್ರಹದ ಪಾದಮೂಲದ ಮೇಲೆ ಬೀಳುತ್ತದೆ. ಸಾಮಾನ್ಯವಾಗಿ ಈ ಕಿರಣಾಭಿಷೇಕವು ಮಾರ್ಚ್ ತಿಂಗಳಿನಲ್ಲಿ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಸಂಭವಿಸುತ್ತದೆ. ಬೆಳಗಿನ 6 ಗಂಟೆಯಿಂದ - 6 1/2 ಗಂಟೆಯ ಒಳಗೆ ನಡೆಯುವ ಈ ಘಟನೆಯನ್ನು ವೀಕ್ಷಿಸಲು ಸಾವಿರಾರು ಜನ ಭಕ್ತರು ನೆರೆದು ಈ ಅದ್ಭುತರಮ್ಯ ದೃಶ್ಯವನ್ನು ನೋಡಲು ಕಾತುರದಿಂದ ಕಾಯುತ್ತಿರುತ್ತಾರೆ. ಸೂರ್ಯರಶ್ಮಿಗಳು ಮೊದಲು ವಿಗ್ರಹದ ಪಾದಮೂಲದ ಮೇಲೆ ಬಿದ್ದು ನಿಧಾನವಾಗಿ ಶಿರದ ಪರ್ಯಂತ ಪ್ರಸರಿಸುತ್ತದೆ. ಸುಮಾರು 4 ನಿಮಿಷಗಳ ಅವಧಿಯ ಈ ಘಟನೆ ಒಮ್ಮೆ 9 ನಿಮಿಷಗಳ ಕಾಲ ಸೂರ್ಯ ಕಿರಣಗಳು ವಿಗ್ರಹದ ಮೇಲೆ ಬೀಳುತ್ತಿದ್ದ ಇತಿಹಾಸವುಂಟು. ಹೊಂಗಿರಣಗಳ ಬೆಳಕಿನಲ್ಲಿ ದೇದೀಪ್ಯಮಾನವಾಗಿ ಬೆಳಗುವ ಸೂರ್ಯನಾರಾಯಣನನ್ನು ಸಂದರ್ಶಿಸಿದರೆ ಬಹು ಪುಣ್ಯಪ್ರದವೆಂಬ ಪ್ರತೀತಿಯಿದೆ. ಪ್ರಸ್ತುತ ಪೂಜೆಸಲ್ಲಿಸುತ್ತಿರುವ ಅರ್ಚಕರ ಪೂರ್ವಜರಾದ ಇಪ್ಪಿಲಿ ಚಿನ್ನ ಸನ್ಯಾಸಲು, ಇಪ್ಪಿಲಿಪೆದ್ದ ಸನ್ಯಾಸಲು ಎಂಬುವರು ಈ ಅದ್ಭುತ ವಾಸ್ತು ವಿನ್ಯಾಸ ಮಾಡಿದರೆಂದು ಹೇಳಲಾಗುತ್ತದೆ. ಪ್ರಾಚೀನ ಭಾರತದ ವಾಸ್ತುಶಿಲ್ಪ ಶಾಸ್ತ್ರದ ಹೆಗ್ಗಳಿಕೆಯಲ್ಲವೇ ಇದು !

ಅರಸವಲ್ಲಿಯಲ್ಲಿ ಸೂರ್ಯನಾರಾಯಣ ಸ್ವಾಮಿಗೆ ನಿತ್ಯೋತ್ಸವ,ಮಾಸೋತ್ಸವ,ಸಂವತ್ಸರೋತ್ಸವಗಳು ನಯನಾನಂದಕರವಾಗಿ ಜರಗುತ್ತಲೇ ಇರುತ್ತವೆ. ಈ ಎಲ್ಲ ಉತ್ಸವಗಳ ಮಕುಟಮಣಿ ರಥಸಪ್ತಮಿಯ ಸೂರ್ಯಜಯಂತಿ ಉತ್ಸವ. ನಿತ್ಯವೂ ಸರ್ವಾಲಂಕಾರ ಭೂಷಿತನಾಗಿ ದರ್ಶನ ಕೊಡುವ ಸೂರ್ಯನಾರಾಯಣನಿಗೆ ಅಂದು ವಿಶೇಷ ಕ್ಷೀರಾಭಿಷೇಕ. ಅಂದು ಮಾತ್ರ ಮೂಲವಿರಾಟ್‌ನ ವಿಶ್ವರೂಪ ದರ್ಶನ ವಿಶೇಷ. ಆದಿತ್ಯರೂಪದ ದರ್ಶನ, ರಥಸಪ್ತಮಿಯಂದು ಇಡೀ ದೇಗುಲವೇ ಝಗಝಗಿಸುವ ಅಲಂಕಾರಗಳಿಂದ ವೈಭವೋಪೇತವಾಗಿ ಕಂಗೊಳಿಸುತ್ತದೆ. ಕ್ಷೀರಾಭಿಷೇಕದ ಸಮಯದಲ್ಲಿ ಮೂಲ ವಿಗ್ರಹದ ಸೌಂದರ್ಯ ಅವರ್ಣನೀಯ. ಅಂದು ಭಗವಂತನ ದರ್ಶನ ಮಾಡಿದವರ ಕೋರಿಕೆಗಳೆಲ್ಲ ಪೂರ್ಣಗೊಳ್ಳುವವೆಂದು ಭಕ್ತರ ನಂಬಿಕೆ. ಸಾವಿರಾರು ಜನ ಭಕ್ತರು ಸಂದಣಿಸುತ್ತಾರೆ.ಸೂರ್ಯನಾರಾಯಣ ಪಾಹಿಮಾಂ ಎಂಬ ಜಯಘೋಷ ಎಲ್ಲೆಡೆ ಪ್ರತಿಧ್ವನಿಸುತ್ತದೆ. ವಾರ್ಷಿಕ ಬ್ರಹ್ಮ ರಥೋತ್ಸವವು ಚೈತ್ರ ಶುದ್ಧ ಏಕಾದಶಿಯಿಂದ ಹುಣ್ಣಿಮೆಯವರೆಗೂ ಸಂಪನ್ನವಾಗಿ ಸ್ವಾಮಿಗೆ ಉಷಾ,ಛಾಯಾ,ಪದ್ಮಿನಿದೇವಿಯರೊಡನೆ ಕಲ್ಯಾಣೋತ್ಸವವೂ , ರಥೋತ್ಸವವೂ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ.ಕಾರ್ತೀಕ ಮಾಸದಲ್ಲಿ ದ್ವಾದಶಿಯಂದು ಇಂದ್ರ ಪುಷ್ಕರಣಿಯಲ್ಲಿ ತೆಪ್ಪೋತ್ಸವವೂ ವೈಭವದಿಂದ ಜರುಗುತ್ತದೆ. ಹಂಸಾಕಾರದ ದೀಪಾಲಂಕೃತನಾದ ತೆಪ್ಪದಲ್ಲಿ ಸ್ವಾಮಿ ವಿಹರಿಸುತ್ತಾನೆ. ಹೀಗೆ ವರ್ಷದುದ್ದಕ್ಕೂ ಉತ್ಸವಗಳು ಸಂಪನ್ನವಾಗುತ್ತಲೇ ಇರುತ್ತವೆ.

ಅರಸವಲ್ಲಿಯ ಸೂರ್ಯನಾರಾಯಣ ಸ್ವಾಮಿ ಕಲಿವರದ ಅಂದರೆ ಕಲಿಯುಗದಲ್ಲಿ ಶೀಘ್ರವಾಗಿ ಸುಲಭವಾಗಿ ವರಗಳನ್ನು ನೀಡುವನೆಂದು ಪ್ರಖ್ಯಾತನಾಗಿದ್ದಾನೆ.ಕುಷ್ಟರೋಗ, ಕುರುಡುತನ, ಬಂಜೆತನ, ಚರ್ಮವ್ಯಾಧಿಗಳು ಇಲ್ಲಿ ಸೇವೆ ಸಲ್ಲಿಸುವುದರಿಂದ ಪರಿಹಾರವಾಗುವುದೆಂದು ಪ್ರತೀತಿ. ಸೂರ್ಯನಮಸ್ಕಾರ ಸೇವೆ ಇಲ್ಲಿಯ ವೈಶಿಷ್ಟತೆ.ದೇಗುಲದಲ್ಲಿರುವ ಸೂರ್ಯ ನಮಸ್ಕಾರ ಮಂಟಪದಲ್ಲಿ ಭಕ್ತರು ಸಂಕಲ್ಪ ಪೂರ್ವಕವಾಗಿ ನಿರ್ದಿಷ್ಟ ಸಂಖ್ಯೆಯ ನಮಸ್ಕಾರಗಳನ್ನು ಸಲ್ಲಿಸುತ್ತಾರೆ. ಇಲ್ಲಿಯ ಇನ್ನೊಂದು ವಿಶೇಷವೇನೆಂದರೆ ಸೂರ್ಯ ನಮಸ್ಕಾರ ಸೇವೆ ಸಲ್ಲಿಸಲು ಅಶಕ್ತರರಾದ ಭಕ್ತರ ಪರವಾಗಿ ಅರ್ಚಕರೇ ಆ ಸೇವೆ ಸಲ್ಲಿಸುವುದು. ಆದಿತ್ಯ ಹೃದಯ, ಸೂರ್ಯಾಷ್ಟೋತ್ತರ ಶತನಾಮಾವಳಿ,ಸೂರ್ಯಕವಚ ಮುಂತಾದ ಸೂರ್ಯ ಸ್ತೋತ್ರಗಳ ಪಠಣೆ ಬಹು ಫಲಕಾರಿ ಭಾನುವಾರದಂದು ದೇವದರ್ಶನ ಮಾಡಿ ಏಕಭುಕ್ತ ವ್ರತವನ್ನು ಆಚರಿಸುತ್ತಾರೆ. ಸೂರ್ಯದೇವನಿಗೆ ಪ್ರಿಯವಾದ ವಸ್ತುಗಳನ್ನು ದಾನ ಮಾಡುತ್ತಾರೆ.

ಅರಸವಲ್ಲಿ ಮತ್ತು ಶ್ರೀಕೂರ್ಮಕ್ಷೇತ್ರ ಈ ಎರಡೂ ಸ್ಥಳಗಳು ಪರಸ್ಪರ ಸುಮಾರು 15 ಕಿ.ಮೀ. ದೂರದಲ್ಲಿವೆ. ಶ್ರೀಕೂರ್ಮ ಕ್ಷೇತ್ರ ಸಮುದ್ರ ದಂಡೆಯಲ್ಲಿದ್ದು ಇಲ್ಲಿ ಶ್ರೀಮನ್ನಾರಾಯಣನ ಕೂರ್ಮಾವತಾರದ ವಿಗ್ರಹದ ದೇಗುಲವಿದೆ. ಶ್ರೀಕೂರ್ಮದಲ್ಲಿ ಸಮುದ್ರಸ್ನಾನ ಮಾಡಿ ದೇವರನ್ನು ದರ್ಶಿಸಿ ನಂತರ ಅರಸವಲ್ಲಿಗೆ ಬಂದು ಇಂದ್ರ ಪುಷ್ಕರಣಿಯಲ್ಲಿ ಸ್ನಾನ ಮಾಡಿ ಸೂರ್ಯನಾರಾಯಣನನ್ನು ಸಂದರ್ಶಿಸುವ ಪದ್ಧತಿಯನ್ನು ಬಹುಕಾಲದಿಂದಲೂ ಭಕ್ತರು ಆಚರಿಸುತ್ತಾ ಬಂದಿದ್ದಾರೆ. ಸೂರ್ಯಾರಾಧಕರೆಲ್ಲರೂ ಒಮ್ಮೆ ಸಂದರ್ಶಿಸಲೇ ಬೇಕಾದ ಪವಿತ್ರ ಜಾಗೃತಸೂರ್ಯಕ್ಷೇತ್ರ ಅರಸವಲ್ಲಿ.

# ಅವಧೂತ ಶಿರೋಮಣಿ ಮಾದನೂರು ಶ್ರೀ ವಿಷ್ಣು ತೀರ್ಥರ ಆರಾಧನಾ ಮಹೋತ್ಸವ

– ಡಾ ॥ ಗುರುರಾಜ ಪ್ರೋಶೆಟ್ಟಿಹಳ್ಳಿ
97393 69621



ವಿಷ್ಣುತೀರ್ಥಃಕಲ್ಪವೃಕ್ಷೋ ವಿಷ್ಣುತೀರ್ಥಶ್ಚ ಕಾಮಧುಕ್।
ಚಿಂತಾಮಣಿರ್ವಿಷ್ಣುತೀರ್ಥೋ ಯತೀಂದ್ರಃ ಸರ್ವಕಾಮದಃ॥

ದ್ವೈತ ವೇದಾಂತ ಪರಂಪರೆಯಲ್ಲಿ ಅನೇಕ ವಿಭೂತಿ ಪುರುಷರನ್ನು ಅಪರೋಕ್ಷಜ್ಞಾನಿಗಳನ್ನು ಕಾಣಬಹುದು. ಅಂತಹ ಅವಧೂತ ಯತಿಶ್ರೇಷ್ಠರು ಅಡವಿ ಸ್ವಾಮಿಗಳು, ಅರಣ್ಯಕಾಚಾರ್ಯರು ಮೊದಲಾಗಿ ಖ್ಯಾತರಾದ ಮಾದನೂರಿನ ಶ್ರೀವಿಷ್ಣುತೀರ್ಥರು. (1756-1806) ಪೀಠವನ್ನು ಅಪೇಕ್ಷಿಸದೆ ವಿಶೇಷ ಜ್ಞಾನಕಾರ್ಯಕ್ಕೆಂದು ಮಾತ್ರವೇ ಪರಮ ಹಂಸಪೀಠ ಸ್ವೀಕರಿಸಿ ಪಾಠಪ್ರವಚನ ಮತ್ತು ಗ್ರಂಥ ರಚನೆಗಳಿಂದ ಜನ ಜಾಗೃತಿಯನ್ನುಂಟು ಮಾಡಿ ಭಗವತ್ಸೇವೆಯನ್ನು ಮಾಡಿದ 'ಬಿಡಿ ಸನ್ಯಾಸಿ'ಗಳೆಂಬ ವಿಶಿಷ್ಠ ವರ್ಗವನ್ನೇ ವೇದಾಂತದ ಇತಿಹಾಸದಲ್ಲಿ ಕಾಣಬಹುದು.

ಸವಣೂರಿನ ಬಳಿಯ ಕೃಷ್ಣಾ - ತುಂಗಾನದಿಗಳ ಮಧ್ಯದಲ್ಲಿ ವರದಾ ನದಿಯ ಸಮೀಪದ ಸಿದ್ಧಾಪುರದಲ್ಲಿ ಈಶ್ವರ ಸಂ॥ ಕೃಷ್ಣಾಷ್ಟಮಿಯಂದು ಬಾಳಾಚಾರ್ಯ-ಭಾಗೀರಥಿಬಾಯಿ ದಂಪತಿಗಳಿಗೆ ಶ್ರೀಜಯತೀರ್ಥರ ಪರಮಾನುಗ್ರಹದಿಂದ ಜನನ. ಇದು ಶ್ರೀಕೃಷ್ಣಾಜನ್ಮಾಷ್ಟಮಿಯಂದು ಜನಿಸಿದ ಈ ಶಿಶು ಕೃಷ್ಣ ಪ್ರತಿಪಾದ್ಯ ಭಾಗವತಕ್ಕೆ ವ್ಯಾಖ್ಯಾನ ಬರೆಯಲು ಸೂಚನೆಯಿದ್ದೀತು.


'ಮಂಚ ಬಾರದು,ಮಡದಿ ಬಾರಳು,ಕಂಚು ಕನ್ನಡಿ ಬಾರದು, ಸಂಚಿತಾರ್ಥವು ಮತ್ತೆ ಬಾರದು ಮುಂಚೆ ಮಾಡಿರಿ ಧರ್ಮವ" ಎಂಬ ಪುರಂದರದಾಸರ ದೇವರನಾಮದ ಪ್ರಭಾವಿತರಾಗಿ ಸಂಸಾರಭಾರವನ್ನು ತ್ಯಜಿಸಿ, ಅವಧೂತಚರ್ಯೆ ಸ್ವೀಕರಿಸಿದರು. ಯತ್ಯಾಶ್ರಮವನ್ನು ಕೇವಲ ಯದುಪತಿಯನ್ನು ಒಲಿಸಿಕೊಲ್ಲಲು ಮಾತ್ರ ಉಪಯೋಗಿಸಿಕೊಂಡ ಭಾಗವತ ಶಿರೋರತ್ನರೆನಿಸಿದ್ದಾರೆ. ಜೀವನದಲ್ಲಿ ನಾಲ್ಕು ಆಶ್ರಮಗಳನ್ನು, ಆಶ್ರಮೋಚಿತ ನಿಯತ ಕರ್ಮಗಳಿಂದ ಆಚರಿಸಿ ಸಾರ್ಥಕ ಜೀವನ ಸಾಗಿಸಿದ ಮಹಾನುಭಾವರು.

ಬ್ರಹ್ಮಚರ್ಯದಲ್ಲಿ ಸ್ವಾಧ್ಯಾಯಾದಿ ನಿಯತ 'ಧರ್ಮ'ವನ್ನು, ಗಾರ್ಹಸ್ಥದಲ್ಲಿ ದಾನಧರ್ಮಾದಿ ಅತಿಥಿ ಪೂಜಾದಿಗಳಿಂದ 'ಅರ್ಥ' ವಿನಿಮಯ, ವಾನಪ್ರಸ್ಥದಲ್ಲಿ ಅವಧೂತರಾಗಿ ವನ (ಶಾಸ್ತ್ರ) ವನ್ನು ಅಖಂಡ ಜ್ಞಾನಯಜ್ಞವನ್ನು, ಭಗವಂತನ 'ಕಾಮ' ಪರರಾಗಿ ಸನ್ಯಾಸಾಶ್ರಮದಲ್ಲಿ ವಿರಕ್ತಶಿಖಾಮಣಿಗಳಾಗಿ ತಪಸ್ಸಿದ್ಧಿ ಪಡೆಯಲು 'ಮೋಕ್ಷ' ಮಾರ್ಗದಲ್ಲಿ ನಡೆದರು. ಹೀಗೆ ನಾಲ್ಕು ಪುರುಷಾರ್ಥಗಳನ್ನು ಪಡೆದಿದ್ದ, ಮಹಿಮರಾಗಿ ವಿರಾಜಿಸಿದರು. ಅವರು ಬಾಳಿದ ಕೇವಲ 50 ವರ್ಷಗಳಲ್ಲಿ ಅವರ ಸಾಧನೆ ಅದರೈವತ್ತರಷ್ಟು ಸಾಧಕರಿಗೆ ಸಾಧನ ಮಾರ್ಗ

ವನ್ನು ತೋರಿ, ಸಜ್ಜನಿಕೆಯೇ ಸಜ್ಜನರನ್ನುದ್ಧರಿಸುವ ಸಂಜೀವಿನಿ ಎಂದು ಅನುಸರಿಸಿ ಸುಖತೀರ್ಥರ ಸುತೀರ್ಥವೇ ಸುಜ್ಞಾನವೆಂದು ಸುಜನರಿಗೆ ಭೋಧಿಸಿ, ಸರ್ವೋತ್ತಮನಾದ ಭಗವಂತನಿಂದ ಉತ್ತಮ ಸ್ಥಾನ ಪಡೆದ ಸುಚರಿತರಿವರು.

ಶ್ರೀವಿಷ್ಣುತೀರ್ಥರ ಮಾಧ್ವ ವಾಙ್ಮಯಕ್ಕೆ ನೀಡಿದ ಕೊಡುಗೆ ಅಪಾರ, ಇವರ ಗ್ರಂಥ ರಚನಾವ್ಯಾಪ್ತಿ ಚಿಕ್ಕಸ್ತೋತ್ರದಿಂದಾರಂಭಿಸಿ ಟಿಪ್ಪಣ್ಯಾದಿ ಉದ್ಗ್ರಂಥಗಳವರೆಗೆ ಹಬ್ಬಿದೆ. ವಿದ್ವಾಂಸರಿಂದ ಪಾಮರರವರೆಗೆ ಉಪಕಾರವಾಗಿದೆ. ಇವರ ಶಿಷ್ಯರು ಪ್ರಶಿಷ್ಯರು ಗ್ರಂಥಕಾರರಾದುದು ವಿಶೇಷ. ಶ್ರೀವ್ಯಾಸತತ್ವಜ್ಞತೀರ್ಥರಲ್ಲಿ ಶಾಸ್ತ್ರಾಧ್ಯಯನ ನಡೆಸಿದ ವಿಷ್ಣುತೀರ್ಥರು ಭಕ್ತಿಯಿಂದ ಮಾಡಿದ ರಮಾಸ್ತೋತ್ರದ ಪಾರಾಯಣದಿಂದ ತಾಮ್ರದ ನಾಣ್ಯಗಳನ್ನು ಚಿನ್ನವನ್ನಾಗಿ ಮಾಡಿ ಅದರ ಮಹತ್ವವನ್ನು ತೋರಿಸಿ ಆಗ ಪ್ರಾಪ್ತವಾಗಿದ್ದ ಭೀಕರ ಕ್ಷಾಮಡಾಮರ ಸಂದರ್ಭದಲ್ಲಿಯೂ ಆಶ್ರಯವಿತ್ತು ತನ್ನನ್ನು ನಂಬಿದವರನ್ನು ಸಲಹಿದರು. ಶ್ರದ್ಧೆಯಿಂದ ಮಾಡಿದ ನರಸಿಂಹ ಮಂತ್ರ ಜಪದಿಂದ ಗುರುಪುತ್ರನ ಅಪಮೃತ್ಯುವನ್ನು ಪರಿಹರಿಸಿದರು. ಮಹಾ ವೈರಾಗ್ಯನಿಧಿಗಳಾಗಿ ಅರಣ್ಯದಲ್ಲಿದ್ದು, ನೂರಾರು ಶಿಷ್ಯರನ್ನು ವಿದ್ವಾಂಸರನ್ನಾಗಿ ಮಾಡುತ್ತ ಅರಣ್ಯಕಾಚಾರ್ಯರೆಂದೇ ಜಗತ್ತಿನಲ್ಲಿ ಪ್ರಸಿದ್ಧರಾದರು.

ಆಧ್ಯಾತ್ಮಿಕ ಮಾರ್ಗದಲ್ಲಿ ಕುರುಡರಾದ ಜನರಿಗೆ ಷೋಡಶಿ, ಚತುದರ್ಶಿ, ಆಧ್ಯಾತ್ಮಿಕ ರಸರಂಜನಿ, ಮುಂತಾದ ಕೃತಿಗಳನ್ನು ರಚಿಸಿ,ನಿತ್ಯಭಾಗವತ ಸಂಪೂರ್ಣ ಪಾರಾಯಣ ಮಾಡಿದ ಪುಣ್ಯ ಬರಲು ಎಲ್ಲವನ್ನು ಸಂಗ್ರಹಿಸಿರಸಮಯವಾದ "ಭಾಗವತ ಸಾರೋದ್ಧಾರ" ಎಂಬ ಕೃತಿಯು ಸಾಧಕರಿಗೆ ಸೋಪಾನದಂತಿದೆ.ವೈಷ್ಣವ ವೇದಾಂತದ ರಸಋಷಿಗಳೆನಿಸಿ ಮೋದ ಪುರಿಯೆನಿಸಿದ ಮಾದನೂರಿನಲ್ಲಿ ಮಾಘ ಬಹಳ ಚತುದರ್ಶಿ ಶಿವರಾತ್ರಿಯಂದು ನಾರಾಯಣ ಧ್ಯಾನ ಮಗ್ನರಾದ 108 ಬಾರಿ ಸುಧಾ ಮಂಗಳ ಮಾಡಿದ ಶ್ರೀಮಂತ್ರಾಲಯ ಪ್ರಭುಗಳ ಅಂತರಂಗಭಕ್ತರು, ಶ್ರೀವಿಷ್ಣುತೀರ್ಥರು ತಮ್ಮ ಪರಮಾಪ್ತ ಶಿಷ್ಯರಾದ ಪೂರ್ವಾಶ್ರಮದ ಅಣ್ಣಂದಿರಾದ ಗೋಕಾವಿ ಅನಂತಾಚಾರ್ಯರಿಗೆ ನೀಡಿದ ಉಪದೇಶ ಪೂರ್ವಕ ರಾಯಸ ಬಹು ಪ್ರಸಿದ್ಧ ಮತ್ತು ಅನಂತಾಚಾರ್ಯರಿಗೆ ಅನುಗ್ರಹಿಸಿದ ಮೃತ್ತಿಕಾ ಬೃಂದಾವನವು ಇಂದಿಗೂ ಭಕ್ತರ ಅಭೀಷ್ಟಗಳನ್ನು ಪೂರೈಸುತ್ತಿದೆ.




**ಲೇಖಕರು :** ಶ್ರೀರಮಾಕಾಂತ ಶೆಣೈ
**ಪುಟಗಳು :** 160
**ಬೆಲೆ :** ರೂ 80/-
**ಪ್ರಕಾಶಕರು :** ಧರ್ಮಪ್ರತಿಷ್ಠಾನ ಟ್ರಸ್ಟ್‌॥ರಿ ಶ್ರೀರಾಂಪುರ ಮೈಸೂರು 570 023
**ಮೊಬೈಲ್ ನಂಬರ್ :** 9448145766 / 9739777793

## ವಿಷ್ಣು ಸಹಸ್ರನಾಮದ ಮಹತ್ವ ಸ್ತೋತ್ರ ಮತ್ತು ಪ್ರತೀ ನಾಮಾರ್ಥ ವಿವರಣೆ

ಶ್ರೀರಮಾಕಾಂತ ಶೆಣೈ ಮೈಸೂರು ಇವರ ವಿಷ್ಣು ಸಹಸ್ರನಾಮದ ಮಹತ್ವ. ಸ್ತೋತ್ರ ಮತ್ತು ಪ್ರತೀ ನಾಮಾರ್ಥ ವಿವರಣೆ ಕೃತಿಯ ಮುನ್ನುಡಿಯಲ್ಲಿ ಕರಣಿಕ ನರಹರಿಶರ್ಮ ಅವರು ಮಹಾತ್ಮ ಭೀಷ್ಮರು,ಶ್ರೀಕೃಷ್ಣ ಪರಮಾತ್ಮನ ಸಮ್ಮುಖದಲ್ಲಿ ಸ್ವತಃ ರಚಿಸಿ ಹೇಳಿದ ವಿಷ್ಣು ಸಹಸ್ರನಾಮದ ಪಾರಾಯಣವು ಬಹಳ ಮಹತ್ವದ್ದು. ಆಧುನಿಕ ಪೀಳಿಗೆಯವರು ಆಧ್ಯಾತ್ಮ ಹಾಗೂ ನೈತಿಕ ಶಿಕ್ಷಣದ ಕೊರತೆಯಿಂದ ಸಂಸ್ಕಾರ ಹಾಗೂ ಮೌಲ್ಯಗಳಿಂದ ದೂರವಾಗಿದ್ದಾರೆ. ಹಾಗಾಗಿ ಸನಾತನ ಧರ್ಮ ರಕ್ಷಣೆ ಹಾಗೂ ಸಂಸ್ಕಾರ ಸಿದ್ಧಿಗೆ ಇಂತಹ ಅರ್ಧಾನುಸಂಧಾನ ಪಾರಾಯಣ ಗ್ರಂಥಗಳು ಬಹಳ ಸಹಕಾರಿಯಾಗಿದೆ ಎಂದಿದ್ದಾರೆ. ಈ ಕೃತಿಯಲ್ಲಿ ಶ್ರೀವಿಷ್ಣು ಸಹಸ್ರನಾಮ ಮಹತ್ವ ಮತ್ತು ವಿಷ್ಣು ಸಹಸ್ರನಾಮ ಪೂರ್ವ ಪೀಠಿಕೆ, ಶ್ರೀವಿಷ್ಣು ಸಹಸ್ರನಾಮ ಫಲಶೃತಿ, ಶ್ರೀವಿಷ್ಣು ಸಹಸ್ರನಾಮ ಸ್ತೋತ್ರ, ಶ್ರೀ ವಿಷ್ಣುಸಹಸ್ರನಾಮ ಪ್ರತೀ ನಾಮಾರ್ಥ ವಿವರಣೆ-ಎಂಬ ಐದು ಭಾಗಗಳಿವೆ. ಲೇಖಕರು ಶ್ರೀಶಂಕರಾಚಾರ್ಯರ ವಿಷ್ಣು ಸಹಸ್ರನಾಮವನ್ನು ಪಾರಾಯಣ ಮಾಡಿ ಸಜ್ಜನರ ಸಂಗ ಮಾಡಬೇಕು ಶ್ರೀರಾಮಾನುಜಾಚಾರ್ಯರ ವಿಷ್ಣು ಸಹಸ್ರನಾಮದ ಪ್ರತೀ ನಾಮವೂ ಭಗವಾನ್ ವಿಷ್ಣುವಿನ ಗುಣ ವಾಚಕಗಳು,ಶ್ರೀಮಧ್ವಾಚಾರ್ಯರ ಶ್ರೀ ವಿಷ್ಣುವಿನ ಸಹಸ್ರನಾಮ ಪಾರಾಯಣ ಭಕ್ತಿ ಮಾರ್ಗದಿಂದ ಮುಕ್ತಿ ಪಡೆಯಲು ಸಾಧನ ಎಂಬ ಮಾತುಗಳನ್ನು ಉಲ್ಲೇಖಿಸಿದ್ದಾರೆ.

ವಿಶ್ವಂ ಎಂದರೆ ಸರ್ವಜ್ಞನೂ ಸರ್ವವಿದನೂ, ಜಗತ್ಕಾರಣನೂ ಆದ ಪರಮಾತ್ಮನು ವಿಷ್ಣುಃ ಎಂದರೆ ಸರ್ವ ವ್ಯಾಪಕನೂ ಅನಂತನೂ ದೇಶಕಾಲ ಪರಿಚ್ಛೆದವಿಲ್ಲದವನು, ಭೂತ ಭವ್ಯಭವನ್ನಾಥಃ ಎಂದರೆ ಹಿಂದೆ ಹುಟ್ಟಿರುವ ಇಂದು ಹುಟ್ಟುತ್ತಿರುವ ಮತ್ತು ಮುಂದೆ ಹುಟ್ಟಲಿರುವ ಸಮಸ್ತ ಜೀವಿಗಳಿಗೆ ಒಡೆಯನಾಗಿರುವವನು, ತ್ರಿನಾಮಾ ಎಂದರೆ ದೇವವ್ರತ ಎಂಬ ಹೆಸರಿನ ಮೂರು ಸಾಮ ಶೃತಿಗಳಿಂದ ಚೆನ್ನಾಗಿ ಸ್ತುತಿಸಲ್ಪಟ್ಟವನು. ಸರ್ವ ಪ್ರಹರಾಣಾಯುಧಃ ಎಂದರೆ ಪ್ರಹಾರ ಮಾಡಲು ಯೋಗ್ಯವಾದ ಎಲ್ಲಾ ಆಯುಧಗಳನ್ನು ಹೊಂದಿದವನು. ಹೀಗೆ 107 ಶ್ಲೋಕಗಳಲ್ಲಿನ ಒಂದು ಸಾವಿರ ಹೆಸರುಗಳನ್ನು ಬಹಳ ಸರಳ ಹಾಗೂ ಅರ್ಥವತ್ತಾಗಿ ದಾಖಲಿಸಿ, ವಿಷ್ಣು ಸಹಸ್ರನಾಮ ಕನ್ನಡಿಗರ ಮನೆ ಮನ ಮುಟ್ಟುವಂತೆ ಮಾಡಿದ್ದಾರೆ.

- ಡಾ॥ ಪ್ರದೀಪ್ ಕುಮಾರ್ ಹೆಬ್ರಿ
98440 18457



## ಫೆಬ್ರವರಿ ತಿಂಗಳ
# ರಾಶಿ ಫಲಗಳು



**ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ**

**ಅನುವಾದ- ಕೆ.ಎನ್.ಎಸ್**

**ಮೇಷ**

ಈ ರಾಶಿಯವರಿಗೆ ಜನ್ಮರಾಶಿಯಲ್ಲಿ ರಾಹು, ದ್ವಿತೀಯದಲ್ಲಿ ಕುಜನು ಇತರರೊಂದಿಗೆ ಸಂಯಮದೊಂದಿಗೆ ವರ್ತಿಸಲು ಸೂಚಿಸುತ್ತದೆ. ಕುಟುಂಬ ವಿಷಯಗಳಲ್ಲಿ ವೃತ್ತಿ ಉದ್ಯೋಗ ವಿಷಯಗಳಲ್ಲಿ ಆದಷ್ಟು ಜಾಗ್ರತೆವಹಿಸುವುದು ಅಗತ್ಯ. ಇತರರನ್ನು ಗೌರವಿಸುವುದರೊಂದಿಗೆ ಗೌರವವನ್ನು ಉಳಿಸಿಕೊಳ್ಳಬೇಕಾಗಿ ಬರುವುದು. ಧನಾದಾಯದೊಂದಿಗೆ ಖರ್ಚುವೆಚ್ಚಗಳು ಸಹಾ ಬೆಳೆಯುತ್ತವೆ.

**ವೃಷಭ**

ಸರದಿಯಲ್ಲಿ ಮುಂದೆ ಸಾಗುವಿರಿ. ಧನ ಸಂಗ್ರಹಣೆ ಮಾಡುವಿರಿ. ಕಾರ್ಯಸಿದ್ಧಿ, ಸಂತೋಷ, ಅಧಿಕಾರವೃದ್ಧಿ, ಗೃಹೋಪಕರಣ ವಸ್ತುಗಳನ್ನು ಕೊಳ್ಳುವಿಕೆ, ದೂರ ಸ್ಥಳದಲ್ಲಿರುವ ಸಂತಾನದಿಂದ ಶುಭವಾರ್ತೆ ಕೇಳುವಿರಿ. ವ್ಯವಸಾಯ ವ್ಯಾಪಾರಗಳು ಕೂಡಿ ಬರುತ್ತದೆ.

**ಮಿಥುನ**

ಆಕಸ್ಮಿಕ ಧನಲಾಭಗಳು ಒದಗಿ ಬರುತ್ತದೆ. ಧನಧಾನ್ಯ ವಸ್ತ್ರಲಾಭಗಳು ಧನವೃದ್ಧಿ, ಶರೀರದಲ್ಲಿ ನಿರಾಳವಾದ ಉತ್ತಮ ಆರೋಗ್ಯ, ಮನೆಯ ಸಂಪ್ರದಾಯಗಳ ಆಚರಣೆ, ಗುರುಭಕ್ತಿ, ಯತ್ನ ಕಾರ್ಯಸಿದ್ಧಿ, ಪುಣ್ಯ ಕ್ಷೇತ್ರಗಳ ಸಂದರ್ಶನ. ಆಚಾರ ವ್ಯವಹಾರಗಳ ಪಾಲನೆ, ಸೌಖ್ಯ.

**ಕರ್ಕಾಟಕ**

ಗುರುಬಲವಿದೆ ಸಂತಾನ ವಿಷಯದಲ್ಲಿ ಉನ್ನತಿ ಮದುವೆ ವಿಚಾರಗಳಲ್ಲಿ ಶುಭಯೋಗಗಳಿಗೆ ಶ್ರೀಕಾರ ಹಾಡಲಿದ್ದೀರಿ. ಬಂಧು - ಮಿತ್ರರ ಕೂಟ, ಮನೆಯಲ್ಲಿ ಕಲ್ಯಾಣಾದಿ ಶುಭಯೋಗಗಳಿಗೆ ಶುಭವ್ಯಯ. ನೀವು ಮಾಡುವ ಪ್ರತಿ ಕೆಲಸಕ್ಕೆ ಮೇಲಿನ ಅಧಿಕಾರಿಗಳಿಂದ, ಬಂಧು - ಮಿತ್ರರಿಂದ ಪ್ರೋತ್ಸಾಹವಿರಲಿದೆ. ಸರಿಯಾದ ಸಮಯಕ್ಕೆ ಸರಿಯಾದ ನಿರ್ಣಯ ಒದಗಿ ಬರುತ್ತದೆ.

**ಸಿಂಹ**

ಕ್ರಮೇಣ ದೋಷಗಳು ತೊಲಗುತ್ತವೆ. ನಿರಂತರವಾಗಿ ಆರೋಗ್ಯ. ಸ್ತ್ರೀಧನಲಾಭಗಳು, ಆದಾಯವು ಹಿನ್ನಡೆಯಲ್ಲಿದೆ. ಯೋಗಾಭ್ಯಾಸದಲ್ಲಿ ಮುಂತಾದವುಗಳಲ್ಲಿ ಶ್ರದ್ಧೆವಹಿಸಿ, ಒಳ್ಳೆಯ ಕ್ರಮಶಿಕ್ಷಣ ಒದಗಿ ಬಂದು ತೇಜೋವಂತರಾಗಿ ಹೊರಬರುವಿರಿ.

**ಕನ್ಯ**

ಶುಭಯೋಗಗಳು ಕೂಡಿ ಬರುವುವು. ಸ್ವಬುದ್ಧಿಯಿಂದ ಮಾಡಿದ ಕೆಲಸಗಳು ಸಿದ್ಧಿಯಾಗಿ ಧನವೃದ್ಧಿ ಹೆಸರು ಖ್ಯಾತಿಗಳು ಕೂಡಿ ಬರುವುವು. ತಾಯಿಗೆ ಸೌಖ್ಯ. ಸರ್ವಾಂಗಗಳಲ್ಲಿ ಉಷ್ಣತಾಪಗಳು ಉಂಟಾಗಲಿವೆ. ಆಕಸ್ಮಾತ್ತಾಗಿ ಕಲಹಗಳುಂಟಾಗುವ ಅವಕಾಶಗಳಿಲ್ಲದೇ ಇಲ್ಲ. ನೂತನ ವಸ್ತು ವಸ್ತ್ರ ಲಾಭಗಳು ಪಡೆಯುವಿರಿ.

**ತುಲಾ**

ವ್ಯವಹಾರ ಪ್ರತಿಬಂಧಕಗಳು, ಕೋರ್ಟು ವ್ಯವಹಾರಗಳಲ್ಲಿ ಪ್ರತಿವಾದಿಗಳು ಏರ್ಪಡುವುವು. ಎಲ್ಲಿಯ ವ್ಯವಹಾರಗಳು ಅಲ್ಲೇ ನಿಂತು ಬಿಡುತ್ತವೆ. ಗೃಹ ನಿರ್ಮಾಣಗಳು ಕೂಡಿ ಬರಲಾರವು. ಕಷ್ಟದಲ್ಲಿ ಸಿಲುಕಿರುವವರಿಗೆ ಸಹಾಯ ಹಸ್ತವನ್ನು ನೀಡುವುದು ಮೇಲು.

**ವೃಶ್ಚಿಕ**

ಗೃಹ ನಿರ್ಮಾಣಗಳು ಕೂಡಿ ಬರುತ್ತದೆ. ಗತದಲ್ಲಿ ನಿಂತು ಹೋದ ಕೆಲಸಗಳೆಲ್ಲಾ ಸುಲಭದಲ್ಲಿ ಸಾಗಿ ಹೋಗುತ್ತದೆ. ಪುತ್ರಲಾಭವುಂಟಾಗಳಿದೆ. ನೂತನ ವಧು -ವರರಿಗೆ ಪುತ್ರಾಗಮನ, ಕುಟುಂಬ ಅಭಿವೃದ್ಧಿಗೊಳ್ಳಲಿದೆ. ಗೃಹಸ್ಥಿತಿ ಅನುಕೂಲಕರ. ವಿದ್ಯೆ ವಿಷಯಗಳಲ್ಲಿ ಪಟ್ಟುಬಿಡದೇ ಪರಿಶೋಧನೆಗಳನ್ನು ಮಾಡಿದಲ್ಲಿ ವಿಜಯವಾಗಲಿದೆ.

**ಧನಸ್ಸು**

ಗೃಹ ನಿರ್ಮಾಣಕ್ಕೆ ಶ್ರೀಕಾರ ಹಾಡಲಿದ್ದೀರಿ. ಧನ ವಿಷಯಗಳಲ್ಲಿ ಶ್ರದ್ಧೆ ಅತ್ಯಾವಶ್ಯಕ. ವಾಗ್ಭೂಷಣವೇ ಭೂಷಣ. ಇತರರನ್ನು ಗೌರವಿಸಬೇಕೆಂಬ ನಿಮ್ಮ ಮುಖ್ಯ ಆಶಯ ನಿಮ್ಮನ್ನು ಉನ್ನತ ಶಿಖರಕ್ಕೇರಿಸುತ್ತದೆ. ಸರಿಯಾದ ಕಡೆ ಇತರರನ್ನು ಪ್ರಭಾವಿಸುವಂತೆ ಗಂಭೀರವಾಗಿ ಮಾತನಾಡಿ ನಾಯಕತ್ವದ ಲಕ್ಷಣಗಳನ್ನು ಹೊಂದುವಿರಿ.

**ಮಕರ**

ತಾರ್ಕಿಕವಾದ ತಿಳುವಳಿಕೆಗಳಿಂದ ಹೊಸದಾದ ಆದಾಯ ಮಾರ್ಗಗಳನ್ನು ಪಡೆದುಕೊಳ್ಳುವಿರಿ. ನಿಮ್ಮ ಸಂಸ್ಥೆಗಳನ್ನು ಶ್ರದ್ಧೆಯಿಂದ ನಡೆಸಿ ಎಲ್ಲರ ಮನ್ನಣೆಯನ್ನು ಪಡೆಯುವಿರಿ. ಗೃಹಸ್ಥಿತಿ ಮಿಶ್ರವಾಗಿದೆ. ಆರೋಗ್ಯದ ಮೇಲೆ ಶ್ರದ್ಧೆ ಅಗತ್ಯವಾಗಿದೆ. ಲಾಭಗಳಿಂದ ಲಾಭ ಗಳಿಸುವಿರಿ. ಇತರರಲ್ಲಿ ಕ್ರೋಧದಿಂದ ವರ್ತಿಸುವುದು ಒಳ್ಳೆಯದಲ್ಲ.

**ಕುಂಭ**

ವಿದ್ಯಾರ್ಥಿಗಳು ಪ್ರತಿಭೆಯಿಂದ ಮೆರೆಯುವರು. ಇತರ ದೇಶಕ್ಕೆ ಹೋಗುವ ಅವಕಾಶಗಳು ಕೂಡಿ ಬರುತ್ತವೆ. ಗೃಹದಲ್ಲಿನ ಶುಭ ಕಾರ್ಯಗಳು ಕೂಡಿ ಬರುತ್ತವೆ. ಸ್ಪರ್ಧೆಗಳಲ್ಲಿ ಸರದಿಯಲ್ಲಿ ವ್ಯೂಹಗಳನ್ನು ಬೇಧಿಸುವಿರಿ. ಕಾರ್ಯಜಯವಾಗಲಿದೆ. ಅರ್ಧಾಷ್ಟಮ ಕುಜ ಸ್ತಂಭನದಿಂದಾಗಿ ಹಲವು ವ್ಯವಹಾರ ಪ್ರತಿಬಂಧಕಗಳಿರುತ್ತವೆ. ಅಧಿಕಾರಿಗಳಿಂದ ಬಾಧೆಗಳಿರುತ್ತವೆ. ವ್ಯವಸಾಯ ಅನುಕೂಲಕರವಾಗಲಿದೆ.

**ಮೀನ**

ಶುಭಕಾರ್ಯ ನಿರ್ವಹಣೆ, ಎಲ್ಲರಿಂದ ಮನ್ನಣೆ ಪಡೆಯುವಿರಿ. ಸಮಸ್ತೈಶ್ವರ್ಯಗಳು ಉಂಟಾಗಲಿವೆ. ಸಮಾಜದಲ್ಲಿ ನಿಮ್ಮ ಮಾತಿಗೆ ನಿಲುವು ನಿಮ್ಮನ್ನು ಗುರುತಿಸಿಕೊಳ್ಳುವಂತೆ ಮಾಡುತ್ತದೆ. ನಿಮ್ಮ ವ್ಯವಹಾರ ಧೋರಣೆ ಉತ್ತಮವಾದುದು. ಇತರರನ್ನು ದಯೆಯಿಂದ, ಪ್ರೇಮದಿಂದ ನೋಡುವುದರಿಂದ ಇದು ನಿಮಗೆ ಸಾಧ್ಯವಾಗಲಿದೆ. ಸ್ಥಿರಾಸ್ತಿಗಳ ಮೊತ್ತ ಗಣನೀಯವಾಗಿ ಬೆಳೆಯುತ್ತದೆ.

ಧಾರಾವಾಹಿ

# ಹರಿಕಥಾಮೃತಸಾರ ಮಹಿಮೆ ಬಲು ಅಪಾರ



-ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಖಂಡಕಿ
8059436752

ಹರಿಕಥಾಮೃತಸಾರದಲ್ಲಿ ಮಂಗಳಾಚರಣದಲ್ಲಿ ದೇವತಾ ತಾರತಮ್ಯ ವರ್ಣನೆ ಇದ್ದರೆ. ಕರುಣಾಕರ ಸಂಧಿಯಲ್ಲಿ ಭಗವಂತನ ಕಾರುಣ್ಯ ತಿಳಿಸಿದರೆ ವ್ಯಾಪ್ತಿ ಸಂಧಿಯಲ್ಲಿ ಶ್ರೀ ಹರಿಯ ಸಕಲ ಚರಾಚರದಲ್ಲಿ ವ್ಯಾಪಿಸಿ ಅವನಿಲ್ಲದೆ ಇಲ್ಲದ ಯಾವ ಸ್ಥಳವು ಇಲ್ಲ ಎಂದು ವ್ಯಾಪ್ತಿ ಸಂಧಿಯಲ್ಲಿ ಹೇಳಿದ್ದಾರೆ. ಇನ್ನು.ನಾಲ್ಕನೇ ಸಂಧಿಯಾದ ಭೋಜನ ಸಂಧಿ ಇದರಲ್ಲಿ 30 ನುಡಿಗಳು ಇವೆ. ಇನ್ನು ಮುಂದೆ ಓದಿ...

ಬ್ರಹ್ಮಾಂಡದಲ್ಲಿ ಸಮಸ್ತ ಚೇತನರಿಗೆ ತುಷ್ಟಿಪುಷ್ಟಿ ಒದಗಲು ಆಹಾರ ಅತ್ಯವಶ್ಯಕ. ಹರಿಕಥಾಮೃತಸಾರ ನಾಲ್ಕನೇ ಸಂಧಿಯಾದ ಭೋಜನ ಸಂಧಿಯಲ್ಲಿ ನಾವು ಉಣ್ಣುವ ಆಹಾರದ ಚಿಂತನೆಯ ಬಗ್ಗೆ ಹೇಳಿದ್ದಾರೆ. ಆಹಾರದಲ್ಲಿ ಭಗವಂತನ ಚಿಂತನೆ ಮಾಡಿದರೆ, ನಕಾರಾತ್ಮಕ ಶಕ್ತಿಗಳ ಪ್ರಭಾವ ಇರುವುದಿಲ್ಲ. ಹರಿಯ ರೂಪಗಳು ಪಂಚಭೂತಗಳಿಂದ ಮತ್ತು ಪಂಚ ಕೋಶಗಳು ಮತ್ತು ಪಂಚ ಪ್ರಾಣಗಳಿಂದಲೇ ಕೂಡಿದ ಈ ಶರೀರದ ಕಾರ್ಯ ಪಂಚರೂಪ ಭಗವಂತನಿಂದಲೇ ನಡೆಯುವುದು ಹೀಗೆ ಈ ಸಂಧಿಯಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ.

"ವನಜಾಂಡದೊಳ್ಳು ಉಳ್ಳ ಅಖಿಳ ಚೇತನರು ಭುಂಜಿಪ
ಚತುರವಿಧ ಭೋಜನಪದಾರ್ಥದಿ ಚತುರವಿಧ ರಸರೂಪ ತಾನಾಗಿ
ಮನಕೆ ಬಂದಂತೆ ಉಂಡು ಉಣಿಸಿ ಸಂಹನನಕೆ ಉಪಚಯ
ಕರುಣಕೆ ಆನಂದ ಅನಿಮಿಷರಿಗೆ ಆತ್ಮ ಪ್ರದರ್ಶನ ಸುಖವನೀವ ಹರಿ ॥1॥

ಚೇತನರು ಮಾಡುವ ಭೋಜನ ಚತುರ್ವಿಧ ರಸಗಳು ನಾಲ್ಕು ವಿಧ ರಸಗಳು ಖಾದ್ಯ, ಚೋದ್ಯ, ಪೇಯ, ಲೇಹ್ಯ, ಈ ರಸಗಳಲ್ಲಿ ಭಗವಂತ ನಾಲ್ಕು ವಿಧ ರೂಪದಲ್ಲಿದ್ದು ತಾನುಂಡು ಸಕಲರಿಗೂ ಉಣಬಡಿಸುತ್ತಾನೆ ಭಗವಂತ ನೀರಿನಲ್ಲಿ ಇದ್ದು ನಮ್ಮ ದೇಹದೊಳಗೆ ಒಟ್ಟಾರೆ ೭೨೦೦೦ ನಾಡಿಗಳಿದ್ದು ಬಲ ಭಾಗದ ೩೬೦೦೦ ನಾಡಿಗಳಲ್ಲಿ ಹಗಲಿಗೆ ಸ್ವರ ಪ್ರತಿಪಾದ್ಯ ಪುರುಷರೂಪನಾಗಿ ಹಾಗೆ ಎಡ ಭಾಗದಲ್ಲಿ ೩೬೦೦೦ ನಾಡಿಗಳಲ್ಲಿ ರಾತ್ರಿಗೆ ವ್ಯಂಜನ ಪ್ರತಿಪಾದ್ಯನಾಗಿರುವನು. ಹಗಲು ರಾತ್ರಿಗಳಲ್ಲಿ ನಮ್ಮನ್ನು ಸಲಹುತಿರುವನು.

ನೀರಿನಲ್ಲಿ 6 ರಸದ ರೂಪದಲ್ಲಿ ಎಂದರೆ ಮಧುರ (ಸಿಹಿ), ಲವಣ (ಉಪ್ಪು) ಅಮ್ಲ (ಹುಳಿ) ತಿಕ್ತ (ಒಗರು) ಕಟು (ಖಾರ), ಕಷಾಯ (ಕಹಿ) ಈ ರೀತಿಯಲ್ಲಿ ಭಗವಂತ ಕ್ರಮವಾಗಿ ಇರುತ್ತಾನೆ "ಸಾರ" ಎಂದರೆ ಕ್ಷೀರಾದಿಗಳು "ಅಸಾರ" ಎಂದರೆ ತೃಣಾದಿಗಳು "ನೀತ" ಎಂದರೆ ಧಾನ್ಯಾದಿಗಳು .

"ಅನೀತ" ಎಂದರೆ ಪಾನಾದಿ ರೂಪದಲ್ಲಿ "ಪ್ರಚುರ' ಎಂದರೆ ಸಕ್ಕರೆ ಅಥವಾ ಉಪ್ಪಿನಲ್ಲಿದ್ದು, ಪ್ರತಿ ಅಗಳಿನಲ್ಲಿ "ಖಂಡ" ರೂಪದಿಂದ ಇರುತ್ತಾನೆ.ಅಖಂಡ ಎಂದರೆ ಒಟ್ಟಾಗಿ ಭೋಜ್ಯ ಪದಾರ್ಥದಲ್ಲಿದ್ದು ತ್ರಿವಿಧ ಜೀವರ ದೇಹದಲ್ಲಿ 72000 ನಾಡಿಗಳಲ್ಲಿ 72000 ಸಾವಿರ ಭಗವದ್ರೂಪದಲ್ಲಿ ಶ್ರೀ ಹರಿಯು ಬೃಹತಿ ಎಂಬ ನಾಮದಿಂದ ಅಖಂಡ ರೂಪದಿಂದ ಇರುತ್ತಾನೆ.

ಕ್ಷೀರಾದಿಗಳಲ್ಲಿನ ಹರಿಯರೂಪಗಳನ್ನೂ ತಿಳಿಸಿದ್ದಾರೆ.

ಅಂದರೆ ವಿಷದ (ಹಾಲಿನಲ್ಲಿ ೩೫)

ಸ್ಥಿರ (ತುಪ್ಪದಲ್ಲಿ ೨೯), ತೀಕ್ಷ್ಣ (ಬೆಲ್ಲದಲ್ಲಿ ೫೧೦೧)

ನಿರಹರ (ಹಣ್ಣುನಲ್ಲಿ ೨೮೨೫) ಆಯಾ ಪದಾರ್ಥಗಳಲ್ಲಿ

ಶ್ರೀಹರಿಯ ಚಿಂತನೆ ಮಾಡಬೇಕು ಹರಿಯ ರೂಪಗಳನ್ನು ಆಯಾ ವ್ಯಂಜನಾಕ್ಷರೈ

ಕಪಿಲನರಹರಿ ಭಾರ್ಗವ ತ್ರಯ
ವಪುಷ ನೇತ್ರದಿ ನಾಸಿಕಾಸ್ಯದಿ
ಶಫರನಾಮಕ ಜಿಹ್ವೆಯಲಿ ದಂತದಲಿ ಹಂಸಾಖ್ಯ
ತ್ರಿಪದಿಪಾದ್ಯ ಹಯಾಸ್ಯ ವಾಚ್ಯ ದೊಳಪರಿಮಿತ ಸುಖ ಪೂರ್ಣ ಸಂತತ
ಕೃಪಣರೊಳಗಿದ್ದವರವರ ರಸ ಸ್ವೀಕರಿಸಿ ಕೊಡುವ ॥೭॥

ಸಾರಭೋಕ್ತನಾದ ಭಗವಂತ ನೈವೇದ್ಯವನ್ನು "ಕಪಿಲ" ರೂಪನಾಗಿ "ಭೋಜ್ಯ" ಪದಾರ್ಥವನ್ನು ನೋಡುವನು.

"ನರಸಿಂಹ" ರೂಪದಿಂದ ಮೂಗಿನಿಂದ ಆಘ್ರಾಣಿಸುತ್ತಾ ಮಾಡುತ್ತಾನೆ. "ಪರಶು ರಾಮ "ರೂಪದಿಂದ ಸ್ವೀಕರಿಸುತ್ತಾನೆ. "ಮತ್ಸ್ಯ ರೂಪದಿಂದ ನಾಲಗೆಯಿಂದ ಭೋಜ್ಯ ಸ್ವೀಕಾರ "ಹಂಸ" ರೂಪದಿಂದ ಹಲ್ಲಿನ ಅಗಿಯುವುದು ಮಾಡುತ್ತಾನೆ. ಹಯಗ್ರೀವ ರೂಪದಿಂದ ಜನರ ಆಡುವ ಮಾತಿನಲ್ಲಿ ಇರುತ್ತಾನೆ.

"ಅಗಣಿತಾತ್ಮ ಸುಭೋಜನ ಪದಾ
ರ್ಥಗಳ ಒಳಗೆ ಅಖಂಡವಾದೊಂ
ದಗಳಿನೊಳನಂತಾಂಶದಿಂದಲಿ ಖಂಡನೆಂದೆನಿಸಿ ।
ಜಗದಿ ಜೀವರ ತೃಪ್ತಿ ಪಡಿಸುವ
ಸ್ವಗತ ಭೇದ ವಿವರ್ಜಿತನ
ಈ ಬಗೆಯ ರೂಪನರಿತು ಭುಂಜಿಸಿ ಅರ್ಪಿಸುವನಡಿಗೆ ॥೧೧॥

ಭೋಜನ ಪದಾರ್ಥಗಳಲ್ಲಿ ಮತ್ತು ಪ್ರತಿ ಅಗಳಿನಲ್ಲಿ ಅಪರಮಿತ ಸ್ವರೂಪನಾಗಿ ಇರುತ್ತಾನೆ. ಹೀಗಾಗಿ ಭೋಜನ ಮಾಡುವಾಗ ಭಗವಂತನನ್ನು ಸ್ಮರಿಸಿ, ಭೋಜನ ಕರ್ಮವನ್ನು ಸಮ ರ್ಪಿಸಬೇಕು.

ಭಗವಂತ ವಾಸುದೇವ ರೂಪನಾಗಿ ಒಳಗು ಹೊರಗು ಇದ್ದು ನಮ್ಮನ್ನು ಸಲಹುತ್ತಾನೆ. ಈ ಭೋಜನ ಸಂಧಿಯಲ್ಲಿ ಅನ್ನದಲ್ಲಿ ವಾಸುದೇವನಾಗಿ, ಭಕ್ಷ್ಯದಲ್ಲಿ ಸಂಕರುಷಣನಾಗಿ, ಪರಮಾನ್ನದಲ್ಲಿ ಕೃತೀಶ, ತುಪ್ಪದಲ್ಲಿ ಅನಿರುದ್ಧನ್ನಾಗಿ, ತರಕಾರಿಗಳಲ್ಲಿ ಉಪೇಂದ್ರನಾಗಿ ಹೀಗೆ ಪ್ರತಿಯೊಂದು ಭೋಜನ ಪದಾರ್ಥದಲ್ಲಿ ಪ್ರತ್ಯೇಕವಾಗಿ ಅಭಿಮಾನಿ ದೇವತೆಗಳ ನಿಯಾಮಕ ಭಗವದ್ರೂಪನಾಗಿದ್ದು ಸರ್ವತ್ರದಲ್ಲಿ ನಾರಾಯಣನಾಗಿರುವನು.

ನಮ್ಮ ದೇಹದಲ್ಲಿ ಪಂಚ ಕೋಶಗಳಿವೆ.

ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯಾ ಕೋಶ, ಆನಂದಮಯ ಕೋಶ. ಒಟ್ಟಾರೆ ಭಗವಂತ ಈ ಪಂಚ ಕೋಶಗಳಲ್ಲಿ 5400



ರೂಪಗಳಲ್ಲಿ ಇದ್ದಾನೆ. ಅನ್ನಮಯ ಕೋಶ ಅನ್ನರೂಪದಲ್ಲಿದ್ದು ಸಲಹುತ್ತಾ ಪ್ರಾಣಮಯ ಕೋಶದಲ್ಲಿ ಪ್ರಾಣ ನಾಮಕನಾಗಿ ಉಸಿರಾಟದ ರೂಪದಲ್ಲಿದ್ದು, ಮನೋಮಯ ಕೋಶದಲ್ಲಿ ಮನಸ್ಸಿನಲ್ಲಿದ್ದು ನಮಗೆ ಭಾವನೆಗಳನ್ನು ಹುಟ್ಟಿಸಿ ವಿಜ್ಞಾನಮಯ ಕೋಶದಲ್ಲಿ ವಿಷಯ ಪದಾರ್ಥಗಳ ಜ್ಞಾನ ಕೊಟ್ಟು ಆನಂದಮಯ ಕೋಶ ದಲ್ಲಿ ಅರಿವಿನ ಜ್ಞಾನ ಕೊಡುತ್ತಾನೆ. ಹೀಗೆ ಹರಿಕಥಾಮೃತಸಾರದ ೧೩, ೧೪,೧೭,೨೫,ನೇ ಪದ್ಯಗಳಲ್ಲಿ ಪಂಚಕೋಶಗಳ ಬಗ್ಗೆ ಇದೆ. ಇನ್ನು ಪಂಚ ಪ್ರಾಣಗಳಾದ ಪ್ರಾಣ, ಅಪಾನ,ವ್ಯಾನ,ಉದಾನ, ಸಮಾನಗಳಲ್ಲಿ ಒಟ್ಟಾರೆ ಹರಿಯ ರೂಪಗಳು ೧೭೧೧ ಇರುತ್ತಾನೆ.

"ತ್ರಿನವತಿ ಸುರೂಪಾ ತ್ಮಕನಿರು
ದ್ದನು ಸದಾ ಯಜಮಾನನಾಗಿ
ದ್ಧನಲ ಯಮ ಸೋಮಾದಿ
ಪಿತೃದೇವತೆಗಳಿಗೆ ಅನ್ನ

ನೆನಿಪನಾ ಪ್ರದ್ಯುಮ್ನ ಸಂಕರು
ಷಣ ವಿಭಾಗವ ಮಾಡಿಕೊಟ್ಟಂ
ಡುಣಿಪ ನಿತ್ಯಾನಂದ
ಭೋಜನದಾಯಿತು ಯರ್ಾಹ್ವ ॥೨೧॥

ಅನಿರುದ್ಧರೂಪಿ ಭಗವಂತನು 93 ರೂಪಗಳಿಂದ ಶ್ರಾದ್ಧ ಮಾಡುವವರಲ್ಲಿ ಇರುತ್ತಾನೆ. ಅನಲ,ಯಮ,ಸೋಮ, ವಸು ಅದಿತ್ಯ ರುದ್ರ ಮೊದಲಾದವರಲ್ಲಿ ಪ್ರದ್ಯುಮ್ನ ರೂಪದಿಂದ ದೇವಭಾಗ,ಪಿತೃಭಾಗ ಎಂದು ವಿಭಾಗ ಮಾಡಿ ಎಲ್ಲರಿಗೂ ಭೋಜನ ನೀಡಿ ತುರ್ಯ ನಾಮಕ ವಾಸುದೇವನು ತಾನು ಉಂಡು ಜೀವರಿಗೆ ಉಣಿಸುವನು.

ಶ್ರೀಹರಿಯು ಷಣ್ಣವತಿ ನಾಮದಿಂದ ಅಷ್ಟ ವಸುಗಳು ಏಕಾದಶ ರುದ್ರರು, ದ್ವಾದಶ ಆದಿತ್ಯರಲ್ಲಿ ನೆಲಸಿ ನಿಷ್ಕಲ್ಮವಾಗಿ ಮಾಡುವ ಪುಣ್ಯ ಕರ್ಮಗಳನ್ನು ಸ್ವೀಕರಿಸಿ ಪಿತೃಗಳಿಗೆ ಸುಖ ನೀಡುವನು. ಅನಿರುದ್ಧ ನಾಮಕನಾಗಿ 51 ವರ್ಣಗಳಲ್ಲಿ ॥ ಇಂದ್ರಿಯಗಳಲ್ಲೂ, 24 ತತ್ವಗಳಲ್ಲೂ 10 ಧಾತುಗಳಲ್ಲೂ ನೆಲೆಸಿ ಜೀವರನ್ನು ಸಂರಕ್ಷಣೆ ಮಾಡುವನು.

"ಐದು ಲಕ್ಷೆಂಭತ್ತತೊಂಭ
ತ್ತಾದ ಸಾವಿರದೇಳುನೂರ್ಮೆ
ಲ್ಯೆದು ರೂಪವಧರಿಸಿ
ಭೋಕ್ತ್ರಗ ಭೋಜ್ಯನೆಂದೆನಿಸಿ
ಶ್ರೀಧರಾದುರ್ಗಾರಮಣನ ಪಾ
ದಾದಿ ಶಿರ ಪರ್ಯಂತ ವ್ಯಾಪಿಸಿ
ಕಾದು ಕೊಂಡಿಹ ಸಂತತ
ಜಗನ್ನಾಥ ವಿಠಲನು ॥೩೦॥

ಶ್ರೀಭೂದುರ್ಗ ರಮಣನಾದ ಶ್ರೀಹರಿಯು ೫೮೫೫೦೦ ರೂಪಗಳನ್ನು ಧರಿಸಿ ಭೋಗಿಸುವನಲ್ಲಿಯೂ ಮತ್ತು ಭೋಜ್ಯಗಳಲ್ಲಿಯೂ ಇದ್ದು ಪಾದದಿಂದ ಶಿರಸ್ಸಿನ ಪರ್ಯಂತ ವ್ಯಾಪಿಸಿ ಭಕ್ತರನ್ನು ಕಾಯುತ್ತಿರುತ್ತಾನೆ.

ಈ ಭೋಜನ ಸಂಧಿಯಲ್ಲಿ ತೃಣಾದಿ ಜೀವರಲ್ಲಿ ಮತ್ತು ಅವರು ಮಾಡುವ ಭೋಜನ ದಲ್ಲಿ ಅನಂತ ರೂಪಗಳಲ್ಲಿದ್ದು ಸಲಹುವ ಬಗ್ಗೆ ಹೇಳಿದ್ದಾರೆ. ಚಿಂತನೆ ಏನೆಂದರೆ ಊಟ ಮಾಡುವಾಗ ಹೆಚ್ಚು ಮಾತಾಡದೆ ತಾಮಸವಿರದೆ ಪ್ರತಿಯೊಂದು ಕರ್ಮದಲ್ಲಿ ಭಗವಂತನನ್ನು ಕಾಣುತ್ತಾ ನಾ ಮಾಡುವ ಭೋಜನದಲ್ಲಿ ಭಗವಂತನಿಗೆ ಸಮರ್ಪಿಸಿ ಸ್ಮರಿಸುತ್ತಾ ಉಣ್ಣಬೇಕು ಎಂದು ನಾವುಗಳು ತಿಳಿಯಬೇಕು.

ಭೋಜನವನ್ನು ಶ್ರೀಹರಿಯ ರೂಪಗಳ ಚಿಂತನೆಯೊಂದಿಗೆ ಮಾಡಿದರೆ ಪಾಪ ಲೇಪ ಆಗುವುದಿಲ್ಲ ಸುಜೀವಿಯಾಗಿ ಸಾಧನ ಶರೀರ ಸಾರ್ಥಕ ಮಾಡಿಕೊಳ್ಳಬೇಕು.

ಮುಂದಿನ ಭಾಗದಲ್ಲಿ ವಿಭೂತಿ ಸಂಧಿ ಬಗ್ಗೆ ಹೇಳಿದ್ದಾರೆ.

ಭಗವಂತನ ಸನ್ನಿಧಾನ ಮತ್ತು ಮಹಿಮೆ ಯಶಸ್ಸು ಬಗ್ಗೆ ಹೇಳಿದ್ದಾರೆ.

**ಮುಂದುವರಿಯುವುದು....**




## ಡಿಸೆಂಬರ್ 2022 ತಿಂಗಳ ರಸಪ್ರಶ್ನೆಯ ಉತ್ತರಗಳು

5

1. ಭಗವದ್ಗೀತೆ
2. ಧನುರ್ಮಾಸ
3. ಕುಂಭಾಸಿ ಹತ್ತಿರ ಹೂವಿನಕೆರೆ
4. ದತ್ತಾತ್ರೇಯ
5. 15-09-1215
6. ವರಾಹಸ್ವಾಮಿ
7. ತಮಿಳು
8. ಭೂಮಿತಾಯಿ
9. ಮೇಲ್ಶೈಯಾರ್ ಶಯ್ಯನಹಳ್
10. ನರಕದ ಹಾದಿ
11. ರಾಯರು
12. ಶಿರಿಯ ತಿರುಮಡಲ್
13. ಬ್ರಹ್ಮ ಹತ್ಯಾದೋಷ
14. ಕಲ್ಲಿನಿಂದ
15. ತಿರುಪ್ಪಾವೈಜೀಯರ್

# ಸಂಸ್ಕೃತ ಕಲಿಯೋಣ...!!

## द्वाविंशः पाठः

## ಇಪ್ಪತ್ತೆರಡನೇಯ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

एतेषाम् = ಇವರ- ಇವರಿಗೆ आरात् = ದೂರದಲ್ಲಿ, ಹತ್ತಿರದಲ್ಲಿ केषाम् = ಯಾರ-ಯಾರಿಗೆ सकृत् = ಒಂದುಬಾರಿ

अञ्जनम् = ಕಾಡಿಗೆಯು कृत्वा = ಮಾಡಿ

भविष्यत् = ಭವಿಷ್ಯತ್‌ಕಾಲ

प्र. खादिष्यति = खादिष्यन्ति
ತಿನ್ನುತ್ತಾನೆ = ತಿನ್ನುತ್ತಾರೆ

म. खादिष्यसि = खादिष्यथ
ತಿನ್ನುತೀಯಾ =ತಿನ್ನುತ್ತೀರಾ

उ. खादिष्यामि = खादिष्यामः
ತಿನ್ನುತ್ತೇನೆ =ತಿನ್ನುತ್ತೇವೆ

### ಪ್ರಶ್ನೆ

1. परं मम पिता किं फलं खादिष्यति?
2. यूयम् एतद् फलं न खादिष्यथ किम्?
3. वयम् एतद् फलं न खादिष्यामः।
4. युष्मद् गृहे फलानि सन्ति वा?
5. एतेषां गृहे फलानि न सन्ति।
6. केषाम् अन्नं नास्ति? मम नास्ति।
7. किमर्थं नास्ति?
8. अस्मिन् दिने अस्मद् अनुजः पाकं नाकरोत्।
9. अहो! अस्मद् गृहे अस्ति खलु वेगेन स्नानं कृत्वा खादिष्यसि वा?
10. अस्तु खादिष्यमि परं कुत्र अस्ति?
11. अस्मद् गृहे अञ्जनं नास्ति।

### ಉತ್ತರ

1. ಆದರೂ ನನ್ನ ತಂದೆಯು ಯಾರ ಹಣ್ಣನ್ನು ತಿನ್ನಬಲ್ಲನು?
2. ನೀವೀ ಹಣ್ಣನ್ನು ತಿನ್ನಲಾರೆರಾ?
3. ನಾವು ಈ ಹಣ್ಣನ್ನು ತಿನ್ನಲಾರೆವು.
4. ನಿಮ್ಮ ಮನೆಯಲ್ಲಿ ಹಣ್ಣುಗಳಿವೆಯಾ?
5. ಇವರ ಮನೆಯಲ್ಲಿ ಹಣ್ಣುಗಳು ಇಲ್ಲ.
6. ಯಾರಿಗೆ ಅನ್ನವು ಇಲ್ಲ? ನನಗೆ ಇಲ್ಲ.
7. ಏಕೆ ಇಲ್ಲ?
8. ಇಂದು ನಮ್ಮ ತಮ್ಮನು ಅಡುಗೆ ಮಾಡಿಲ್ಲ.
9. ಅಯ್ಯೋ! ನಮ್ಮ ಮನೆಯಲ್ಲಿ ಇದ್ದೆ ತಾನೆ, ಬೇಗನೇ ಸ್ನಾನಮಾಡಿ ತಿನ್ನುವಿಯಾ?
10. ಹಾಗೆಯೇ ತಿನ್ನುವೆನು. ಆದರೇ ಎಲ್ಲಿದೆ?
11. ನಮ್ಮ ಮನೆಯಲ್ಲಿ ಕಾಡಿಗೆಯು ಇಲ್ಲ.

### ಪ್ರಶ್ನೆ

1. ನಾವು ಊಟ ಮಾಡಿ ಹಣ್ಣನ್ನು ತಿನ್ನುತ್ತೇವೆ.
2. ನೀನು ಆಲಸ್ಯ ಮಾಡಬೇಡ.
3. ಬೇಗನೇ ಸ್ನಾನ ಮಾಡಿ ಊಟ ಮಾಡು.
4. ನಮ್ಮ ಮನೆಯಲ್ಲಿ ಹಣ್ಣುಗಳು ಇಲ್ಲ.
5. ನಿಮ್ಮ ಮನೆಯಲ್ಲಿ ಅನ್ನವು ಇದ್ದರೆ ಊಟ ಮಾಡಿರಿ.
6. ಇಲ್ಲದಿದ್ದರೆ ಸುಮ್ಮನೆ ಇರಿ.
7. ಎಲೈ ಬ್ರಾಹ್ಮಣರೇ! ಏಕೆ ಭಿಕ್ಷಾಟನೆ ಮಾಡುವಿರಿ?
8. ಎಲೈ ಬಾಲಕನೇ ! ನಮ್ಮ ಮನೆಯಲ್ಲಿ ಹಣ್ಣುಗಳಿವೆ. ತಿನ್ನುವಿಯಾ?
9. ಯಾವ ಹಣ್ಣು ಇದೆ ?
10. ನಿನಗೇಕೆ ? ನಾನು ತಿನ್ನಬಲ್ಲೆನು.
11. ಕಾಡಿಗೆ ಎಲ್ಲಿದೆ?

### ಉತ್ತರ

1. वयं भोजनं कृत्वा फलं खादिष्यामः।
2. त्वम् आलस्यं मा कुरु।
3. झटिति स्नानं कृत्वा भोजनं कुरु।
4. अस्मद्गृहे फलानि न सन्ति।
5. युष्मद्गृहे अन्नम् अस्ति चेत् भोजनं कुरुत।
6. नोचेत् तूष्णीं स्त।
7. हे ब्राह्मणाः! किमर्थं भिक्षाटनं करिष्यथ?
8. अरे बालक! अस्मद्गृहे फलानि सन्ति खादिष्यसि किम्?
9. किं फलमस्ति?
10 तव किमर्थम्, अहं खादिष्यामि।
११.अञ्जनं कुत्रास्ति?

## ನೀತಿಕಥೆ

# ಅಂತರ್‌ದೃಷ್ಟಿ ವಿಕಸನಗೊಳ್ಳಲಿ

- ಎ.ಆರ್. ರಘುರಾಮ್

**ಸಾ**ಮಾನ್ಯರ ಪಾಲಿಗೆ ಭಗವಂತ ಕೊಟ್ಟಿರುವುದು ಎರಡು ಕಣ್ಣುಗಳನ್ನು ಮಾತ್ರ . ಆದರೆ ಕೆಲವು ಮಂದಿ ಅದೃಷ್ಟವಂತರಿಗೆ ಮೂರನೆಯ ಕಣ್ಣೊಂದು ಇರುತ್ತದೆ. ಅದರ ಸಹಾಯದಿಂದ ಸಾಮಾನ್ಯರಿಗೆ ಕಾಣದಿರುವ ವಸ್ತು ಸಂಗತಿಗಳನ್ನು ಕಾಣಲು, ಅನುಭವಿಸಲು ಅವರಿಗೆ ಸಾಧ್ಯವಾಗುತ್ತದೆ. ಇದ್ಯಾವುದು ಮೂರನೇ ಕಣ್ಣು ಎಂದು ಅಚ್ಚರಿಯೇ ?

ದಿನನಿತ್ಯವೂ ಅವರಿಗೆ ಎದುರಾಗುವ ಪರಿಚಿತ ದೃಶ್ಯಗಳಲ್ಲಿ, ಘಟನೆಗಳಲ್ಲಿ ಅಸಾಧಾರಣವಾದುದೇನನ್ನೋ ಅವರು ಕಾಣುತ್ತಾರೆ. ಅಂಥವರಿಗೆ ಆಕಾಶದಲ್ಲಿ ಹಾರುವ ಬೆಳ್ಳಕ್ಕಿಗಳ ಸಾಲಿನ ವಿನ್ಯಾಸ, 'ದೇವರು ರುಜು ಮಾಡಿದನು ಎನ್ನಿಸುತ್ತದೆ. ಬಿಳಿಮುಗಿಲು ಬಾನಿನ ಜಗುಲಿಯಲ್ಲಿ ಆಡುತ್ತಿರುವ ಮಗುವಿನಂತೆ ತೋರುತ್ತದೆ. ಹಕ್ಕಿಗಳ ಹಾಡು, ಗಿಡಗಂಟೆಗಳ ಕೊರಳಗಾನ ಎಂದು ಭಾಸವಾಗುತ್ತದೆ.ಹಾರುತ್ತಿರುವ ಗರುಡನ ನೆರಳು ಗಾಂಧೀಜಿಯ ಪ್ರತೀಕವೆನ್ನಿಸುತ್ತದೆ. ಗಾಳಿಯಲ್ಲಿ ತೇಲಿಬರುವ ಹಕ್ಕಿಯ ಗರಿಯೊಂದರ ಸ್ಪರ್ಶ ರಾಮಾಯಣವನ್ನೇ ಬಲಿಗಣ್ಣಿನೆದುರು ತೆರೆದಿಡುತ್ತದೆ. ಹೀಗೆ ರೂಢಿಗತವಾಗಿರುವ ಸಂಗತಿಗಳಲಿ ಹೊಸತನವನನ್ನು ಕಂಡು, ಅನುಭವಿಸಲು ಸಹಾಯ ಮಾಡುವ ಮೂರನೆಯ ಕಣ್ಣನ್ನು ಪ್ರತಿಭಾ ಚಕ್ಷು ಎನ್ನುತ್ತೇವೆ.ಪ್ರತಿಭಾ ಎನ್ನುವ ಸಂಸ್ಕೃತ ಪದದ ಅರ್ಥ ಹೊಳೆಯುವಿಕೆ ಎಂದು. ನಿತ್ಯ ಪರಿಚಯದಿಂದಾಗಿ ವಿಸ್ಮಯ, ಕುತೂಹಲಗಳ ಹೊಳಪನ್ನು ಕಳೆದುಕೊಂಡಿರುವ ವಸ್ತು - ಸಂಗತಿಗಳಲ್ಲಿ ಪ್ರತಿಭಾವಂತರಿಗೆ ಯಾವುದೋ ವಿಶಿಷ್ಟ ಹೊಸತನ ಗೋಚರಿಸುತ್ತದೆ. ಅತ್ಯಂತ ಸಹಜವೆನ್ನಿಸುವ ಘಟನೆಗಳಲ್ಲಿ ಹೊಸತೊಂದು ಅರ್ಥ ಹೊಳೆಯುತ್ತದೆ. ಪ್ರತಿಭೆಯ ಬೆಂಗಾವಲಿದ್ದಾಗ, ಭೃಂಗದ ಬೆನ್ನೇರಿ ಕಲ್ಪನಾ ವಿಲಾಸ ಚಿಮ್ಮಿ ಬರಲು ಸಾಧ್ಯವಾಗುತ್ತದೆ.

ಆದ್ದರಿಂದಲೇ ಪ್ರತಿಭೆಯನ್ನು ಭಾರತೀಯ ಕಾವ್ಯಮೀಮಾಂಸೆಯಲ್ಲಿ "ನವನವೋನ್ಮೇಷ ಶಾಲಿನೀ.." ಎಂದು ವರ್ಣಿಸಿದ್ದಾರೆ.

ಉನ್ಮೇಷ ಎಂದರೆ ಹೊಳೆಯುವಿಕೆ ಅಥವಾ ಅರಳುವಿಕೆ. ಜಡ ವಾಸ್ತವ ಸಂಗತಿಗಳಲ್ಲೂ ಹೊಸತನ ಅರಳಿಕೊಳ್ಳುವಂತೆ ಪ್ರಚೋದಿಸುವ ಶಕ್ತಿಯೇ ಪ್ರತಿಭೆ.

ಪ್ರತಿಭೆ ಎಂಬ ಈ ಮೂರನೇ ಕಣ್ಣು ಕವಿ, ಕಲಾವಿದ, ವಿಜ್ಞಾನಿ ತತ್ವಜ್ಞಾನಿ - ಎಲ್ಲರಿಗೂ ಅತ್ಯಂತ ಅಗತ್ಯವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರತಿಭೆಯ ದಿವ್ಯಸ್ಪರ್ಶದಿಂದ ಮೇಲ್ನೋಟಕ್ಕೆ ಕ್ಷುಲ್ಲಕವೆನ್ನಿಸುವ ವಸ್ತುಗಳೂ ಹೊಸ ವೈಭವದಿಂದ ಬೆಳಗುತ್ತದೆ.

ಪ್ರತಿಭೆಗೆ ಅಪೂರ್ವ ವಸ್ತುವಿನ ನಿರ್ಮಾಣದ ಸಾಮರ್ಥ್ಯವಿದೆ ಎನ್ನುತ್ತಾನೆ ಮಹಾದಾರ್ಶನಿಕ ಅಭಿನವಗುಪ್ತ. ಲೌಕಿಕದ ಒಡಲಲ್ಲಿ ಮರೆಯಾಗಿರುವ 'ಅಲೌಕಿಕತೆ' ಯನ್ನೂ, ವ್ಯಾವಹಾರಿಕೆಯಲ್ಲಿ ಹುದುಗಿರುವ ಪಾರಮಾರ್ಥಿಕತೆಯನ್ನೂ ಕಾಣಬೇಕಾದರೆ ಪ್ರತಿಭೆಯ ಸಹಕಾರ ಬೇಕು. ತ್ಯಾತ್ವಿಕ ಭಾಷೆಯಲ್ಲಿ ಹೇಳುವುದಾದರೆ, ಪ್ರತಿಭೆಯಿಂದಾಗಿ ಮನುಷ್ಯನಿಗೆ ಒಂದು ದಿವ್ಯದೃಷ್ಟಿ ಪ್ರಾಪ್ತವಾಗುತ್ತದೆ. ಇದನ್ನು ಪ್ರತಿಭಾ (ಇನ್ ಟ್ಯೂಷನ್) ಅಥವಾ ಅಂತರ್ ದೃಷ್ಟಿ ಎಂದೂ ಗುರುತಿಸುತ್ತಾರೆ.

ಶ್ರೀ ಕೃಷ್ಣ ತನ್ನ ವಿಶ್ವರೂಪವನ್ನು ತೋರಿಸುವಾಗ ಅರ್ಜುನನಿಗೆ ಕರುಣಿಸಿದ್ದು ಅಂಥದ್ದೇ ದಿವ್ಯದೃಷ್ಟಿ. ಅದರಿಂದಾಗಿ ಅರ್ಜುನನಿಗೆ ವಿರಾಟ್ ಪುರುಷನನ್ನು ಕಾಣಲು ಸಾಧ್ಯವಾಯಿತು. ವಸ್ತುಗಳ ಅಂತರಾಳದಲ್ಲಿರುವ ಆಧ್ಯಾತ್ಮಿಕ ಸೌಂದರ್ಯವನ್ನು ಕಾಣಬೇಕಾದರೆ ಇಂಥ ದಿವ್ಯದೃಷ್ಟಿ ಒದಗಿ ಬರಬೇಕು. ಅದಕ್ಕಾಗಿಯೇ ಉಪನಿಷತ್ತಿನಲ್ಲಿ,

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ ।

ತತ್ ತ್ವಂ ಪೂಷನ್ ಅಪಾವೃಣು ಸತ್ಯ ಧರ್ಮಾಯ ದೃಷ್ಟಯೇ....

(ಸತ್ಯದ ಮುಖವು ಚಿನ್ನದ ಮುಚ್ಚಳದಿಂದ ಮುಚ್ಚಲ್ಪಟ್ಟಿದೆ ಓ ಸೂರ್ಯನೇ ಅದನ್ನು ಸರಿಸು, ನಾನು ನಿನ್ನ ನಿಜರೂಪವನ್ನು ಕಾಣುವಂತಾಗಲಿ) ಎಂದು ಪ್ರಾರ್ಥಿಸಿರುವುದು.

ನಿತ್ಯದ ಬದುಕಿನಲ್ಲಿ ನಾವು ಇಂತಹಾ 'ದರ್ಶನ' ಗಳನ್ನು ಮಾಡುವ, ನೋಡುವ ಮನೋಸ್ಥಿತಿಯನ್ನು ರೂಢಿಸಿಕೊಂಡಾಗ ಸಾರ್ಥಕತೆಯತ್ತ ಸಾಗಲು ಸುಗಮವಾಗುತ್ತದೆ. ಶುಭ್ರ ಮುಂಜಾನೆಯ ಈ ಸಂದರ್ಭದಲ್ಲಿ ಭಗವಂತ ಎಲ್ಲರಿಗೂ ಇಂತಹಾ ದಿವ್ಯ ಅಂತರ್ ದೃಷ್ಟಿಯನ್ನು ಕರುಣಿಸಿ ಜಗತ್ತನ್ನು ಸುಂದರವಾಗಿ ನೋಡುವಂತೆ ಕೃಪೆ ತೋರಲಿ.



ಬಾ
ಲ
ವಿ
ನೋ
ದಿ
ನಿ

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......




ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...



ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



[illegible]

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | | | | |
|---|---|---|---|---|---|---|---|---|
| ಪ | ರ | ಡು | ವ | ಕೀ | ಗೆ | ಪ | ಜ್ಯಾ | ಮಾ |
| ಅ | ಕಾ | ಅಂ | ನೇ | ವ | ಅ | ತ್ | | ನೇ |

[illegible]

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

7



## ಕ್ವಿಜ್

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.02.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದ
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.



11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ.
ತಿರುಪತಿ : 517 507
ಆಂಧ್ರ ಪ್ರದೇಶ್

## ರಸಪ್ರಶ್ನೆಗಳು

| | ಉತ್ತರಗಳು |
|---|---|
| 1.ಲಿಂಗ ರೂಪಧಾರಣೆ ಮಾಡಿದ ದಿನವನ್ನು ಏನೆಂದು ಆಚರಿಸುತ್ತಾರೆ? | ...................... |
| 2. ವರೇಣ್ಯಂವರ ಎಂದರೇನು? | ...................... |
| 3. ಗಂಗಾ ಪುತ್ರ ಯಾರು? | ...................... |
| 4. ಕೋಪೇಶ್ವರ ದೇವಾಲಯ ಯಾವ ನದಿ ದಡದಲ್ಲಿದೆ? | ...................... |
| 5.ವೇದಾಂತ ದೇಶಿಕರ ಅವತಾರ ಯಾವುದು? | ...................... |
| 6. ಯಾವ ಹೂವು ಶಿವನ ಪೂಜೆ ಅರ್ಹವಲ್ಲ? | .................. |
| 7.ಯಾರೊಂದಿಗೆ ವೆಂಕಟನಾಥನ ವಿವಾಹವಾಯಿತು ? | .................. |
| 8. ಯಾವ ಪೀಠದ ಮೇಲೆ ಪದ್ಮಾಸನ ಹಾಕಿ ಕುಳಿತಿದ್ದಾನೆ? | .................. |
| 9.ತಿರುಮಲೆಯ ಆಲಯದೊಡನೆ ಸಂಬಂಧ ಹೊಂದಿದವರು ಯಾರು ? | .................. |
| 10.ಅತ್ತಿ ಮರವೆಂದರೆ ಯಾರಿಗೆ ಪ್ರೀತಿ ಪಾತ್ರವಾದುದು? | .................. |
| 11. ಮೊದಲಾಳ್ವಾರ್ ಪಾಶುರದಲ್ಲಿ ಯಾವ ಜಾತ್ರೆಯ ಸಂಭ್ರಮದ ವಿವರವಿದೆ? | .................. |
| 12.ಸೂರ್ಯನಾರಾಯಣ ವಿಗ್ರಹದ ಎತ್ತರ ಎಷ್ಟು ? | .................. |
| 13.ವಿಷ್ಣುತೀರ್ಥರು ಎಷ್ಟು ವರ್ಷ ಬಾಳಿದರು? | .................. |
| 14. ಯಾವ ರೂಪದಿಂದ ಆಘ್ರಾಣಿಸುತ್ತಾನೆ? | .................. |
| 15. ಮೂರನೇ ಕಣ್ಣು ಯಾವುದು? | .................. |

| | |
|---|---|
| ಹೆಸರು :<br>ಚಂದಾ ಸಂಖ್ಯೆ:<br>ತಂದೆಯ ಹೆಸರು :<br>ತಾಯಿಯ ಹೆಸರು : | ವಿಳಾಸ :<br><br>ದೂರವಾಣಿ ಸಂಖ್ಯೆ: |



# ಸ್ತೋತ್ರವನ್ನು ಕಲಿಯೋಣ

## ಭಾವಾರ್ಥ ಸಹಿತ ಶ್ರೀಭಾರತೀಶ ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ



**ಶ್ರೀಭೀಮಶೇನ ಬಕ ಮುಖ್ಯ ಸುರಾರಿ ಹಂತ ಶ್ರೀಕೃಷ್ಣ ವ್ಯಾಸ**
**ಪದ ಪಂಕಜ ಸೇವಕಾಂಕ್ಷೇ!**
**ಸೌಗಂಧಿಕಾಹರಣ ವಿಘ್ನ ವಿಘಾತಕಾರಿನ್ ಶ್ರೀ ಭಾರತೀಶ**
**ಮಮ ದೇಹಿ ಕರಾವಲಂಬಮ್ ॥8॥**

ಬಕಾಸುರನೇ ಮೊದಲಾದ ಅಸುರರ ಸಂಹಾರಕರಾದ, ಭೀಮಸೇನರೇ, ಶ್ರೀಕೃಷ್ಣ, ವೇದವ್ಯಾಸರ ಪಾದಕಮಲಗಳ ಸೇವಾಕಾಂಕ್ಷಿಗಳಾದ, ಸೌಗಂಧಿಕಾ ಅಪಹಾರಕರಾದ, ವಿಘ್ನಗಳನ್ನು ಪರಿಹರಿಸುವ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.




ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು


ಶಿವ, ಶಿವನ ಅಭಿಷೇಕ, ಭೀಷ್ಮ, ಯುಗಾದಿ, ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.

ಚಿತ್ರಕಥೆ

# ಮಾರ್ಕಂಡೇಯ

ಕಥೆ : ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ಶ್ರೀಸ್ವಾಮಿ




ಆಯುಷ್ಯ ಮುಗಿಯಿತೆಂದು ಯಮಭಟರು ಮಾರ್ಕಂಡೇಯನ ಬಳಿಗೆ ಬಂದರು.
ಶಿವಭಕ್ತನಾದ ಈ ಬಾಲಕನನ್ನು ಮುಟ್ಟಲು ಕೂಡಾ ಕಷ್ಟವಾಗಿದೆ !
ಹೌದು... ಹೋಗಿ ಯಮರಾಜನಿಗೆ ವಿಷಯ ಹೇಳೋಣ!
ಯಮಭಟರು ವಿಷಯವನ್ನು ಯಮರಾಜನಿಗೆ ಹೇಳಿದರು. ಯಮರಾಜನೇ ಸ್ವತಃ ಬಂದು ಶಿವಧ್ಯಾನದಲ್ಲಿ ಇರುವ ಮಾರ್ಕಂಡೇಯನ ಮೇಲೆ ಪಾಶವನ್ನು ಪ್ರಯೋಗಿಸಿದನು.
ನನ್ನ ಪಾಶಕ್ಕೆ ಸಿಗಲಿಲ್ಲವೇ ಈ ಬಾಲಕ...
ಪರಮೇಶ್ವರಾ ! ಪಾಹಿ ಮಾಂ ಪಾಹಿ
ಮಾರ್ಕಂಡೇಯನು ಶಿವಲಿಂಗವನ್ನು ತಬ್ಬಿಕೊಂಡನು...
ಶಿವಾ! ಶಂಕರಾ! ಮೃತ್ಯುಂಜಯ! ಕಾಪಾಡು ತಂದೆ
ಶಿವಲಿಂಗದಿಂದ ಶಿವನು ಪ್ರತ್ಯಕ್ಷನಾದನು....
ಯಮ ! ನನ್ನ ಭಕ್ತರಿಗೆ ಅಡ್ಡಿ ಮಾಡಬೇಡ
ಶಿವಾ! ಶರಣು..ಶರಣು
ಹಾಗೆಯೇ ತಂದೆ
ಮಾರ್ಕಂಡೇಯ ಚಿರಂಜೀವಾ !
ಮಾರ್ಕಂಡೇಯ ಶಿವನನ್ನು ಸ್ತುತಿಸಿದನು
ಹರ ಹರ ಮಹಾದೇವ ಶಂಭೋ ಶಂಕರ!
ಶುಭಂ

ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ)

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./
ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರಬಯಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು ತಿರುಪತಿ - 517 507".
ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್ ನಂಬರ್: 0877-2264359, 0877-2264543

ತಿರುಮಲ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.





## 01-01-2023 ರಿಂದ 05-01-2023 ರ ವರೆಗೆ ನಡೆದ ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ತೆಪ್ಪೋತ್ಸವಗಳು



## ತೊಂಡಮನಾಡು

### ಶ್ರೀದೇವಿ ಭೂದೇವಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

2023 ಫೆಬ್ರವರಿ 20 ರಿಂದ 2023 28 ರ ವರೆಗೆ

**20-02-2023 ಸೋಮವಾರ**
ಹಗಲು: ಧ್ವಜಾರೋಹಣ,
ರಾತ್ರಿ: ಶೇಷವಾಹನ

**21-02-2023 ಮಂಗಳವಾರ**
ರಾತ್ರಿ: ಹಂಸವಾಹನ

**22-02-2023 ಬುಧವಾರ**
ರಾತ್ರಿ: ಸಿಂಹವಾಹನ

**23-02-2023 ಗುರುವಾರ**
ರಾತ್ರಿ: ಹನುಮದ್ವಾಹನ

**24-02-2023 ಶುಕ್ರವಾರ**
ರಾತ್ರಿ: ಗರುಡವಾಹನ

**25-02-2023 ಶನಿವಾರ**
ಸಾ॥ ಕಲ್ಯಾಣೋತ್ಸವ
ರಾತ್ರಿ: ಗಜವಾಹನ

**26-02-2023 ಭಾನುವಾರ**
ರಾತ್ರಿ: ಚಂದ್ರಪ್ರಭವಾಹನ

**27-02-2023 ಸೋಮವಾರ**
ಹಗಲು: ತಿರುಚ್ಚಿ ಉತ್ಸವ, ರಥೋತ್ಸವ
ರಾತ್ರಿ: ಅಶ್ವವಾಹನ

**28-02-2023 ಮಂಗಳವಾರ**
ಹಗಲು: ಚಕ್ರಸ್ನಾನ,
ರಾತ್ರಿ: ಧ್ವಜಾವರೋಹಣ.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-01-2023 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment
No. PMGK/RNP/WPP-04(6)/2021-2023" Posting on 20th of Every Month



# ತಿರುಪತಿ
# ಶ್ರೀ ಕಪಿಲೇಶ್ವರಸ್ವಾಮಿಯವರ
# ಬ್ರಹ್ಮೋತ್ಸವಗಳು
## 2023 ಫೆಬ್ರವರಿ 11 ರಿಂದ 20 ರ ವರೆಗೆ